
ಸಾಹಿತ್ಯ ದಾಸೋಹ – ೨೧೬

ಸಂಚಿಕೆ ೪೦ – ಸೆಪ್ಟೆಂಬರ್ ೨೦೨೩

೨೬.೦೮.೨೦೨೩ರ ದಾಸೋಹದ ಬರಹಗಳ ಸಂಕಲನ

ಗಣಪನ ಪಯಣ
ಸಾಹಿತ್ಯ
ದಾಸೋಹದೆಡೆಗೆ



ಸಮನ್ವಯ ಸಮಿತಿ * ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ನಮ್ಮೆಲ್ಲರ ಗುರುಗಳಾದ ಪ್ರಾ. ಎಚ್ಚೆಸ್ಕೆಯವರ 104ನೆಯ ಜನ್ಮದಿನದಂದು ಅಂದರೆ 26, ಆಗಸ್ಟ್ 2023ರಂದು 'ನೋಡಿಯೋ ಸಾಹಿತ್ಯ ವೇದಿಕೆ'ಯಲ್ಲಿ ನಡೆದ 216ನೆಯ ಸಾಹಿತ್ಯ ದಾಸೋಹದ ಪ್ರಸ್ತುತಿಗಳು ಹಾಗೂ ಕಾರ್ಯಕ್ರಮ ವರದಿಯನ್ನೊಳಗೊಂಡ ಸಂಚಿಕೆಯನ್ನು ತಮಗೆ ಒಪ್ಪಿಸಲು ಹರ್ಷಿಸುತ್ತೇವೆ.

9ನೆಯ ಸೆಪ್ಟೆಂಬರ್ 2023ರಂದು ಮೈಸೂರಿನಲ್ಲಿರುವ ಪ್ರಾ.ಎಚ್ಚೆಸ್ಕೆಯವರ ಮನೆಯಲ್ಲಿ ನಡೆದ 'ಎಚ್ಚೆಸ್ಕೆ ಬದುಕು–ಬರಹ–ಸಂದರ್ಶನ ಕೃತಿಯ ಅವಲೋಕನ' ಪುಸ್ತಕದ ಬಿಡುಗಡೆಯ ಕಾರ್ಯಕ್ರಮದ ವರದಿಯೂ ಇದರೊಂದಿಗಿದೆ.

ಈ ಬಾರಿಯ ಮತ್ತೊಂದು ವಿಶೇಷವೆಂದರೆ ನಮ್ಮ ವೇದಿಕೆಯು ಆಗಸ್ಟ್ 14ರಿಂದ ಸೆಪ್ಟೆಂಬರ್ 17ರವರೆಗಿನ ಶ್ರಾವಣ ಮಾಸದಲ್ಲಿ 'ಸಣ್ಣ ಕತೆಗಳ ಶ್ರಾವಣ' ಎಂಬ ಅಭಿಯಾನವನ್ನು ಹಮ್ಮಿಕೊಂಡಿತ್ತು. ಈ ಅಭಿಯಾನದಲ್ಲಿ ನಮ್ಮ ನಿರೀಕ್ಷೆಗೂ ಮೀರಿ 57 ಕತೆಗಾರರು ಒಟ್ಟು 158 ಸಣ್ಣ ಕತೆಗಳನ್ನು ರಚಿಸಿ, ಹೊಸ ದಾಖಲೆ ನಿರ್ಮಿಸಿದ್ದಾರೆ. ಈ ಕುರಿತ ಒಂದು ವರದಿ ಹಾಗೂ ಅಭಿಯಾನದಲ್ಲಿ ಪಾಲ್ಗೊಂಡ ಕತೆಗಾರರು ಹಾಗೂ ಅವರು ಪ್ರಸ್ತುತಪಡಿಸಿದ ಕತೆಗಳ ಶೀರ್ಷಿಕೆಗಳ ಪಟ್ಟಿಯನ್ನು ಸಹ ಈ ಸಂಚಿಕೆಯಲ್ಲಿ ನೀಡಲಾಗಿದೆ. ಅಭಿಯಾನದಲ್ಲಿ ಉತ್ಸಾಹದಿಂದ ಭಾಗವಹಿಸಿದ ಎಲ್ಲ ಕತೆಗಾರರಿಗೂ ಅಭಿನಂದನೆಗಳು.

216ನೆಯ ಸಾಹಿತ್ಯ ದಾಸೋಹದಲ್ಲಿ ತಮ್ಮ ವಿವಿಧ ಬರಹಗಳನ್ನು ಪ್ರಸ್ತುತಪಡಿಸಿದ ಎಲ್ಲಾ ದಾಸೋಹಿಗಳಿಗೂ, ದಾಸೋಹದ ಅಧ್ಯಕ್ಷತೆವಹಿಸಿ ಎಲ್ಲಾ ಪ್ರಸ್ತುತಿಗಳನ್ನು ವಿಶ್ಲೇಷಿಸಿ ತಮ್ಮ ಅನಿಸಿಕೆಗಳನ್ನು ಬರಹ ರೂಪದಲ್ಲಿ ನೀಡಿದ ಶ್ರೀ ಕೆ.ಎನ್. ಮಹಾಬಲ ಅವರಿಗೂ ನಮ್ಮ ಕೃತಜ್ಞತೆಗಳು.

ಸಾಹಿತ್ಯ ದಾಸೋಹ ಹಾಗೂ ಮೈಸೂರಿನಲ್ಲಿ ನಡೆದ ಕೃತಿ ಬಿಡುಗಡೆ ಕಾರ್ಯಕ್ರಮಗಳನ್ನು ನಿರ್ವಹಿಸಲು ಸಹಕರಿಸಿದ ಶ್ರೀ ಗುರುಪ್ರಸಾದ್ ಹಾಲ್ಕುರಿಕೆ, ಗುರುರಾಜ ಶಾಸ್ತ್ರಿ, ಶ್ರೀಮತಿ ರೇಣುಕಾ ದೇಸಾಯಿ, ರಾಧಿಕಾ ಗುಜ್ಜರ್ ಹಾಗೂ ಈ ಸಂಚಿಕೆಯನ್ನು ರೂಪಿಸಿದ ಶ್ರೀ ಎಸ್.ಶೃಂಗೇಶ್ವರ ಶರ್ಮ ಅವರಿಗೂ. ಧನ್ಯವಾದಗಳು.

ಈ ಸಂಚಿಕೆಯ ಬಗ್ಗೆ ಓದುಗರ ಸಲಹೆ, ಅಭಿಪ್ರಾಯಗಳಿಗೆ ಸದಾ ಸ್ವಾಗತ.

ಧನ್ಯವಾದಗಳೊಂದಿಗೆ.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು 23.09.2023

ದಾಸೋಹದ ಪುಟಗಳಲ್ಲಿ ...


ಮುಖಚಿತ್ರ : ‘ಗಣಪನ ಪಯಣ ಸಾಹಿತ್ಯ ದಾಸೋಹದೆಡೆಗೆ’ ಹಾಗೂ ಗಣಪನ ಇತರ ಚಿತ್ರಗಳು
ಚಿತ್ರಕೃಪೆ : ಮಾಸ್ಟರ್ ಕಲೆಕ್ಷನ್ ಆಫ್ ಗಣೇಶ ಪುಸ್ತಕ – ಸಂಗ್ರಹಕಾರರು: ಶ್ರೀ ರಾಜೇಶ್ ಚಂದಕ್

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 216

ಕಾರ್ಯಕ್ರಮ ವರದಿ: ಎಸ್.ಶೃಂಗೇಶ್ವರ ಶರ್ಮ

216ನೇ ಸಾಹಿತ್ಯ ದಾಸೋಹವು, ಪ್ರಾಚಾರ್ಯ ಎಚ್ಚೆಸ್ಕೆಯವರ 104ನೆಯ ಹುಟ್ಟುಹಬ್ಬದ ದಿನವಾದ 26ನೆಯ ಆಗಸ್ಟ್ 2023ರಂದು ಶನಿವಾರ ಮಧ್ಯಾಹ್ನ 3.30ಕ್ಕೆ ಗೂಗಲ್ ಮೀಟ್ ಅಂತರಜಾಲ ವೇದಿಕೆಯಲ್ಲಿ ನಡೆಯಿತು. ವೇದಿಕೆಯ ಸಂಚಾಲಕರು ಹಾಗೂ ಹಿರಿಯ ಸದಸ್ಯರೂ ಆದ ಶ್ರೀ ಕೆ.ಎನ್.ಮಹಾಬಲ ಅವರು ದಾಸೋಹದ ಅಧ್ಯಕ್ಷತೆ ವಹಿಸಿದ್ದರು.



ಆರಂಭದಲ್ಲಿ ಶ್ರೀ ವಿಠ್ಠಲ್ ಇಜೇರಿಯವರು ಎಲ್ಲರನ್ನೂ ಸ್ವಾಗತಿಸಿ, ಅಧ್ಯಕ್ಷತೆ ವಹಿಸಿರುವ ಶ್ರೀ ಕೆ.ಎನ್. ಮಹಾಬಲ ಅವರನ್ನು ಪರಿಚಯಿಸಿದರು. ಸಮನ್ವಯ ಸಮಿತಿ ಕನ್ನಡವೇ ಸತ್ಯ ಹಾಗೂ ಸಾಹಿತ್ಯ ದಾಸೋಹದ ಸಂಚಾಲಕರು, ಬಹಳ ಹಿಂದೆಯೇ ಬ್ಯಾಂಕುಗಳಲ್ಲಿ ಕನ್ನಡದ ಕಹಳೆ ಊದಿದ ಪ್ರಮುಖರಲ್ಲಿ ಒಬ್ಬರಾದ ಮಹಾಬಲರು ಈ ವೇದಿಕೆಗೆ ಅಪರಿಚಿತರೇನಲ್ಲ. ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಅವರು ನಾಡಿನ ಖ್ಯಾತ ಕವಿ ಕೆ.ಎಸ್. ನರಸಿಂಹಸ್ವಾಮಿಯವರ ಪುತ್ರರು ಎಂಬುದು ಹೆಮ್ಮೆಯ ವಿಷಯ. ಸ್ವತಃ ಸೃಜನಶೀಲ ಬರಹಗಾರರೂ, ಕವಿಯೂ, ಅನೇಕ ಸಾಹಿತ್ಯಾಸಕ್ತರಿಗೆ ಮಾರ್ಗದರ್ಶಕರೂ ಆಗಿರುವ ಮಹಾಬಲರು, 'ಇಂದೂ ಇದ್ದಾರೆ' (ಕವನ ಸಂಕಲನ), 'ಬೊಗಸೆ ತುಂಬ ಹೂಗಳು' (ಸುನೀತಗಳ ಸಂಗ್ರಹ), 'ಹಾಸ್ಯ ಬಂಧು' (ಹಾಸ್ಯ ಬರಹಗಳ ಸಂಕಲನ), 'ವಿಘಟನೆ' (ಕಥಾ ಸಂಕಲನ) ಹಾಗೂ 'ಕೆ.ಎಸ್.ನ. ನೆನಪುಗಳು' ಕೃತಿಗಳನ್ನು ರಚಿಸಿದ್ದಾರೆ. ಚಿತ್ತಾಲರ ಕತೆಗಳ ವಿಮರ್ಶೆಗಾಗಿ ಇವರಿಗೆ ಸಂಚಯ ಸಾಹಿತ್ಯ ಪ್ರಶಸ್ತಿ ಲಭಿಸಿದೆ. ಸಾಹಿತ್ಯಿಕ ಕಾರ್ಯಕ್ರಮಗಳ ಸಂಘಟನೆ ಮತ್ತು ನಿರ್ವಹಣೆಯಲ್ಲಿ ವಿಶೇಷ ಆಸಕ್ತಿ ಹೊಂದಿರುವ ಮಹಾಬಲರು ಸುಮಾರು 35-40 ವರ್ಷಗಳಿಂದ ನಮ್ಮ ವೇದಿಕೆಯ ವಿವಿಧ ಕಾರ್ಯಕ್ರಮಗಳಲ್ಲಿ ಸದಾ ಲವಲವಿಕೆಯಿಂದ ಭಾಗವಹಿಸಿ ಅಪಾರ ಕೊಡುಗೆ ನೀಡಿದ್ದಾರೆ ಎಂದು ಹೇಳಿದ ಶ್ರೀ ವಿಠ್ಠಲ ಇಜೇರಿಯವರು ಕಾರ್ಯಕ್ರಮಕ್ಕೆ ಶ್ರೀ ಕೆ.ಎನ್. ಮಹಾಬಲರನ್ನು ಸ್ವಾಗತಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು, ಈ ವೇದಿಕೆಗೆ ಭದ್ರ ಬುನಾದಿ ಹಾಕಿಕೊಟ್ಟ ಪ್ರಾಚಾರ್ಯ ಎಚ್ಚೆಸ್ಕೆಯವರ 104ನೆಯ ಜನ್ಮದಿನದಂದು ಈ ಸಾಹಿತ್ಯ ದಾಸೋಹವನ್ನು ನಡೆಸಲಾಗುತ್ತಿದೆ ಎಂದು ಹೇಳಿ, ವೇದಿಕೆಯ ಎಲ್ಲರ ಪರವಾಗಿ ಪ್ರಾ.ಎಚ್ಚೆಸ್ಕೆಯವರಿಗೆ ನಮನಗಳನ್ನು ಅರ್ಪಿಸಿದರಲ್ಲದೆ, ಚಂದ್ರಯಾನ-3ರ ಮೂಲಕ ದೂರದಲ್ಲಿ ಕಾಣುವ ಚಂದ್ರನ ಅಂಗಳದಲ್ಲಿ ನಮ್ಮ ಭಾರತದ ಉಪಗ್ರಹವನ್ನು ಯಶಸ್ವಿಯಾಗಿ ಇಳಿಸಿದ ದೇಶದ ಬಾಹ್ಯಾಕಾಶ ವಿಜ್ಞಾನಿಗಳಿಗೆ ವೇದಿಕೆಯ ಅಭಿನಂದನೆಗಳನ್ನು ಸಲ್ಲಿಸಿದರು.

ಸಸಕಸ ವೇದಿಕೆಯ ವಿವಿಧ ಕಾರ್ಯಕ್ರಮಗಳ ಬಗ್ಗೆ ಮಾತನಾಡಿದ ಶ್ರೀ ರವೀಂದ್ರ ಅವರು, ಈವರೆಗೆ ನಡೆದ ಒಟ್ಟು 216 ದಾಸೋಹಗಳ ಪೈಕಿ, ಇಂದಿನದು ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಅಂತರ್ಜಾಲ ಮುಖೇನ ನಡೆಯುತ್ತಿರುವ 83ನೆಯ ಕಾರ್ಯಕ್ರಮವಾಗಿದೆ. ಆಗಸ್ಟ್ 16ರಿಂದ ಆರಂಭವಾಗಿರುವ 'ಸಣ್ಣ ಕಥಾ ಶ್ರಾವಣ' ಅಭಿಯಾನದಲ್ಲಿ ಈಗಾಗಲೇ 50ಕ್ಕೂ ಹೆಚ್ಚು ಕತೆಗಳು ಪ್ರಕಟವಾಗಿದ್ದು, ಇನ್ನು ಕೆಲವೇ ದಿನಗಳಲ್ಲಿ 100 ಕತೆಗಳ ಗುರಿಯನ್ನು ನಾವು ದಾಟಲಿದ್ದೇವೆ. ಕತೆಗಳ ನಾಗಾಲೋಟ ಹೀಗೆಯೇ ಮುಂದುವರಿದರೆ ಅಭಿಯಾನದ ಮುಕ್ತಾಯದ ವೇಳೆಗೆ ಒಟ್ಟು ಕತೆಗಳ ಸಂಖ್ಯೆ 150ನ್ನೂ ತಲುಪಬಹುದು ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದರು. ಈ ಅಭಿಯಾನಕ್ಕೆ ಪೂರ್ವಭಾವಿಯಾಗಿ ಆಯೋಜಿಸಿದ್ದ ಕಥಾ ಕಮ್ಮಟದಲ್ಲಿ 41 ಜನ ಅಧಿಕೃತವಾಗಿ ಭಾಗವಹಿಸಿರುವುದು ಹೆಮ್ಮೆಯ ಸಂಗತಿ. ಹೀಗೆ ನಮ್ಮ ಎಲ್ಲಾ ಕಾರ್ಯಕ್ರಮಗಳಿಗೂ ಅಭೂತಪೂರ್ವ ಬೆಂಬಲ ನೀಡುತ್ತಿರುವ ವೇದಿಕೆಯ ಸದಸ್ಯರ ಸಾಹಿತ್ಯಿಕ ಉತ್ಸಾಹವನ್ನು ಶ್ಲಾಘಿಸಿದರು. ಇದಲ್ಲದೆ, ವೇದಿಕೆಯ ಸದಸ್ಯರಾದ ಪದ್ಮಾ ಆನಂದ್ ಅವರು ಮೈಸೂರಿನಲ್ಲಿ ಸೆಪ್ಟೆಂಬರ್ 10ರಂದು ಶ್ರೀ ಸಂತೋಷಕುಮಾರ್ ಮೆಹಂದಳೆ ಅವರ ನೇತೃತ್ವದಲ್ಲಿ 'ಕಥಾಯಾನ' ಎಂಬ ಶಿಬಿರವನ್ನು ಏರ್ಪಡಿಸುತ್ತಿರುವುದು ಅಭಿನಂದನೀಯ ಎಂದರು. ವೇದಿಕೆಯ ಸದಸ್ಯರಾದ ಶ್ರೀಮತಿ ಶಾಂತಿ ವಾಸು ಅವರ 'ಬಾಲ್ಯ ಕಾಣೆಸದ ಕನ್ನಡಿ' ಎಂಬ ಕೃತಿ ಇತ್ತೀಚೆಗೆ ಬಿಡುಗಡೆಯಾಗಿದ್ದು, ಇದರಲ್ಲಿ ಪ್ರಾ.ಎಚ್ಚೆಸ್ಕೆಯವರ ಬರಹಗಳನ್ನು ಕುರಿತ ಐದು ಲೇಖನಗಳನ್ನು ಅಳವಡಿಸಿರುವುದಕ್ಕೆ ರವೀಂದ್ರ ಅವರು ಸಂತಸ ವ್ಯಕ್ತಪಡಿಸಿದರು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಸ್ಥಾಪನೆ: ಕಳೆದ ಇಪ್ಪತ್ತು ವರ್ಷಗಳಿಂದ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು ಅನೌಪಚಾರಿಕ ವೇದಿಕೆಯಾಗಿತ್ತು. ವೇದಿಕೆಯ ಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸುವ ದೃಷ್ಟಿಯಿಂದ 'ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ' ಎಂಬ ಪ್ರತಿಷ್ಠಾನವನ್ನು ಇತ್ತೀಚೆಗೆ ನೋಂದಾವಣೆ ಮಾಡಿರುತ್ತೇವೆ. ಪ್ರತಿಷ್ಠಾನವು ಹಲವಾರು ಹೊಸ ಯೋಜನೆಗಳನ್ನು ರೂಪಿಸಲು ಉದ್ದೇಶಿಸಿದ್ದು, ಆ ಬಗ್ಗೆ ಕ್ರಮೇಣ ತಿಳಿಸಲಾಗುವುದು ಎಂದು ಹೇಳಿದ ರವೀಂದ್ರ, ವೇದಿಕೆಯ ಅನೌಪಚಾರಿಕ ಚಟುವಟಿಕೆಗಳು ಹೀಗೆಯೇ ಮುಂದುವರಿಯಲಿವೆ ಎಂದೂ ತಿಳಿಸಿದರು.

ಇದೇ ಸಂದರ್ಭದಲ್ಲಿ, ವೇದಿಕೆಯ ಹಿರಿಯ ಸದಸ್ಯರಾದ ಶ್ರೀ ಎನ್.ಶಂಕರರಾವ್ ಅವರು ಬರೆದು, ತಮ್ಮ ಪತ್ನಿ ಗಾಯತ್ರಿ ಅವರಿಗೆ ಶ್ರದ್ಧಾಂಜಲಿ ರೂಪದಲ್ಲಿ ಅರ್ಪಿಸಿರುವ 'ಸರು – ಬಾಳ ತುಮುಲದ ಕಥೆಗಳು' ಎಂಬ ಕಥಾ ಸಂಕಲನವನ್ನು ಬಿಡುಗಡೆ ಮಾಡಲಾಯಿತು. ಶ್ರೀ ಜಿ.ವಿ.ಅರುಣ ಅವರು ತಮ್ಮ 'ಸ್ನೇಹದ ನುಡಿ'ಗಳ ಮೂಲಕ ಕೃತಿಯನ್ನು ಪರಿಚಯಿಸಿದರು. ಶ್ರೀ ಗುರುರಾಜ ಶಾಸ್ತ್ರಿಯವರು ತಮ್ಮ ತಂತ್ರಜ್ಞಾನವನ್ನು ಬಳಸಿ ಅಂತರ್ಜಾಲದ ಮೂಲಕ ವಿಶಿಷ್ಟ ಹಾಗೂ ಆಕರ್ಷಕ ರೀತಿಯಲ್ಲಿ ಕೃತಿಯನ್ನು ಲೋಕಾರ್ಪಣೆಗೊಳಿಸಿದರು. ಒಟ್ಟು 19 ಕತೆಗಳಿರುವ ಈ ಕೃತಿಯನ್ನು ರಕ್ಷಣ್ ಪಬ್ಲಿಕೇಷನ್ ಅವರು ಪ್ರಕಟಿಸಿದ್ದಾರೆ.

ನಂತರ ಒಟ್ಟು ಹದಿನೆಂಟು ದಾಸೋಹಿಗಳು ತಮ್ಮ ಸ್ವರಚಿತ ಲೇಖನ, ಕವನ ಮುಂತಾದ ವಿವಿಧ ಪ್ರಸ್ತುತಿಗಳನ್ನು ಓದಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ.ಎನ್.ಮಹಾಬಲ ಅವರು ಈ ಎಲ್ಲ ಪ್ರಸ್ತುತಿಗಳನ್ನು ವಿಶ್ಲೇಷಿಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ 'ಸಾಹಿತ್ಯ ದಾಸೋಹ 215' ರ ಪ್ರಸ್ತುತಿಗಳನ್ನೊಳಗೊಂಡ ಪಿಡಿಎಫ್ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಶ್ರೀ ಹು.ವಾ.ಶ್ರೀಪ್ರಕಾಶ್ ಅವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು. ಶ್ರೀಮತಿ ರೇಣುಕಾ ದೇಸಾಯಿಯವರು ಕಾರ್ಯಕ್ರಮ ನಿರ್ವಹಿಸಿದರೆ ಶ್ರೀಮತಿ ರಾಧಿಕಾ ಗುಜ್ಜಾರ್ ಅವರು ಕಾರ್ಯಕ್ರಮದ ತಾಂತ್ರಿಕ ನಿರ್ವಹಣೆ ಮಾಡಿದರು.

(ಸಮನ್ವಯ ಸಮಿತಿ ಸಾಹಿತ್ಯ ದಾಸೋಹದ ಯುಟ್ಯೂಬ್‌ನಲ್ಲಿ ಇಡೀ ಕಾರ್ಯಕ್ರಮ ನೋಡಲು ಲಭ್ಯವಿದೆ)


***

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

'ಎಚ್ಚೆಸ್ಕೆ ಬದುಕು–ಬರೆಹ–ಸಂದರ್ಶನ'
ಕೃತಿಯ ಅವಲೋಕನ ಗ್ರಂಥದ ಬಿಡುಗಡೆ ಸಮಾರಂಭ

ಕಾರ್ಯಕ್ರಮ ವರದಿ: ರವಿ ಕುಸಬಿ

ತೋಟದಲ್ಲಿ ಕೆಲವೊಂದು ಹೂಗಳು, ಅವು ಹಾಗೆಯೇ. ಅವುಗಳನ್ನು ಕೊಯ್ದ ನಂತರವೂ ಅವುಗಳ ಪರಿಮಳ ತೋಟದಲ್ಲಿ ಹರಡಿರುತ್ತದೆ. ಅವುಗಳು ಇಲ್ಲದ್ದವು ಎಂಬುದನ್ನು ಆ ಪರಿಮಳ ಸಾರಿ ಸಾರಿ ಹೇಳುತ್ತದೆ. ಅದರಂತೆ ವಿಜ್ಞಾನದಲ್ಲೂ ಕೂಡ ನ್ಯೂಟನ್, ಐನ್‌ಸ್ಟೀನ್ ಅಂಥವರು ಬಂದು ಹೋದರು. ನೂರಾರು ವರ್ಷ ಅವರು ಮಾಡಿದ ಕಾರ್ಯವನ್ನು ವಿಜ್ಞಾನದ ಬಂಟರು ಇಂದಿಗೂ ನೆನೆಸುತ್ತಿರುತ್ತಾರೆ. ಅಂತೆಯೇ ಕನ್ನಡ ಸಾಹಿತ್ಯ ಹಾಗೂ ಬ್ಯಾಂಕಿಂಗ್ ಕ್ಷೇತ್ರಕ್ಕೆ ನಮ್ಮೆಲ್ಲರ ಅಚ್ಚುಮೆಚ್ಚಿನ ಪ್ರಾಚಾರ್ಯ ಎಚ್ಚೆಸ್ಕೆ ಅವರ ಕೊಡುಗೆ, ಅವರ ಕಾರ್ಯದ ಘಮಲು ನಮ್ಮೆಲ್ಲರನ್ನೂ ನೆನಪಿಸುತ್ತಿರುತ್ತದೆ.



ದಿನಾಂಕ 09, ಸೆಪ್ಟೆಂಬರ್ 2023 ಶನಿವಾರ ಸಂಜೆ 4:00ಘಂಟೆ. ಮೈಸೂರಿನ ಮಧ್ಯೆ ಇದ್ದರೂ ಮೈಸೂರಿನ ಗಜಿಬಿಜಿಯಲ್ಲೂ ಮಡಿಯಿಂದ ದೂರ ನಿಂತಿರುವಂತಿರುವ ಸರಸ್ವತಿಪುರಂ ಬಡಾವಣೆ ಶಾಂತವಾಗಿತ್ತು. ಬಿಸಿಲ ಧಗೆ ಆಗದಿರಲಿ ಎಂದು ಮಳೆರಾಯ ಆಗಾಗ ಅಂಗಳಕ್ಕೆ ನೀರು ಹಾಕುವಂತೆ ಸುರಿದು ಇಡೀ ಬಡಾವಣೆಯನ್ನು ಶುಭ್ರಗೊಳಿಸಿದ್ದ. ಹೆಚ್ಚಾಗಿ ವಾಹನಗಳ ಓಡಾಟ ಅಷ್ಟಾಗಿ ಇರದಿದ್ದರಿಂದ ಗಾಳಿಯಲ್ಲಿ ಯಾವುದೋ ರೀತಿಯ ಹೊಸತನವಿತ್ತು. ೮೦ರ ದಶಕದಲ್ಲಿ ಪ್ರಾಯೋಗಿಕ ರಂಗಮಂದಿರಕ್ಕೆ ಸ್ಫೂರ್ತಿಕೊಟ್ಟು ಮೆರೆದ ಸಮತೆಂತೋ (ಸರಸ್ವತಿಪುರಂ ಮಧ್ಯದ ತೆಂಗಿನ ತೋಪು) ಪಕ್ಕದಲ್ಲಿ ಮಲಗಿ ತಂಗಾಳಿ ಬೀಸುತ್ತಿತ್ತು.

ಇವೆಲ್ಲದರ ಮಧ್ಯೆ ನೆಲೆಸಿರುವ ಎಚ್ಚೆಸ್ಕೆ ಅವರ ಮನೆಯಲ್ಲಿ ನಮ್ಮ ಕಾರ್ಯಕ್ರಮ ಆರಂಭವಾಯಿತು. ಅದೊಂದು ಅತ್ಯಂತ ಸರಳ ಕಾರ್ಯಕ್ರಮವಾಗಿತ್ತು.

ಪ್ರಾ.ಎಚ್ಚೆಸ್ಕೆ ಅವರ ಜೀವನ ಕೃತಿಗಳ ಪರಿಚಯ ಮತ್ತು ಚಿಂತನೆಗಳನ್ನು ಕೃತಿ ರೂಪದಲ್ಲಿ ಹೊರತರಬೇಕೆಂಬ ಸಮನ್ವಯ ಸಮಿತಿ ಕನ್ನಡವೇ ಸತ್ಯ (ಸಸಕಸ) ವೇದಿಕೆಯ ಹಂಬಲಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಎಚ್ಚೆಸ್ಕೆಯವರ ನಿಕಟವರ್ತಿಗಳೂ, ಹಿರಿಯ ವಿದ್ವಾಂಸರೂ ಆದ ಡಾ.ಪ್ರಧಾನ ಗುರುದತ್ತರು, ಎರಡು ವರ್ಷಗಳ ಕಾಲ ತಮ್ಮ ಪರಿಶ್ರಮ, ಪ್ರತಿಭೆಗಳನ್ನು ಧಾರೆಯೆರೆದು ರಚಿಸಿದ 'ಎಚ್ಚೆಸ್ಕೆ ಬದುಕು–ಬರಹ–ಸಂದರ್ಶನ' ಎಂಬ ಐನೂರು ಪುಟಗಳ ಬೃಹತ್ ಹೊತ್ತಿಗೆಯನ್ನು 11, ಮಾರ್ಚ್ 2023ರಂದು ಸಸಕಸ ವೇದಿಕೆಯ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆದ ಅಭೂತಪೂರ್ವ ಸಮಾರಂಭದಲ್ಲಿ ಬಿಡುಗಡೆ ಮಾಡಲಾಗಿತ್ತು. ಇದನ್ನು ಪ್ರಕಟಿಸಿದವರು ನಾಡಿನ ಪ್ರಮುಖ ಪ್ರಕಾಶನ ಸಂಸ್ಥೆಯಾದ ಸಪ್ನಾ ಬುಕ್ ಹೌಸ್.

ತದನಂತರ ಏಪ್ರಿಲ್ 21 ರಿಂದ ಮೇ 5 ರವರೆಗಿನ ಅವಧಿಯಲ್ಲಿ ಸಸಕಸ ವೇದಿಕೆಯು 'ಎಚ್ಚೆಸ್ಕೆ ಬದುಕು–ಬರಹ–ಸಂದರ್ಶನ' ಕೃತಿಯ ಅವಲೋಕನ ಅಭಿಯಾನವನ್ನು ನಡೆಸಿತು. ಈ ಅಭಿಯಾನಕ್ಕೆ ಸ್ಪಂದಿಸಿದ ವೇದಿಕೆಯ ಹತ್ತೊಂಬತ್ತು ಸದಸ್ಯರು ಕೃತಿಯನ್ನು ವಸ್ತುನಿಷ್ಠವಾಗಿ ಅವಲೋಕಿಸಿ ಅಭಿಯಾನವನ್ನು ಅರ್ಥಪೂರ್ಣವಾಗಿಸಿದರು. ಈ ಎಲ್ಲಾ ಹತ್ತೊಂಬತ್ತು ಬರಹಗಳನ್ನೂ ಒಳಗೊಂಡ 'ಎಚ್ಚೆಸ್ಕೆ ಬದುಕು–ಬರಹ–ಸಂದರ್ಶನ ಕೃತಿಯ ಅವಲೋಕನ' ಗ್ರಂಥದ ಬಿಡುಗಡೆ ಸಮಾರಂಭವನ್ನು ಮೈಸೂರಿನ ಸರಸ್ವತಿಪುರಂನಲ್ಲಿರುವ, ಪ್ರಾ.ಎಚ್ಚೆಸ್ಕೆಯವರು ಬಾಳ ಬದುಕಿದ ಮನೆಯಲ್ಲಿಯೇ ಅತ್ಯಂತ ಸರಳವಾಗಿ ಏರ್ಪಡಿಸಲಾಗಿತ್ತು.

ಬಡಾವಣೆಯ ಮಧ್ಯದಲ್ಲಿರುವ ಮನೆ. ಸಿರಿವಂತಿಕೆಯ ಸೋಂಕಿಲ್ಲದಿದ್ದರೂ ಮನಕ್ಕೆ ಮುದಕೊಡುವ ನಿವಾಸವಾಗಿತ್ತು. ಅದು ಕನ್ನಡ ಸಾರಸ್ವತ ಲೋಕಕ್ಕೆ ಬೃಹತ್ ಕೊಡುಗೆ ನೀಡಿದ ಪ್ರಾಚಾರ್ಯರ ತಪೋಭೂಮಿಯಾಗಿತ್ತು. ಅದರ ಮೊದಲ ಮಹಡಿಯಲ್ಲೇ ನಮ್ಮ ಪುಸ್ತಕ ಅನಾವರಣದ ಸ್ಮರಣೀಯ ಕಾರ್ಯಕ್ರಮ ಸಜ್ಜುಗೊಂಡಿತ್ತು. ಶ್ರೀಯುತ ಪ್ರಧಾನ ಗುರುದತ್ ಮತ್ತು ಅವರ ಶ್ರೀಮತಿಯವರು, ಪ್ರಾ. ಎಚ್ಚೆಸ್ಕೆಯವರ ಮಗ ಶ್ರೀ ಎಚ್.ಕೆ.ಪಾರ್ಥಸಾರಥಿ, ಸಸಕಸ ವೇದಿಕೆಯ ಪ್ರಧಾನ ಸಂಚಾಲಕ ಶ್ರೀ ಬೆಂ.ಶ್ರೀ.ರವೀಂದ್ರ ಇವರು ವೇದಿಕೆಯನ್ನು ಅಲಂಕರಿಸಿದ್ದರು. ಮುಂದಿನ ಎರಡು ಸಾಲುಗಳಲ್ಲಿ ಹಾಕಿದ ಕುರ್ಚಿಗಳಲ್ಲಿ ಬೆಂಗಳೂರಿನಿಂದ ಹೋದವರು ಹಾಗೂ ಮೈಸೂರಿನಿಂದ ಬಂದಂತಹ ಪತ್ರಿಕಾ ಬಾತ್ಮೀದಾರರು ವಿರಾಜಮಾನರಾಗಿದ್ದರು. ಆ ಪುಟ್ಟ ಹಾಲ್ ಜನರಿಂದ ತುಂಬಿ ತುಳುಕಿತ್ತು. (ಯಾಕೆಂದರೆ ಫೋಟೋ ತೆಗೆಯುತ್ತಿದ್ದ ನಾನು ಹಾಲಿನಿಂದ ಹೊರಗೆ ಬಂದು ಪಕ್ಕದಲ್ಲೆ ಇಟ್ಟಿದ್ದ ಸಮೋಸಾಗಳ ಘಮಘಮ ವಾಸನೆ ಸವಿಯುತ್ತ ನಿಲ್ಲಬೇಕಾಯ್ತು).

ಕುಮಾರಿ ಶ್ರೀಗೌರಿ ಅವರ ಚೆಂದದ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪ್ರಾಸ್ತಾವಿಕದಲ್ಲಿ ಮಾತನಾಡಿದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಎಚ್ಚೆಸ್ಕೆ ಅವರ ಕಾರ್ಯಗಳ ಬಾಹುಳ್ಯ, ಅವರ ಕಾರ್ಯಶ್ರದ್ಧೆ, ಕೆಲಸದ ಮೇಲಿನ ಪ್ರೀತಿ ಹಾಗೂ ಜೀವನದಲ್ಲಿ ಅವರು ಅಳವಡಿಸಿಕೊಂಡ ಶಿಸ್ತು ಇವುಗಳನ್ನೆಲ್ಲ ಉದಾಹರಣೆಸಹಿತ ಸಭೆಗೆ ಪರಿಚಯಿಸಿದರು. ನಾಡಿನಾದ್ಯಂತ ಅವರ ನಾಯಕತ್ವದಲ್ಲಿ ನಡೆಸಿದ ಕನ್ನಡದಲ್ಲಿ ಬ್ಯಾಂಕಿಂಗ್ ಕಮ್ಮಟಗಳ ಸವಿನೆನಪುಗಳನ್ನು ಮೆಲುಕುಹಾಕಿದರು. ಅವರ ನೆನಪಿನ ಓಟವನ್ನು ಕಾಲದ ಮಿತಿಗೆ ಕಟ್ಟುಬಿದ್ದು ಕೆಲವೊಂದು ಮಾತುಗಳಲ್ಲಿ ಹೇಳಿ ಮುಗಿಸಿದರು. ನಮ್ಮಂತಹ ಕುರುಡರಿಗೆ ಆನೆಯ ಪರಿಚಯ ಮಾಡಿಸಿದರು.



ಪುಸ್ತಕದ ಲೋಕಾರ್ಪಣೆ (ಎಡದಿಂದ ಬಲಕ್ಕೆ): ಗುರುರಾಜ ಶಾಸ್ತ್ರಿ, ಧೀರೇಂದ್ರ, ಗುರುಪ್ರಸಾದ್ ಹಾಲ್ಕುರಿಕೆ, ಬೆಂ.ಶ್ರೀ.ರವೀಂದ್ರ, ಎಚ್.ಕೆ.ಪಾರ್ಥಸಾರಥಿ, ಡಾ.ಪ್ರಧಾನ ಗುರುದತ್

ನಂತರ ಶ್ರೀ ಪ್ರಧಾನ ಗುರುದತ್ ಅವರು 'ಎಚ್ಚೆಸ್ಕೆ ಬದುಕು ಬರಹ ಸಂದರ್ಶನ ಕೃತಿಯ ಅವಲೋಕನ'ದ ಪುಸ್ತಕವನ್ನು ಲೋಕಾರ್ಪಣೆ ಮಾಡಿದರು.



ಶ್ರೀ ಎಚ್.ಕೆ. ಪಾರ್ಥಸಾರಥಿಯವರಿಂದ ಡಾ. ಪ್ರಧಾನ ಗುರುದತ್ತರಿಗೆ ಗೌರವಾರ್ಪಣೆ

ಎಚ್ಚೆಸ್ಕೆ ಅವರ ಒಡನಾಡಿಯಾಗಿದ್ದು ಅವರ ಆಗುಹೋಗುಗಳನ್ನು ಚೆನ್ನಾಗಿ ಅರಿತಿದ್ದ ಡಾ. ಪ್ರಧಾನ ಗುರುದತ್ತರು ಮಾತನಾಡಿ ಎಚ್ಚೆಸ್ಕೆ ಅವರ ಜೊತೆಗೆ ನಡೆದ ಕೆಲವೊಂದು ಘಟನೆಗಳನ್ನು ಸ್ಮರಿಸಿದರು. ಅವರು 'ಸುಧಾ' ವಾರಪತ್ರಿಕೆಯಲ್ಲಿ ಬರೆಯುತ್ತಿದ್ದ 'ವಾರದಿಂದ ವಾರಕ್ಕೆ' ಹಾಗೂ 'ವ್ಯಕ್ತಿ ವಿಶೇಷ' ಅಂಕಣಗಳು ನಾಡಿನ ಸಮಸ್ತ ಸಾರಸ್ವತ ಲೋಕಕ್ಕೆ ನೀಡಿದ ಅದ್ಭುತ ಕೊಡುಗೆಯ ಬಗ್ಗೆ ಪದ ಪದಗಳಲ್ಲಿ ವಿವರಿಸಿದರು. ಎಚ್ಚೆಸ್ಕೆ ಅವರ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ ಹಾಗೂ ಬದುಕಿನ ಬಗ್ಗೆ ಅವರಿಗಿದ್ದ ಪ್ರೀತಿಯನ್ನು ನೆನೆದು ಭಾವುಕರಾದರು.

ತಂದೆಯನ್ನು ನೆನೆಯುತ್ತ ಮಾತಾಡಿದ ಶ್ರೀ ಪಾರ್ಥಸಾರಥಿಯವರು, ಅವರು ದಿನವೂ ಚಾಚೂತಪ್ಪದೆ ನಡೆಸುತ್ತಿದ್ದ ಕೆಲಸಗಳು ಹಾಗೂ ಆಸ್ಪತ್ರೆಯಲ್ಲಿದ್ದಾಗಲೂ ತಪ್ಪದೆ ನಡೆಸಿಕೊಂಡು ಹೋಗುತ್ತಿದ್ದ ಬರವಣಿಗೆಗಳ ಬಗ್ಗೆ ಸಭೆಗೆ ತಿಳಿಸಿಕೊಟ್ಟರು. ಅವರು ಕಾಲವಾಗಿ ಇಷ್ಟು ದಿನಗಳಾದರೂ ಅವರ ಶಿಷ್ಯರು ಅವರನ್ನು ನೆನೆದು ನಡೆಸುತ್ತಿರುವ ಈ ಕಾರ್ಯಕ್ರಮಕ್ಕೆ ಧನ್ಯವಾದಗಳನ್ನು ಸಮರ್ಪಿಸಿದರು. ಮಕ್ಕಳಾದ ಅವರೆಲ್ಲ ತಂದೆಯ ಶಿಸ್ತನ್ನು ಪಾಲಿಸಿದ್ದರೂ, ಅವರ ಕಟ್ಟುನಿಟ್ಟಿನ ಜೀವನ ಕ್ರಮವನ್ನು ಪಾಲಿಸಲಾಗಲಿಲ್ಲ ಎಂದು ತಂದೆಯನ್ನು ನೆನೆದು ವ್ಯಥೆಪಟ್ಟರು.

ಈ ಮೂರೂ ಜನರ ಮಾತುಗಳಿಂದ ಎಚ್ಚೆಸ್ಕೆ ಅವರ ಅಗಾಧ ವ್ಯಕ್ತಿತ್ವದಲ್ಲಿ ಐವತ್ತು ಭಾಗವಾದರೂ ಸಮಾರಂಭದಲ್ಲಿದ್ದ ಜನರಿಗೆ ಕಲ್ಪನೆಯಲ್ಲಿ ಮೂಡಿಸಿಕೊಳ್ಳಲು ಸಾಧ್ಯವಾಗಿತ್ತು. ಯಾಕೆಂದರೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಲವರಿಗೆ ಎಚ್ಚೆಸ್ಕೆ ಅವರನ್ನು ನೋಡುವ ಅವಕಾಶ ಸಿಕ್ಕಿರಲೇ ಇಲ್ಲ. ನಂತರ ಪ್ರಧಾನ ಗುರುದತ್ತ ಅವರಿಗೆ ಸಮನ್ವಯ ಸಮಿತಿ ವೇದಿಕೆಯಿಂದ ಹಾಗೂ ಎಚ್ಚೆಸ್ಕೆ ಕುಟುಂಬ ವರ್ಗದವರಿಂದಲೂ ಸನ್ಮಾನಿಸಲಾಯಿತು.


ಡಾ. ಪ್ರಧಾನ ಗುರುದತ್ತರಿಗೆ ವೇದಿಕೆಯ ಪರವಾಗಿ ಶ್ರೀ ಗುರುಪ್ರಸಾದ್ ಹಾಲ್ಕುರಿಕೆ ಅವರಿಂದ ಸನ್ಮಾನ

"ಎಚ್ಚೆಸ್ಕೆ ಪುಸ್ತಕವನ್ನು ನನಗೆ ಬಿಡುಗಡೆ ಮಾಡಲಾಗಿಲ್ಲವಲ್ಲ ಎಂದು ನೊಂದುಕೊಂಡಿದ್ದೇನೆ" ಎಂದು ಸಂಸ್ಕೃತಿ ಸುಬ್ರಹ್ಮಣ್ಯ ಅವರು ಕೂಡ ವೇದಿಕೆಯಲ್ಲಿ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು ಮತ್ತು ಸ.ಸ.ಕ.ಸ. ವೇದಿಕೆಯ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತಾವು ಸದಾ ಬೆನ್ನೆಲುಬಾಗಿ ನಿಲ್ಲುವುದಾಗಿ ಹೇಳಿದರು.



ಮೈಸೂರಿನ ಸರಸ್ವತಿಪುರಂನಲ್ಲಿರುವ ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಅವರ ನಿವಾಸದಲ್ಲಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಏರ್ಪಡಿಸಿದ್ದ ಎಚ್ಚೆಸ್ಕೆ ಬದುಕು-ಬರಹ-ಸಂದರ್ಶನ ಗ್ರಂಥದ ಪುಸ್ತಕಾವಲೋಕನ ಕೃತಿಯನ್ನು ಮೈಸೂರು ವಿವಿ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಪ್ರಧಾನ ಗುರುದತ್ತ ಲೋಕಾರ್ಪಣೆಗೊಳಿಸಿದರು. ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಬೆಂ.ಶ್ರೀ.ರವೀಂದ್ರ, ಗುರುರಾಜ ಶಾಸ್ತ್ರಿ, ಕಾದಂಬರಿಕಾರ ಸಂತೋಷ್ ಕುಮಾರ್ ಮೆಹಂದಳೆ, ಎಚ್.ಎಲ್.ಗುರುಪ್ರಕಾಶ್, ಸುದರ್ಶನ್, ಎಚ್ಚೆಸ್ಕೆ ಅವರ ಪುತ್ರ ಪಾರ್ಥಸಾರಥಿ ಮುಂತಾದವರು ಚಿತ್ರದಲ್ಲಿದ್ದಾರೆ.

'ಭಾಷೆ, ವಿಷಯ ಪ್ರಸ್ತುತಿ ಅರಿತಿದ್ದ ಎಚ್‌ಎಸ್‌ಕೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಭಾಷೆಯ ಅರಿವು ಹಾಗೂ ವಿಷಯ ಪ್ರಸ್ತುತಿಯ ಕಲೆಯು ಎಚ್‌ಎಸ್‌ಕೆ ಅವರಿಗೆ ಸಿದ್ಧಿಸಿದ್ದವು. ಹೀಗಾಗಿ ಅವರು ಬರಹದ ಮೂಲಕ ಜನಸಾಮಾನ್ಯರನ್ನು ಸುಲಭವಾಗಿ ತಲುಪಿದ್ದರು' ಎಂದು ಸಾಹಿತಿ ಪ್ರಧಾನ ಗುರುದತ್ತ ಹೇಳಿದರು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನವು ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಮ್ಮ 'ಎಚ್‌ಎಸ್‌ಕೆ ಬದುಕು, ಬರಹ, ಸಂದರ್ಶನ' ಗ್ರಂಥದ ಕುರಿತ ಪುಸ್ತಕಾವಲೋಕನ ಕೃತಿಯನ್ನು ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಎಚ್‌ಎಸ್‌ಕೆ ಕನ್ನಡ ಭಾಷೆಯ ಬಗ್ಗೆ ಅಪಾರ ನಿಷ್ಠೆ ಹೊಂದಿದ್ದರು. ಬ್ಯಾಂಕಿಂಗ್ ಹಾಗೂ ವಿಶ್ವಕೋಶದ ವಿಭಾಗದಲ್ಲಿ ಕನ್ನಡ ಪದ ಬಳಕೆಯ ಕೊರತೆಯಿದ್ದಾಗ ಅದಕ್ಕಾಗಿ ಕೆಲಸ ಮಾಡಿದ್ದರು. ಅವರಲ್ಲಿದ್ದ ಮಾಹಿತಿಯ ಕಣಜದಿಂದಾಗಿ ಕಿರು ಅಥವಾ ದೀರ್ಘ ಲೇಖನಗಳು ಪರಿಪೂರ್ಣತೆಯಿಂದ ಕೂಡಿರುತ್ತಿದ್ದವು. ಅವರು 'ಪ್ರಜಾವಾಣಿ'ಯಲ್ಲಿ ಬರೆಯುತ್ತಿದ್ದ ವ್ಯಕ್ತಿಚಿತ್ರ ಓದಿ ಪಾಸಾಗಿದ್ದೇನೆ ಎಂದು ಐಎಎಸ್ ಅಧಿಕಾರಿಯಾಗಿದ್ದ ಶಿವರಾಂ ಅವರು ಹೇಳಿದ್ದರು' ಎಂದು ನೆನೆದರು.

'ಕನ್ನಡದ ಅದ್ಭುತ ಸಾಹಿತಿಯ ಬರಹಗಳು ಮತ್ತೆ ಮುನ್ನೆಲೆಗೆ ಬರಲು ಶ್ರಮಿಸುತ್ತಿರುವ ಸಮನ್ವಯ ಸಮಿತಿಯ ಕಾರ್ಯವು ಚರಿತ್ರಾರ್ಹವಾದದು. ನಾನು ಬರೆದಿದ್ದ ವಿಮರ್ಶಾ ಗ್ರಂಥದ ಕುರಿತು 20 ಲೇಖಕರು ಲೇಖನ ಬರೆದಿರುವುದು ಸಂತಸದ ವಿಚಾರ. ಈ ರೀತಿಯ ಪ್ರಯತ್ನ ಸಾಹಿತ್ಯ ಲೋಕದಲ್ಲಿ ವಿನೂತನವಾದುದು' ಎಂದರು.

'ಎಚ್‌ಎಸ್‌ಕೆ ಅವರ ಪ್ರಬಂಧಗಳನ್ನು ಆಡಿಯೊ ಆಗಿ ತರುವ ಪ್ರಯತ್ನ ನಡೆಯುತ್ತಿದೆ. ಇದು ಸಾಧ್ಯವಾದಲ್ಲಿ ಸಾಹಿತ್ಯ ವಲಯದಲ್ಲಿ ಮತ್ತೊಂದು ಐತಿಹಾಸಿಕ ಕಾರ್ಯ ಆಗಲಿದೆ. ಪುಸ್ತಕ ಓದಲು ಸಾಧ್ಯವಾಗದೇ ಇರುವವರನ್ನೂ ಲೇಖಕ ತಲುಪಲು ಶ್ರವ್ಯ ಮಾಧ್ಯಮದಿಂದ ಸಾಧ್ಯ' ಎಂದು ತಿಳಿಸಿದರು.

ಸಾಹಿತಿ ಎಂ.ರವೀಂದ್ರ, ಸೀತಮ್ಮ ಗುರುದತ್ತ, ಎಚ್‌ಎಸ್‌ಕೆ ಅವರ ಪುತ್ರ ಪಾರ್ಥಸಾರಥಿ ಇದ್ದರು.



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಚ್‌ಎಸ್‌ಕೆ ಬದುಕು, ಬರಹ, ಸಂದರ್ಶನ ಗ್ರಂಥದ ಕುರಿತ ಪುಸ್ತಕಾವಲೋಕನ ಕೃತಿಯನ್ನು ಸಾಹಿತಿ ಪ್ರಧಾನ ಗುರುದತ್ತ ಬಿಡುಗಡೆ ಮಾಡಿದರು. ಎಂ.ರವೀಂದ್ರ, ಸೀತಮ್ಮ ಗುರುದತ್ತ, ಪಾರ್ಥಸಾರಥಿ ಇದ್ದರು.

ಕೊನೆಯಲ್ಲಿ ಸಸಕಸ ವೇದಿಕೆಯ ಶ್ರೀಯುತ ಮಹಾಬಲ ಅವರು ವಂದನಾರ್ಪಣೆ ಮಾಡಿದರು. ಶ್ರೀ ಗುರುರಾಜ ಶಾಸ್ತ್ರಿ ಅವರು ಕಾರ್ಯಕ್ರಮ ನಿರೂಪಿಸಿದರು. ಎಚ್ಚೆಸ್ಕೆ ಕುಟುಂಬದವರು ತಿಂಡಿ ಕಾಫಿಯ ವಿತರಣೆಯನ್ನು ಮಾಡಿ ಅತಿಥಿ ಸತ್ಕಾರದಲ್ಲಿ ಮೆರೆದರು.

ಮೈಸೂರು ಎಂದರೆ ಪ್ರೀತಿಯಿಂದ ಓಡಿ ಹೋಗುವ ಬೆಂಗಳೂರಿಗರಾದ ನಾವು ಮೈಸೂರಿನ ಬೆರಗಿನಷ್ಟೇ ಅಂದವಾದ ಕಾರ್ಯಕ್ರಮವನ್ನು ಮುಗಿಸಿ, ಕೆಳಗೆ ರಸ್ತೆಗೆ ಬಂದೆವು. ಎಚ್ಚೆಸ್ಕೆ ಎಂಬ ಮಹಾನ್ ಚೇತನದ ಬಗ್ಗೆ ಡಾ.ಪ್ರಧಾನ ಗುರುದತ್ತರು ಬರೆದ ಕೃತಿ ಹಾಗೂ ಅದರ ಅವಲೋಕನದ ಬರಹಗಳನ್ನೊಳಗೊಂಡ ಪುಸ್ತಕ ಇವೆರಡೂ ಲೋಕಕ್ಕೆ ಸಮರ್ಪಣೆಯಾಗಿದ್ದನ್ನು ಸಾಧಿಸಿದ ತಂಡದ ಖುಷಿ ಹಾಜರಿದ್ದ ಪ್ರತಿಯೊಬ್ಬ ಸಸಕಸದ ಸದಸ್ಯರಲ್ಲಿ ಮನೆಮಾಡಿತ್ತು. ಬಂದ ಕಾರ್ಯವನ್ನು ಯಶಸ್ವಿಯಾಗಿ ಮುಗಿಸಿದ್ದ ನಮ್ಮ ಖುಷಿಯನ್ನು ನೋಡುತ್ತಾ ಸೂರ್ಯನು ಭೂತಾಯಿಯ ಒಡಲಿಗೆ ನಿಶ್ಚಿಂತೆಯಿಂದ ಸೇರಿಕೊಂಡ.


ನಿಷೆಯ ಆಳ್ವಿಕೆ ಆರಂಭವಾಯಿತು.

***

ಶ್ರೀ ಎನ್. ಶಂಕರ ರಾವ್ ವಿರಚಿತ

'ಸರೂ' ಕಥಾ ಸಂಕಲನ ಬಿಡುಗಡೆ

ವರದಿ: ಎಸ್. ಶೃಂಗೇಶ್ವರ ಶರ್ಮ



ಇದೊಂದು 'ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ'ಯಲ್ಲಿ ಅಂತರಜಾಲ ಮುಖೇನ ನಡೆದ ಅಪೂರ್ವ ಕಾರ್ಯಕ್ರಮ.

26, ಆಗಸ್ಟ್ 2023ರಂದು ನಡೆದ 216ನೆಯ ಸಾಹಿತ್ಯ ದಾಸೋಹದ ಸಂದರ್ಭದಲ್ಲಿ, ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಸದಸ್ಯರಾದ ಶ್ರೀ ಎನ್. ಶಂಕರರಾವ್ ಅವರ 'ಸರೂ' ಕಥಾ ಸಂಕಲನ ಬಿಡುಗಡೆಯಾಯಿತು. 'ಬಾಳ ತುಮುಲದ ಕಥೆಗಳು' ಎಂಬ ಟ್ಯಾಗ್ ಲೈನ್ ಹೊಂದಿರುವ ಈ ಕಥಾ ಸಂಕಲನವನ್ನು ಶ್ರೀ ಶಂಕರ ರಾವ್ ಅವರು ತಮ್ಮ ಪತ್ನಿ ಶ್ರೀಮತಿ ಗಾಯತ್ರಿ ಅವರಿಗೆ ಶ್ರದ್ಧಾಂಜಲಿ ರೂಪದಲ್ಲಿ ಅರ್ಪಿಸಿದ್ದಾರೆ. ರಕ್ಷಣ್ ಪಬ್ಲಿಕೇಷನ್ ಪ್ರಕಟಿಸಿರುವ ಈ ಕೃತಿಯಲ್ಲಿ ಒಟ್ಟು 19 ಕತೆಗಳಿದ್ದು, ಈ ಪೈಕಿ ಹಲವು ಕತೆಗಳು ಕರ್ಮವೀರ, ತರಂಗ, ತುಷಾರ ಮುಂತಾದ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ.

ಅಂತರ್ಜಾಲ ವೇದಿಕೆಯಲ್ಲಿ ಕೃತಿಯ ಬಿಡುಗಡೆಗಾಗಿ ವಿಶೇಷ ತಂತ್ರಜ್ಞಾನವನ್ನು ರೂಪಿಸಿದ್ದ ಶ್ರೀ ಗುರುರಾಜ ಶಾಸ್ತ್ರಿಯವರು, ದಾಸೋಹದ ನಡುವೆ ತಮ್ಮದೇ ಶೈಲಿಯ ವಿವರಣೆಯೊಂದಿಗೆ 'ಸರೂ' ಕಥಾ ಸಂಕಲನವನ್ನು ಲೋಕಾರ್ಪಣೆಗೊಳಿಸಿದರು. ಈ ಸಂಕಲನಕ್ಕೆ ಮುನ್ನುಡಿಯನ್ನು ಬರೆದಿರುವ ಶ್ರೀ ಜಿ.ವಿ.ಅರುಣ ಅವರು ದಾಸೋಹದ ವೇದಿಕೆಯಲ್ಲಿಯೂ ಮಾತನಾಡಿ, ತಮ್ಮ 'ಸ್ನೇಹದ ನುಡಿ'ಗಳನ್ನು ಹಂಚಿಕೊಂಡರು. ವೇದಿಕೆಯ ಸದಸ್ಯೆ ಶ್ರೀಮತಿ ರಾಧಿಕಾ ವಿ.ಗುಜ್ಜರ್ ಅವರು ಇದರಲ್ಲಿನ ಎಲ್ಲಾ ಕತೆಗಳನ್ನೂ ಅವಲೋಕಿಸಿ, ಸಂಕಲನದ ಪರಿಚಯ ಲೇಖನವನ್ನೂ, ಹಾಸ್ಯ ಸಾಹಿತಿ ಶ್ರೀ ವೈ.ವಿ.ಗುಂಡೂರಾವ್ ಅವರು ಬೆನ್ನುಡಿಯನ್ನೂ ಬರೆದಿದ್ದಾರೆ.

ಬಿಡುಗಡೆಯ ಸಂದರ್ಭದಲ್ಲಿ ಮಾತನಾಡಿದ ವೇದಿಕೆಯ ಪ್ರಧಾನ ಸಂಚಾಲಕ ಶ್ರೀ ಬೆಂ.ಶ್ರೀ.ರವೀಂದ್ರ ಅವರು 'ದಾರಿ ದೀಪವಾಗಿರುವ ಬರಹಗಳು' ಎಂಬ ಶೀರ್ಷಿಕೆಯಡಿಯಲ್ಲಿ ಕೃತಿಯಲ್ಲಿನ ವಿವಿಧ ಕತೆಗಳನ್ನು ವಿಶ್ಲೇಷಿಸಿದರು. ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ.ಎನ್. ಮಹಾಬಲ ಅವರು ಕೃತಿಯ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ, ಶ್ರೀ ಶಂಕರ ರಾವ್ ಅವರ ಸಾಹಿತ್ಯ, ಕಿರುಚಿತ್ರ, ನಾಟಕ ಮತ್ತಿತರ ಪ್ರತಿಭೆಗಳನ್ನು ಶ್ಲಾಘಿಸಿದರು. ಶ್ರೀ ಶಂಕರ ರಾವ್ ಅವರು ತಮ್ಮ ಕೃತಿ ಬಿಡುಗಡೆಯಲ್ಲಿ ಸಹಕರಿಸಿದ ಎಲ್ಲರಿಗೂ ವಂದಿಸಿದರು

ಒಟ್ಟಾರೆ 160 ಪುಟಗಳಿರುವ 'ಸರೂ' ಕಥಾ ಸಂಕಲನದ ಮುಖ ಬೆಲೆ ರೂ. 215/-. ಸದ್ಯದ ರಿಯಾಯಿತಿ ಬೆಲೆ ರೂ. 200/- (ಅಂಚೆ ವೆಚ್ಚವೂ ಸೇರಿ) ಪುಸ್ತಕ ಖರೀದಿಸಬಯಸುವವರು ಶ್ರೀ ಶಂಕರ ರಾವ್ ಅವರನ್ನು ಸಂಪರ್ಕಿಸಿ (ಮೊಬೈಲ್ ಸಂಖ್ಯೆ 8762692651)

***

ಕೃಷ್ಣನ ಬಾಲಲೀಲೆ ಕತೆಗಳು

– ವಿಠ್ಠಲ್ ಇಜೇರಿ

ದೇವಕಿ ಹೆತ್ತ ಮಗುವನ್ನು ಯಶೋದೆ ಲಾಲಿ ಹೇಳಿ ಬೆಳೆಸಿದಳು. ಕೃಷ್ಣ ಯಶೋದೆಗೆ ನೀಡಿದ ಲಾಲನೆ ಪಾಲನೆಯ ಸುಖದ, ಮಾಧುರ್ಯದ ಬಗ್ಗೆ ಸಾಕಷ್ಟು ಕಥೆಗಳಿವೆ. ಅವು ಮನರಂಜನೆಯೊಟ್ಟಿಗೆ ಆಧ್ಯಾತ್ಮದ ಅನುಭವವನ್ನೂ ನೀಡುತ್ತವೆ. ಹಾಗೆ ನೋಡಿದರೆ ಮಗುವಿಗೆ ಜನ್ಮ ನೀಡುವುದು ಬೇರೆ, ಮಗುವಿನ ಆಟಪಾಟಗಳಲ್ಲಿ ಮಗುವಾಗಿ ಭಾಗವಹಿಸಿ ಸಂತೋಷಪಡುವುದು ಬೇರೆ. ಜನ್ಮ ತಾಯಿ ನೀಡಿದರೆ, ಅಮ್ಮ ಮಗುವಿಗೆ ಲಾಲಿಸಿ, ಮುದ್ದುಗರೆದು ಬೆಳೆಸುತ್ತಾಳೆ. ಅಕ್ಕರೆಯಿಂದ ತಲೆ, ಬೆನ್ನು ಸವರಿ, ತನ್ನ ಮಡಿಲಲ್ಲಿ ಮಲಗಿಸಿ ಜೋಗುಳ ಹಾಡಿ ಬೆಳೆಸುತ್ತಾಳೆ. ಕೃಷ್ಣ ಗೋಕುಲದಲ್ಲಿ ಗೋಪಿಯರೊಡನೆ ಆಡಿದ ತುಂಟಾಟ ಅನನ್ಯವಾದುದು. ಗೋಪಿಯರು ದೇವರೊಡನೆ ಆಟ ಪಾಡುತ್ತ ಇಹದಲ್ಲಿಯೇ ಪರಮ ಸುಖ ಕಂಡರು. ಭದ್ರಗಿರಿ ಅಚ್ಯುತದಾಸರು ತಮ್ಮ ಹರಿಕಥೆಯಲ್ಲಿ ಬಾಲಕೃಷ್ಣನ ಕತೆಗಳನ್ನು ಸ್ವಾರಸ್ಯಪೂರ್ಣವಾಗಿ ಹೇಳುತ್ತಿದ್ದರು.

ಕೃಷ್ಣನ ಕುರಿತು ದಾಸರು ಹೇಳಿದ ಒಂದೆರಡು ಉದಾಹರಣೆಗಳು ಹೀಗಿವೆ:

ಯಶೋದೆ ಬೆಣ್ಣೆ ಕಡೆಯುವಾಗ ಆಗುವ ಬಳೆಗಳ ಶಬ್ದಕ್ಕೆ ಕೃಷ್ಣ ಬರುವನೆಂದು ಆಕೆ ಒಂದೊಂದೇ ಬಳೆ ಹಾಕಿಕೊಂಡಿದ್ದರೂ ಗಡಿಗೆಯಿಂದ ಬೆಣ್ಣೆ ತೆಗೆಯುವ ವೇಳೆಗೆ ಅದೇಗೋ ಕೃಷ್ಣ ಹಾಜರಾಗಿರುತ್ತಿದ್ದ. ಕೃಷ್ಣ ಮತ್ತು ಅವನ ಪಟಾಲಂ, ವಯಸ್ಸಾದ ಮುದುಕರು ಭರ್ಜರಿ ಊಟ ಮಾಡಿ ನಿದ್ರೆಯಲ್ಲಿರುವಾಗ ಅವರ ತಲೆಯ ಜುಟ್ಟು ಮಂಚದ ಕಾಲಿಗೆ ಕಟ್ಟಿ, ಬೆಂಕಿ ಬೆಂಕಿ ಎಂದು ಹುಯಿಲೇಬ್ಬಿಸುತ್ತಿದ್ದರು. ಗಾಬರಿಗೆ ಬಿದ್ದ ಮುದುಕರು ದಿಗ್ಗನೆ ಎದ್ದಾಗ ಜುಟ್ಟು ಮಂಚದ ಕಾಲಿಗೆ ಉಳಿದುಬಿಡುತ್ತಿತ್ತು. ನೋವಿನಿಂದ ತಲೆಗೆ ಕೈ ಹೊತ್ತು ಆ ಮುದುಕರು ಸತ್ತೆನೋ, ಕೆಟ್ಟೆನೋ ಎಂದು ಎದ್ದು ಓಡುತ್ತಿದ್ದರು. ಕೃಷ್ಣ ಬಿಸಿ ನೊರೆ ಹಾಲು ಕೇಳುತ್ತಿದ್ದ, ಯಶೋದೆ ಈಗಲೇ ಏನು ಅವಸರ ರಾತ್ರಿಯಾಗಲಿ, ಅಂದರೆ "ರಾತ್ರಿ ಹೇಗೆ ಗುರುತಿಸುವುದು?" ಎಂದು ಮರುಪ್ರಶ್ನೆ ಕೇಳುತ್ತಿದ್ದ. ಮಗನ ಪ್ರಶ್ನೆಗೆ ಬೇಸರವರಿಯದ ತಾಯಿ, "ರಾತ್ರಿ ಅಂದರೆ ಕತ್ತಲೆ, ಕಣ್ಣು ಕಾಣುವುದಿಲ್ಲ" ಎಂದು ಉತ್ತರಿಸುತ್ತಿದ್ದಳು. ಕೃಷ್ಣನಿಗೆ ಅದೇ ಕ್ಷಣ ರಾತ್ರಿಯಾಗುತ್ತಿತ್ತು. ಎರಡೂ ಕಣ್ಣು ಕೈಯಿಂದ ಮುಚ್ಚಿಕೊಂಡು "ಅಮ್ಮಾ, ಕಾಳಕತ್ತಲೆ, ಕಣ್ಣೇ ಕಾಣದು, ಹಾಲು ಕರೆದು ತಾ" ಅನ್ನುತ್ತಿದ್ದ.

ಇಂತಹ ಬಾಲ ಲೀಲೆಗಳೆಷ್ಟೋ?

ಆದರೆ ಎಲ್ಲ ಕೀರ್ತನಕಾರರ ಕಣ್ಣು ತಪ್ಪಿಸಿಕೊಂಡ ಬಾಲಕೃಷ್ಣನ ಜಾನಪದ ಕಥೆಯೊಂದು ಹೀಗಿದೆ:

ಕೃಷ್ಣನಿಗೆ ಗೋಕುಲದಲ್ಲಿ ಎಲ್ಲ ಗೋಪಿಯರ ಮನೆಗೂ ಮುಕ್ತ ಪ್ರವೇಶ. ಅವನಿಗೆ ಯಾವುದೇ ವೀಸಾ, ಪಾಸ್‌ಪೋರ್ಟ್, ಅಪ್ಪಣೆಗಳ ಅವಶ್ಯಕತೆ ಇರಲಿಲ್ಲ. ಅದೊಂದು ದಿನ ಬೆಳಗ್ಗೆ ಗೋಪಿಯೋರ್ವಳ ಮನೆಯೊಳಗೆ ಹೋಗಿ ಬೆಣ್ಣೆ ಕೇಳಿದ.

ಗೋಪಿ : ಬೆಣ್ಣೆ, ಎಲ್ಲಿಂದ ತರಲಿ, ನಮ್ಮಲ್ಲಿ ಇರೋದು ಒಂದೇ ಹಸು.

ಕೃಷ್ಣ : ಅದರ ಬೆಣ್ಣೆಯನ್ನೇ ಕೊಡು.

ಗೋಪಿ : ಇರುವುದೇ ಸ್ವಲ್ಪ ಬೆಣ್ಣೆ. ನಿನಗೆ ಕೊಟ್ಟರೆ, ನನ್ನ ಯಜಮಾನನಿಗೆ ಏನು ಹೇಳಲಿ?

ಕೃಷ್ಣ : ಅದೆಲ್ಲ ನನಗೆ ತಿಳಿಯದು ನನಗೆ ಬೆಣ್ಣೆ ಬೇಕು.

ಗೋಪಿ : ಬೆಣ್ಣೆ ಬೇಕೇ ಬೇಕು ಅನ್ನುವುದಾದರೆ, ನಮ್ಮ ಕೊಟ್ಟಿಗೆಯಲ್ಲಿಯ ಸಗಣಿ ಎತ್ತಿ ಹಾಕಿ ಬಾ, ಒಂದಿಷ್ಟು ಬೆಣ್ಣೆ ಕೊಡುವೆ.

ಕೃಷ್ಣ : (ಕೊಟ್ಟಿಗೆಗೆ ಹೋದವನು ಕೂಡಲೇ ಬಂದು) ಅಷ್ಟೊಂದು ಸಗಣಿ ಇದೆ, ಸಗಣಿ ಎತ್ತಿ ಹೊರಗೆ ಹಾಕುವೆ, ಒಂದೊಂದು ಬುಟ್ಟಿ ಎತ್ತಿ ಹಾಕಿದುದಕ್ಕೆ ಒಂದೊಂದು ಮುದ್ದೆ ಬೆಣ್ಣೆ ಕೊಡಬೇಕು.

ಗೋಪಿ : ಆಯಿತು ಕೊಡೋಣ, ಒಂದೊಂದು ಬುಟ್ಟಿ ಹೊರಗೆ ಹೋಗುತ್ತಲೇ ನಾನು ಲೆಖ್ಖ ಇಡುವೆ.

ಕೃಷ್ಣ : ಬೇಡ, ನಿನ್ನ ಲೆಖ್ಖ ಸರಿಯಾಗಿರುವುದಿಲ್ಲ, ನಾನೇ ಲೆಖ್ಖ ಇಡುವೆ. ಒಂದು ಬುಟ್ಟಿ ಹೊರಗೆ ಹೋಗುತ್ತಲೂ ಮುಖದ ಮೇಲೊಂದು ಸಗಣಿ ಬೊಟ್ಟು ಇಟ್ಟುಕೊಳ್ಳುವೆ, ಕೊನೆಯಲ್ಲಿ ಮುಖದ ಮೇಲಿನ ಸಗಣಿ ಬೊಟ್ಟು ಎಣಿಸಿ ಅಷ್ಟು ಬೆಣ್ಣೆ ಮುದ್ದೆ ಕೊಡಬೇಕು.

ಗೋಪಿ ಒಪ್ಪಿದಳು. ಕೃಷ್ಣ ಕೆಲಸ ಮುಗಿಸಿ ಗೋಪಿಯ ಮನೆಯೊಳಗೆ ಹೋದಾಗ ಅವನ ಮುಖದ ತುಂಬೆಲ್ಲ ಸಗಣಿಯ ಬೊಟ್ಟುಗಳಿದ್ದವು. ಗೋಪಿ ಎಣಿಸಿದಳು, ಒಟ್ಟು 21 ಬೊಟ್ಟುಗಳಿದ್ದವು. ಗೋಪಿ 21 ಚಿಕ್ಕ ಚಿಕ್ಕ ಬೆಣ್ಣೆ ಮುದ್ದೆ ತಂದಳು. ಕೃಷ್ಣ "ಹೂ ಹೂ, ಮೋಸ ಇಷ್ಟು ಚಿಕ್ಕ ಬೆಣ್ಣೆ ಮುದ್ದೆಗಳು, ಹೋಗು ಇನ್ನಷ್ಟು ಬೆಣ್ಣೆ ತೆಗೆದುಕೊಂಡು ಬಾ". ಗೋಪಿ ಕರಗಿ ಹೋದಳು, ಅವರಲ್ಲಿ ಇದುದೇ ಸ್ವಲ್ಪ ಬೆಣ್ಣೆ.

ಗೋಪಿ : ಇಲ್ಲ ಕೃಷ್ಣ ನಮ್ಮ ಕೊಟ್ಟಿಗೆಯಲ್ಲಿರುವುದು ಒಂದೇ ಹಸು. ಇದ್ದ ಬೆಣ್ಣೆಯಲ್ಲಿ ಈ ಮುದ್ದೆ ಮಾಡಿದ್ದೇನೆ, ಬೆಣ್ಣೆ ಇಷ್ಟೇ ಇದ್ದುದು.

ಕೃಷ್ಣ : ನನಗೆ ಇದು ಸಾಲದು, ಹೋಗು ಪಾತ್ರೆಯಲ್ಲಿ ಇನ್ನೊಮ್ಮೆ ನೋಡು.

ಗೋಪಿ ಒಳಗೆ ಹೋಗಿ ನೋಡಿದರೆ, ಸ್ವಲ್ಪ ಸಮಯದ ಮುಂಚೆ ಖಾಲಿ ಮಾಡಿದ ಆಕೆಯ ಪಾತ್ರೆ ಬೆಣ್ಣೆಯಿಂದ ತುಂಬಿತ್ತು. ಅದು ಕೃಷ್ಣನ ಮಹಿಮೆ.

***

ನಿನ್ನ ನೆನಪು

– ಜಾನಕಿರಾಮು

ನಿನ್ನ ನೆನಪಿಸುತಿರುವ ರಾತ್ರಿಗಿದು ಪ್ರಶ್ನೆಯಿದೆ
ಏಕಾಂಗಿತನವನೇಕೆ ಹೊತ್ತು ತರುವೆ
ರಕ್ತ ಸೋರುತಿದೆ ಮೊದಲೇ
ಹೃದಯದ ಕವಾಟದಲಿ
ಮತ್ತೆ ನೀನೇಕೆ ಸರಿ ಹಿಂಡಿ ಕೊಲುವೆ

ನಿನ್ನ ನೆನಪಿಸುತಲಿರುವ ತಿಳಿಗಾಳಿಗಿದು ಪ್ರಶ್ನೆ
ಗಾಳಿಗೋಪುರದರಿವ ಮೂಡಿಸಲೇಬೇಕೆ
ನಿನ್ನ ಜೊತೆಗಿನ ಕನಸು ನುಚ್ಚುನೂರಾಗಿಹ ಸಮಯ
ಒಡೆದ ಚೂರುಗಳೆತ್ತಿ ತೋರಲೇಬೇಕೆ

ನಿನ್ನ ನೆನಪನು ತರುವ ಹೂವುಗಳೆ ಕೇಳುವೆನು
ದಿನವೂ ರಂಗೋಲಿಯನು ಚೆಲ್ಲಲೇಬೇಕೆ
ಬಣ್ಣ ಮಾಸಿದ ನನ್ನ ಜನುಮವನು ನೋಡುತಲಿ
ನಗುವನರಳಿಸಿ ಇಂತು ನಿಲ್ಲಬೇಕೆ

ನಿನ್ನ ನೆನಪಿಸಿ ಕುಟುಕೊ ಸಮಯಕೇ ಮರುಪ್ರಶ್ನೆ
ಸಮಯಾಸಮಯ ಪರಿವೆ ನಿನಗೆ ಉಂಟೆ
ಪ್ರೀತಿ ತುಂಬಿದ ಹೃದಯ ನಿಲ್ಲಿಸಿದ ಕೆಡುಕನಿಗೆ
ನನ್ನ ಬದುಕಿಸುವಷ್ಟು ಸಮಯವುಂಟೆ

ನಿನ್ನ ನೆನಪಿಸುತಲಿರುವ ನಿನಗೇನೆ ಈ ಪ್ರಶ್ನೆ
ಹೊಟ್ಟೆಕಿಚ್ಚಲಿ ಮಿಂದ ಭಾವದಲ್ಲಿ
ನನಗಿಲ್ಲದಾನಂದ ಹೇಗೆ ನೀ ಪಡೆಯುತಿಹೆ
ಮತ್ತೆ ಮರಳಕೆ ಇರದ ನಾಡಿನಲ್ಲಿ

***

ಮೂಕ ಹಕ್ಕಿ

– ಅನ್ನಪೂರ್ಣ ಸುಬ್ಬರಾವ್

ಹುಣ್ಣಿಮೆಯ ರಾತ್ರಿಯಲಿ ಚಂದಿರನ ನೋಡುತ್ತ
ಕಣ್ಣುಗಳ ಇರುಕಿಸದೆ ಚುಕ್ಕಿಗಳ ಎಣಿಸುತ್ತ
ಬಣ್ಣ ಬಣ್ಣದ ಕನಸುಗಳ ಕಾಣುತ್ತ, ಚಿತ್ತ
ಹೊರಳುವ ಮುನ್ನ ನೀ ಬಂದೆದುರು ನಿಂತೆ...

ಜೊತೆಯಲಿ ಎಂದಿಗೂ ನಾನಿರುವೆನೆನುತ,
ಮಮತೆಯಲಿ ಬಿಗಿದಪ್ಪಿ ಭರವಸೆಯನಿತ್ತೆ
ಮಾತಿನಲಿ ಕೊರತೆ, ಮೌನದಲಿ ಒರತೆ
ಸೋತ ಭಾವವು ಸನಿಹ ಸುಳಿದಾಡದಂತೆ..

ಆಸರೆಯು ಬೇಕಿಹುದು ಇಂದಾದರೊಂದು ದಿನ
ಬೇಸರವ ಸರಿಸಿ ತಿಳಿಗೊಳಿಸು ಮನವನ್ನ
ನೇಸರನು ಸರಿದು ಮಬ್ಬು ಮುಸುಕುವ ಮುನ್ನ
ನೂಪುರದ ಸದ್ದೂ ಅಣಕವಾಡುವುದೆನ್ನ...

ಹಕ್ಕಿಗಳ ಚಿಲಿಪಿಲಿ ದೂರವಾಯಿತು ಸಾಗಿ
ಚುಕ್ಕಿ ಚಂದ್ರಮರು ಅಡಗಿ ಕೂತರು ಹೋಗಿ
ಹೆಕ್ಕಿ ತೆಗೆದ ಕನಸು ಕರಗಿಹೋಯಿತು ಸೊರಗಿ.
ರೆಕ್ಕೆ ಮುರಿದಂತಾಗಿ ಹಕ್ಕಿ ಮೂಕವಾಗಿ... ಹಾರದಾಗಿ...
ನೀ ಬಾರದಾಗಿ...!!

***

ಯತಿ

– ಗಣಪತಿ ಹೆಗಡೆ

'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಮುದ್ದಣ ಕಾವ್ಯನಾಮಕ ನಂದಳಿಕೆ ಲಕ್ಷ್ಮೀನಾರಣಪ್ಪ ಹೇಳಿದ ಮಾತು ಎಲ್ಲಾ ಸಾಹಿತ್ಯಾಸಕ್ತರಿಗೆ ತಿಳಿದಿರುವಂತದ್ದೇ ಆಗಿದೆ. ತುಂಬಾ ಪ್ರಸಿದ್ಧವಾದ ರಾಮಾಶ್ವಮೇಧವನ್ನು ಗದ್ಯದಲ್ಲಿಯೇ ರಚಿಸಿದ್ದರೂ, ಶ್ರೀರಾಮಪಟ್ಟಾಭಿಷೇಕಂ ಎನ್ನುವ ಪದ್ಯ ಕಾವ್ಯವನ್ನು ಷಟ್ಪದಿಯಲ್ಲಿಯೂ, ರತಿಕಲ್ಯಾಣ ಎನ್ನುವ ಯಕ್ಷಗಾನ ಸಾಹಿತ್ಯ ಕೃತಿಯನ್ನು ವಿವಿಧ ಪದ್ಯಪ್ರಕಾರಗಳ ಸಂಗಮದಂತೆಯೂ ರಚಿಸಿದ್ದು ಅವನ ಕುರಿತಾದ ಹೆಗ್ಗಳಿಕೆಯೇ ಸರಿ. ಆದ್ದರಿಂದ ಮುದ್ದಣನು ಕಾವ್ಯಪ್ರಕಾರಗಳಲ್ಲಿ ಪದ್ಯಕ್ಕಿಂತ ಗದ್ಯವೇ ಶ್ರೇಷ್ಠ ಅಂತ ಅಭಿಪ್ರಾಯ ಹೊಂದಿದ್ದಾನೆ ಅಂತ ಅಂತಿಮ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲ. ರಾಮಾಶ್ವಮೇಧ ಕೃತಿಯಲ್ಲಿ ಪ್ರಾಸಂಗಿಕವಾಗಿ ಅವನು ಹೇಳಿದ ಮಾತದು, ಅಷ್ಟೇ.

ಸಾಹಿತ್ಯವನ್ನು ಓದುವಾಗ ಬರವಣಿಗೆಯ ಶೈಲಿಯಿಂದಲೇ ಯಾವುದು ಗದ್ಯ, ಯಾವುದು ಪದ್ಯ ಅಂತ ಬರಹದ ಓಘವನ್ನು ನೋಡಿಯೇ ತಿಳಿಯಬಹುದು. ಗದ್ಯದಲ್ಲಿ ಶಬ್ದ ರಚನೆ ಹಾಗೂ ವಾಕ್ಯ ರಚನೆ ಒಂದು ನಿರ್ದಿಷ್ಟವಾದ ಅರ್ಥ ಸ್ಫುರಣ ಕ್ರಮದಲ್ಲಿ ಇರುತ್ತದೆ. ಅರ್ಥಪೂರ್ಣವಾದ ಅಕ್ಷರ ಸಮೂಹವನ್ನು ಶಬ್ದವೆಂತಲೂ, ಅರ್ಥಪೂರ್ಣವಾದ ಶಬ್ದ ಸಮೂಹವನ್ನು ವಾಕ್ಯವೆಂತಲೂ ಕರೆಯುತ್ತಾರೆ.

ಆದರೆ ಪದ್ಯದಲ್ಲಿ ಕೇವಲ ಅರ್ಥ ಸ್ಫುರಣೆಯಾದರೆ ಸಾಲದು. ಸಾಹಿತ್ಯದಲ್ಲಿ ಶಬ್ದಗಳೂ ಸಹಿತ ಒಂದು ನಿರ್ಧಿಷ್ಟವಾದ ಸಂಯೋಜನೆ ಅಥವಾ ಬಂಧದಿಂದ ಕೂಡಿರಬೇಕು. ಅನುಭವೀ ಸಾಹಿತಿಗಳು ಸಹಜವಾಗಿಯೇ ಈ ಬಂಧವನ್ನು ತಿಳಿದು ಪದ್ಯ ರಚಿಸುತ್ತಾರೆ. ಇಂತಹ ಪದ್ಯ ರಚನೆ ಹೇಗಿರಬೇಕು ಎಂದು ತಿಳಿಸುವ ಶಾಸ್ತ್ರವನ್ನು ಛಂದಸ್ಸು ಎಂದು ಕರೆಯತ್ತಾರೆ. ಛಂದಸ್ಸಿನ ಶಾಸ್ತ್ರದ ಪ್ರಕಾರ ರಚಿತವಾದ ಪದ್ಯವನ್ನು ಛಂದೋಬದ್ಧ ಪದ್ಯ ಎನ್ನುವರು. ಪದ್ಯದ ಓಘದಲ್ಲಿ ಏನಾದರೂ ನ್ಯೂನತೆ ಕಂಡುಬಂದಲ್ಲಿ ಪದ್ಯ ಛಂದೋಬದ್ಧವಾಗಿಲ್ಲ ಅಂತ ಹೇಳುವದನ್ನು ನಾವು ಕೇಳುತ್ತೇವೆ.

ಛಂದಶ್ಶಾಸ್ತ್ರವನ್ನು ಪ್ರಧಾನವಾಗಿ ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ

1. ಪ್ರಾಸ 2. ಯತಿ 3. ಗಣ

ಪ್ರಾಸ ಅಂದರೆ ಅಕ್ಷರಗಳಿಗೆ ಸಂಬಂಧಿಸಿದ್ದು, ಗಣ ಅಂದರೆ ಮಾತ್ರೆಗಳಿಗೆ ಸಂಬಂಧಿಸಿದ್ದು ಅಂತ ಸ್ಥೂಲವಾಗಿ ವಿಂಗಡಿಸಬಹುದು. ಪ್ರಾಸ ಹಾಗೂ ಗಣಗಳನ್ನು ನಾವು ವಿಶೇಷವಾಗಿ ಕನ್ನಡ ಕಾವ್ಯಗಳಲ್ಲಿ ಕಾಣುತ್ತೇವೆ. ಸಂಸ್ಕೃತ ಕಾವ್ಯಗಳಲ್ಲಿ 'ಪ್ರಾಸದ' ಬಳಕೆ ಇಲ್ಲ ಎನ್ನುವದು ವೈಯಾಕರಣಿಗಳ ಅಭಿಪ್ರಾಯ.

ನಾನು ಈ ಪ್ರಸ್ತುತಿಯಲ್ಲಿ 'ಯತಿಯ' ಬಗ್ಗೆ ಬರೆಯಲು ಅಪೇಕ್ಷಿಸುತ್ತೇನೆ.

"ಕಾವ್ಯವನ್ನು ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳವನ್ನು 'ಯತಿ' ಎಂದು ಗುರುತಿಸಲಾಗಿದೆ."

ಪ್ರಾಸ ಹಾಗೂ ಗಣಗಳ ಬಳಕೆಯನ್ನು ಗದ್ಯ ಸಾಹಿತ್ಯದಲ್ಲಿ ಕಾಣದೇ ಇದ್ದರೂ, 'ಯತಿ'ಯ ಬಳಕೆ ಗದ್ಯದಲ್ಲಿಯೂ ಇದೆ. ಒಂದೇ ಉಸುರಿಗೆ ಪೂರ್ತಿ ವಾಕ್ಯವನ್ನು ಓದಿ ಮುಗಿಸುವದು ಕಷ್ಟ. ಮಧ್ಯದಲ್ಲಿ ಉಸಿರು ತೆಗೆದುಕೊಳ್ಳಲು ಅಲ್ಲಲ್ಲಿ ಉಸಿರನ್ನು ತಡೆದುಕೊಳ್ಳಬೇಕಾಗುತ್ತದೆ. ಇದು ಒಂದೇ ಶಬ್ದದ ನಂತರವಾದರೂ ಆಗಬಹುದು ಅಥವಾ ಮೂರ್ನಾಲ್ಕು ಶಬ್ದಗಳ ನಂತರವಾದರೂ ಆಗಬಹುದು. ಈ ನಿಲುಗಡೆ ಸರಿಯಾದ ಸ್ಥಾನದಲ್ಲಿ ಇಲ್ಲದೇ ಇದ್ದಾಗ ಸರಿಯಾದ ಅರ್ಥವೇ ಸ್ಫುರಿಸುವದಿಲ್ಲ. (ನಿಲುಗಡೆ ಅಲ್ಪವಾದರೆ ಅಲ್ಪ ವಿರಾಮ, ದೀರ್ಘವಾದರೆ ಪೂರ್ಣ ವಿರಾಮ ಅನ್ನಬಹುದು).

'ರಮೇಶನು ಬೆಟ್ಟಗಳಲ್ಲಿ ಹರಿದಾಡುವ ಪ್ರಾಣಿಗಳ ಕಂಡನು'

ಇಲ್ಲಿ – *ರಮೇಶನು, ಬೆಟ್ಟಗಳಲ್ಲಿ ಹರಿದಾಡುವ ಪ್ರಾಣಿ. ಗಳ ಕಂಡನು.* ರಮೇಶನು ಎನ್ನುವಲ್ಲಿ ಅಲ್ಪವಿರಾಮವಾಗಿ, ಬೆಟ್ಟಗಳಲ್ಲಿ ಹರಿದಾಡುವ ಪ್ರಾಣಿ ಅಂತ ಒಂದೇ ಉಸುರಿಗೆ ಹೇಳಿ ನಿಲ್ಲಿಸಿದಲ್ಲಿ ರಮೇಶ ಎನ್ನುವವನು ಬೆಟ್ಟಗಳಲ್ಲಿ ಹರಿದಾಡುವ ಪ್ರಾಣಿ ಎಂತಲೂ, ಮತ್ತೂ ಅವನು 'ಗಳಕಂಡನು' ಅಂತಲೂ ಅರ್ಥವಾಗುತ್ತದೆ. ಈ ಅರ್ಥಸ್ಫುರಣ ಸರಿಯಾದದ್ದಲ್ಲ ಅಂತ ಯಾರಾದರೂ ಹೇಳಬಹುದು.

ಇನ್ನು, *'ರಮೇಶನು, ಬೆಟ್ಟಗಳಲ್ಲಿ ಹರಿದಾಡುವ ಪ್ರಾಣಿಗಳ, ಕಂಡನು.'* – ಈ ರೀತಿಯಿಂದ ನಿಲುಗಡೆಯಾದಲ್ಲಿ ಅರ್ಥವು ಸುಸಂಬದ್ಧವಾಗಿರುತ್ತದೆ. ಸಾಹಿತ್ಯದಲ್ಲಿ ಹೀಗೆ ಅರ್ಥಬದ್ಧವಾಗಿ ಉಸಿರು ನಿಲುಗಡೆಯ ಕ್ರಮವೇ 'ಯತಿ'.

ಈ ಎರಡು ವಾಕ್ಯಗಳನ್ನು ತೆಗೆದುಕೊಳ್ಳೋಣ:

'ಸರಕಾರೀ ಬಾಲಕಿಯರ ವಸತಿನಿಲಯ' – ಇಲ್ಲಿ ಉಸಿರಿನ ನಿಲುಗಡೆ ಎರಡು ರೀತಿಯಿಂದ ಇರಬಹುದು.

1. ಸರಕಾರೀ, ಬಾಲಕಿಯರ ವಸತಿನಿಲಯ.' 2. ಸರಕಾರೀ ಬಾಲಕಿಯರ, ವಸತಿನಿಲಯ.'

ಸರಕಾರೀ ಎನ್ನುವ ಶಬ್ದವಾದ ಮೇಲಿನ ನಿಲುಗಡೆ ಸರಿ.

'ಪರನಾರೀ ಸೋದರ ಬಾವ ಸಂಬಂಧ' ಎನ್ನುವ ವಾಕ್ಯದಲ್ಲಿ

1. 'ಪರನಾರೀ, ಸೋದರ ಬಾವ ಸಂಬಂಧ.'2. 'ಪರನಾರೀ ಸೋದರ, ಬಾವ ಸಂಬಂಧ.'

ಇಲ್ಲಿ ಪರನಾರಿ ಎನ್ನುವ ಶಬ್ದದ ನಂತರ ನಿಲುಗಡೆ ಸರಿ.

ಇವುಗಳಲ್ಲಿ, ಯತಿಯ ಸ್ಥಾನದ ಬದಲಾವಣೆಯಿಂದಾಗಿ ವಿಪರೀತ ಅರ್ಥವೇ ಹೊಳೆಯುತ್ತದೆ.

'ರಾವಣ ರಾಮ ಲಕ್ಷ್ಮಣರು ಅಣ್ಣ ತಮ್ಮಂದಿರು'

ಈ ವಾಕ್ಯವನ್ನು ತಡೆಯಿಲ್ಲದೆ ಓದುವಾಗ, ರಾಮಾಯಣವನ್ನು ತಿಳಿದ ಯಾರಿಗಾದರೂ ಈ ಮೂವರು ಅಣ್ಣ ತಮ್ಮಂದಿರಲ್ಲ, ವಾಕ್ಯ ಸರಿಯಿಲ್ಲ ಅಂತ ತಿಳಿಯುತ್ತದೆ. ಬದಲಿಗೆ, *ರಾವಣ* ಎನ್ನುವಲ್ಲಿ ಮಾತನ್ನು ನಿಲ್ಲಿಸಿ, *ರಾಮ ಲಕ್ಷ್ಮಣರು ಅಣ್ಣ ತಮ್ಮಂದಿರು* ಅಂತ ಬರೆದಲ್ಲಿ, ಯಾರೋ ರಾಮ ಲಕ್ಷ್ಮಣರು ಸಹೋದರರು ಅಂತ ರಾವಣನಲ್ಲಿ ಹೇಳಿದ್ದಾರೆ ಅಂತ ಗುರುತಿಸಬಹುದು.

ಈರೀತಿ, ರಾವಣ ಶಬ್ದದ ನಂತರ ನಿಲುಗಡೆ ಹೊಂದಿದರೆ ಸರಿಯಾದ ಅರ್ಥ ಮೂಡುತ್ತದೆ. ಇಂತಹ ನಿಲುಗಡೆಯೇ ಯತಿ.

ಪಾಠಗಳನ್ನು ಓದುವಾಗ ಇಂತಹ ಎಷ್ಟೋ ಉದಾಹರಣೆಗಳು ಕಾಣುತ್ತವೆ.

ಈ 'ಯತಿ' ಪ್ರಯೋಗ ಸಂಸ್ಕೃತ ಸಾಹಿತ್ಯದಲ್ಲಿ ವಿಫುಲವಾಗಿ ಕಂಡುಬರುತ್ತದೆ. ಯಾವುದೇ ಅನುಷ್ಟುಪ್ ಛಂದಸ್ಸಿನ ಪದ್ಯಭಾಗವನ್ನು ಗುರುತಿಸೋಣ.

ವಕ್ರತುಂಡ ಮಹಾಕಾಯ। ಸೂರ್ಯಕೋಟಿ ಸಮಪ್ರಭ।
ನಿರ್ವಿಘ್ನಂ ಕುರುಮೇ ದೇವ। ಸರ್ವಕಾರ್ಯೇಷು ಸರ್ವದಾ।

ಪ್ರಿಯವಾಕ್ಯ ಪ್ರದಾನೇನ। ಸರ್ವೇ ತುಷ್ಯಂತಿ ಜಂತವಃ।
ತಸ್ಮಾತ್ತದೇವ ವಕ್ತವ್ಯಂ। ವಚನೇಕಾ ದರಿದ್ರತಾ।

ಮೇಲೆ ಕಾಣಿಸಿದ ಎರಡೂ ಶ್ಲೋಕಗಳು ಅನುಷ್ಟುಪ್ ಛಂದಸ್ಸಿನವು. 84 ಅಕ್ಷರಗಳನ್ನು ಹೊಂದಿವೆ. ಪ್ರತಿ ಎಂಟು ಅಕ್ಷರಗಳ ನಂತರ ಒಂದು ನಿಲುಗಡೆ ಬೇಕೇಬೇಕು. ಈ ನಿಲುಗಡೆಯೇ ಯತಿ.

ಸಂಸ್ಕೃತ ಕಾವ್ಯಗಳಲ್ಲಿ ಯತಿಯ ಬಳಕೆ ಬಹಳಷ್ಟು ಇರುವುದಾದರೂ ಪ್ರಾಚೀನ ಕನ್ನಡ ಪದ್ಯ ಕಾವ್ಯಗಳಲ್ಲಿ ಯತಿಯ ಬಳಕೆ ಅತ್ಯಂತ ಕಡಿಮೆಯಾಗಿದ್ದನ್ನು ಗಮನಿಸಬಹುದು. ಕನ್ನಡ ಪದ್ಯ ಕಾವ್ಯಗಳಲ್ಲಿ ಪ್ರಾಸ ಹಾಗೂ ಗಣಗಳೇ ಹೆಚ್ಚು.

ಶ್ರೀವ।ನಿತೆಯರ।ಸನೆವಿ।ಮಲರಾ।
ಜೀವ।ಪೀಠನ।ಪಿತನೆ।ಜಗಕತಿ।
ಪಾವ।ನನೆಸನ।ಕಾದಿ।ಸಜ್ಜನ।ನಿಕರ।ದಾತಾ।ರಾ। – ಇದು ಭಾಮಿನಿ ಛಂದಸ್ಸಿನಲ್ಲಿರುವ ಪದ್ಯಬಾಗ.

ಇಲ್ಲಿ 'ವಿಮಲ ರಾಜೀವ ಪೀಠನ ಪಿತನೆ' ಅಂತ ವಿಂಗಡಿಸಿದರೆ ಭಾಮಿನಿ ಷಟ್ಪದಿಯ ಓಘಕ್ಕೆ ಹೊಂದಿಕೆಯಾಗುವದಿಲ್ಲ. ಮಾತ್ರೆಗಳ ಗುಂಪನ್ನು ಒಂದಾಗಿಸಿ ಓದಿದರೆ ಜೀವ ಪೀಠನ ಪಿತನೆ ಅಂತಾಗಬೇಕಾಗುತ್ತದೆ. ಅರ್ಥ ಸ್ಫುರಣ ಸರಿ ಹೊಂದುವದಿಲ್ಲ.

ಕೆಳಗಿನ ಪದ್ಯಭಾಗಗಳನ್ನೂ ಗಮನಿಸಿ.

6 6
ಕಾಯೋ ವೈ।ಕುಂಠಪತೇ ।
4 4 4
ಬಂದನು। ಮುರಹರ। ನಾಗಾ।

'ಕಾಯೋ ವೈಕುಂಠಪತೆ' ಯಲ್ಲಿ ಆರು ಮಾತ್ರೆಯ ನಂತರ ನಿಲುಗಡೆಯಾದಲ್ಲಿ 'ಕುಂಠಪತೇ' ಅಂತ ಹೇಳಬೇಕು. ವೈಕುಂಠಪತೇ ಅಂತ ಹೇಳಿದರೆ ಮಾತ್ರೆಗಳ ಹೊಂದಾಣಿಕೆಯಾಗುವದಿಲ್ಲ. ಬಂದನು ಮುರಹರನಾಗಾ ಎನ್ನುವಲ್ಲಿ ನಾಲ್ಕು ಮಾತ್ರೆಗಳನ್ನು ಪ್ರತ್ಯೇಕಿಸಿದಲ್ಲಿ 'ನಾಗಾ' ಶಬ್ದವು ಸೇರಿಕೊಂಡು ಸರಿಯಾದ ಅರ್ಥವಾಗುವದಿಲ್ಲ.
ಆದುದರಿಂದಲೇ ಕನ್ನಡ ಪದ್ಯಕಾವ್ಯಗಳಲ್ಲಿ 'ಯತಿ' ಪ್ರಯೋಗಕ್ಕೆ ವೈಯಾಕರಣಿಗಳು ಒಪ್ಪುವುದಿಲ್ಲ.

ಕೇಶೀರಾಜನಂತೂ 'ಯತಿವಿಲಂಘನದಿಂದರಿತಲ್ತೆ ಕನ್ನಡಂ' ಅಂತಲೇ ಹೇಳಿದ್ದಾನೆ.

ಆದರೆ ನವ್ಯಕಾವ್ಯಗಳಲ್ಲಿ ಪ್ರಾಸ ಹಾಗೂ ಗಣಗಳ ಮಹತ್ವ ಕಂಡುಬರದೇ ಇದ್ದರೂ, ಯತಿಯ ಬಳಕೆ ವ್ಯಾಪಕವಾಗಿ ಕಂಡುಬರುತ್ತದೆ. ನವ್ಯಕಾವ್ಯದ ಬಲವೇ ಈ ಯತಿ ಅಂದರೂ ಅತಿಶಯೋಕ್ತಿಯಲ್ಲ. ಛಂದಸ್ಸಿಗೆ ಅನುಗುಣವಾಗಿ ಕಾವ್ಯರಚನೆ ಮಾಡುವಾಗ ಮನಸ್ಸಿನ ಭಾವನೆಗಳನ್ನು ಸಮರ್ಥವಾಗಿ ಅಥವಾ ಸಮರ್ಪಕವಾಗಿ ಬಿಡಿಸಿಡಲು ಸಾಧ್ಯವಾಗುವದಿಲ್ಲ ಎನ್ನುವದು ಎಷ್ಟೊ ಸಾಹಿತಿಗಳ ಅಂಬೋಣ. ಆದುದರಿಂದ ಛಂದಸ್ಸಿನ ಕಡೆಗೆ ಗಮನ ಕೊಡದೆ ಹೇಳಬೇಕಾದುದನ್ನು ಹೇಳಬೇಕು ಎನ್ನುವದು ಅಂತವರ ಅನಿಸಿಕೆ.

'ಎಲ್ಲಿಂದಲೋ ಆವಿಯಾದ ನೀರು
ಇಂದು ಇಲ್ಲಿ ಮಳೆಯಾಗಿದೆ
ಇಲ್ಲಿಂದಲೇ ಸೃಷ್ಟಿಯಾದ ಕಲ್ಪನೆ
ಅದೆಲ್ಲೋ ಚಿಗುರಿನಿಂತಿದೆ'

ಬಹುಶಃ ಈ ಪದ್ಯ ಪ್ರಾಸ ಹಾಗೂ ಗಣ ಛಂದಸ್ಸಿನ ಯಾವ ಗುಣಗಳನ್ನೂ ಹೊಂದಿಲ್ಲ. ಆದರೆ ತನ್ನಲ್ಲಿ ಹುದುಗಿದ ಅರ್ಥವನ್ನು ಹೊರಗೆಡವಲು ಸಮರ್ಥವಿದೆ. ಈ ಕೆಳಗಿನ ಪದ್ಯವನ್ನೂ ಗಮನಿಸಬಹುದು.

ಧಮನಿ ಧಮನಿಗಳಲ್ಲಿ ಹರಿಯುತಿದೆ
ದೇಶಾಭಿಮಾನ,
ಭಾರತ ಮಾತೆಗೆ
ಎಂದೆಂದಿಗೂ ನನ್ನ ನಮನ,
ಮರೆಯಲಾಗದ
ಬಲಿದಾನದ ತ್ಯಾಗ
ಸೂರ್ಯಚಂದ್ರರೇ ಸಾಕ್ಷಿ
ಇದಕೀಗ

ಆದುದರಿಂದ ನವ್ಯಕಾವ್ಯಗಳು ಪ್ರಾಸ ಹಾಗೂ ಗಣಗಳಿಗಿಂತ ಯತಿಯನ್ನು ಅವಲಂಬಿಸಿವೆ ಎನ್ನಬಹುದು.

***



ಬಡ್ಡಿ ಮಕ್ಕಳಲ್ಲ

– ರೇಣುಕಾ ದೇಸಾಯಿ

ನಾವು ಬ್ಯಾಂಕಿನವರು ಲಕ್ಷ್ಮಿಯ ಸೇವಕರು
ಸದಾ ಸರ್ವದಾ ಅವಳ ಒಡನಾಡಿಗಳು
ಸೇವೆಗೈದರೆ ಕೊಡುವಳು ವರವ
ಅವಳ ಕೃಪೆಯಿರಲು ಸುಖಿಗಳು ನಾವು

ತಾಯಿ ಸರಸ್ವತಿ ಆಶೀರ್ವದಿಸಿ ಹರಸಿ
ಪರೀಕ್ಷೆಯಲಿ ಜಯಿಸಿ ಸೇರಿದೆವು ಬ್ಯಾಂಕ್
ಭಾರತೀ ಕರೆತಂದಳು ಭಗವತಿಯ ಆಲಯಕೆ
ನೇಮಿಸಿದಳವಳ ಸೇವೆಗೆ ಅನವರತ

ಬೆಳಗು ಬೈಗು ಅವಳದೇ ದರುಶನ
ನಕ್ಕು ನಲಿವಳು ನಮ್ಮಯ ಒಡನಾಟದಲಿ
ನಮ್ಮ ಸೇವೆಯಲಿ ಚ್ಯುತಿಯಾಯಿತೆಂದರೆ
ಮರ್ಮಘಾತದ ಶಿಕ್ಷೆ ನೀಡಿಯೇಬಿಡುವಳು

ರಾಶಿ ರಾಶಿ ಹಣವದು ಇದ್ದರೂ ಬಳಿಗೆ
ನಮ್ಮದಲ್ಲದೆನ್ನುವ ಗುಣವ ನೀಡಿಹಳು
ಒಂದಂಕಕಿ ಅತ್ತಿತ್ತಾಗಲು ಹಿಂಡುವಳು ಕಿವಿ
ಸಲಹುವಳು ನಮ್ಮನು ಯಶೋದೆಯಾಗಿ

ಮಾಡಿದ ತಪ್ಪಿಗೆ ಶಿಕ್ಷೆ ನೀಡದೇ ಇರಳು
ಹಗಲು ರಾತ್ರಿ ಎನ್ನದೇ ಸರಿಪಡಿಸಬೇಕದನು
ಇಲ್ಲದಿದ್ದರೆ ತೆರ ತೆರಬೇಕು ಸ್ವಂತದಲಿ
ಇರುವದೇನು ಸ್ವಂತದ್ದು ಅವಳೇ ಕೊಟ್ಟದ್ದು

ಅಮ್ಮ ಸರಸ್ವತಿ ತಾಯಿ ಭಾರ್ಗವಿಯರ ಹರಸಿದರು
ನೀಡಿಹರು ಸನ್ಮತಿ, ಚಿತ್ತಶುದ್ಧಿಯನೊಲವಿನಿಂದ
ಪರರ ದ್ರವ್ಯ, ಚಿನ್ನದೊಡವೆ ಮನ ಕದಲಿಸಲಿಲ್ಲ
ಒಮ್ಮನದಿಗೈದ ಸೇವೆ ನಿಷ್ಫಲವಾಗಲಿಲ್ಲ

ಅವಳೊಂದಿಗಿನ ಒಡನಾಟ ತಂದಿತು ಸಕಲ ಭಾಗ್ಯ
ಮದುವೆಯಾಯಿತು ಸುಲಭದಲಿ ದಕ್ಕಿದರು ಸಂಗಾತಿ
ಅವರಲಿ ಇರದ ಮೋಹ ಈ ಧನಲಕ್ಷ್ಮಿಯ ಪಾಲನೆಯಲಿ
ಸಮಯವು ಸಿಗದು ಸಂಗಾತಿಯ ಅನುನಯಿಸಲು

ಆದವು ಮಕ್ಕಳು ಅವಳ ಕೃಪೆಯ ನೆರಳಲಿ
ಬೆಳೆದರು ಸುಜ್ಞಾನದಲಿ ಗೋಕುಲದ ಕೃಷ್ಣನ ತೆರದಿ
ಬಂದರು ಬ್ಯಾಂಕಿಗೆ ಪಾಲಕರ ನೋಡಲು ಕಾತರದಿ
ಕಂಡರು ಬಳಿಯಲಿ ಪೆಟ್ಟಿಗೆ ತುಂಬಿದ ನೋಟಿನ ಕಂತೆ

ಮನೆ-ಮನೆಯಲು ಇಟ್ಟರು ತಮ್ಮ ಆಸೆಯ ಪಟ್ಟಿ
ತರಲು ಹಣವಿಲ್ಲವೆಂದರೆ ಒಪ್ಪರವರು ಸುಲಭದಲಿ
ದೊಡ್ಡವರು ನೀವು ಸುಳ್ಳು ಹೇಳುವದು ತರವಲ್ಲವೆಮಗೆ
ನಿನ್ನೆ ಕಂಡೆನು ಹಣದ ರಾಶಿಯ ನಿಮ್ಮ ಬಳಿಯಲಿ

ಅವರಷ್ಟೇ ಏಕೆ ನೆಂಟರು, ಬೀಗರು, ಅಣ್ಣತಮ್ಮಂದಿರು
ಹಣ ಕೇಳಿ ಕೊಡದಿರೆ ದೂರ ಸರಿದರು ಮುನಿಸಿನಲಿ
ನಂಬರವರು ನಮ್ಮದು ದೊಡ್ಡ ಸಂಬಳವಲ್ಲವೆಂದು
ನಮ್ಮ ಮನೆಯ ಟೀರು ಫ್ರಿಜ್ ಪಂಕಪಲ್ಲಂಗ ಟಿವಿ ಕಂಡು

ಎಲ್ಲವದು ಸಾಲದ ಕಂತಿನದೆಂದು ಅವರೇನು ಬಲ್ಲರು
ಬಲ್ಲವರೇ ಬಲ್ಲರು ಸಾಲದ ಶೂಲ ಎನ್ನುವರು ದಾಸರು
ಬರುವ ಸಂಬಳ ನಮಗರ್ಧ ಉಳಿದುದು ಸಾಲಕ್ಕೆ
ಒಪ್ಪಲೊಲ್ಲರು ಅವರೆಂದೂ ಒಪ್ಪದಿರೇ ನಮ್ಮಯ ಶತ್ರು

ಸೇವೆಗೆ ಕೊಟ್ಟಳು ಲಕ್ಷ್ಮೀ ಕೊಡುಗೈಲೇ ಹರಸಿ
ಆಸೆಯನಿಟ್ಟಳು ಸಾಲ ಮಾಡಲು ಆಡಿಸಿದಳು
ಜೀವನ ಜೋಕಾಲಿ ಸೊಬಗಿನಲಿ ಸುಂದರದಿ
ಸಂತಸ ಕಂಡೆವು ನಲಿಯುತ ನಕ್ಕೆವು ಸುಖದಲಿ

ಬಂದ ಸಂಬಳ ಎಣಿಸಲಿಲ್ಲ, ಕೂಡಿಸಿ ಕಳೆಯಲಿಲ್ಲ
ಕೆರೆಯ ನೀರನು ಕೆರೆಗೆ ಚೆಲ್ಲದ ಭಾವ ಅಲ್ಲೆಲ್ಲಾ
ಬಂದೆವು ಬರೀಗೈಲಿ ನಮ್ಮದೇನು ಎನ್ನುವ ಆದರ್ಶದಿ
ಜೀವನ ಜ್ಞಾನ ಕಂಡೆವು ಪಡೆದೆವು ಸಂತರ ತೆರದಿ

ನಾವುಗಳಲ್ಲ ಬಡ್ಡಿಮಕ್ಕಳು ನಮ್ಮದಲ್ಲ ಮೀಟರ್ ಬಡ್ಡಿ
ಹರಿಸುವೆವು ಗ್ರಾಹಕರುದ್ಧಾರಕೆ ಬೇಡುವೆವು ತಾಯಿಯಲಿ
ದುಡಿಯಿರಿ ಶ್ರಮದಿ ಮುಂದೆ ಬನ್ನಿರಿ ಒಳ್ಳೆಯದಾಗಲೆಂದು
ಸಾಲ ಮರುಪಾವತಿಸದಿದ್ದರೆ ತಿದ್ದಿ ಬುದ್ಧಿ ಹೇಳುವೆವು

ಡಾಕ್ಟರ್ ರೋಗ ಬರಲಿ ನೋಡಲು ನಾನಿರುವೆನೆಂದ
ಲಾಯರ್ ಜಗಳವಾಡಿ ಬಗೆಹರಿಸಲು ನಾನಿರುವೆನೆಂದ
ಲೆಕ್ಕ ಪರಿಶೋಧಕ ಅನ್ಯಾಯಕೆ ಹೆದರದಿರಿ ನಾನಿರುವೆನೆಂದ
ನಾವೆಂದೂ ಲೆಕ್ಕದಿ ದುಡಿದು ಮುಂದೆಬನ್ನಿರೆಂದು ಹರಸುವೆವು

ನಾವು ಬಡ್ಡಿ ಮಕ್ಕಳಲ್ಲ

***

ಲಲಿತ ಪ್ರಬಂಧ

ಈಳಿಗೆಗೆ ಇಲ್ಲ ಏಳಿಗೆ

– ಕಮಲಾಕ್ಷಿ ಸಿ ಆರ್

ಅಡಿಗೆ ಮನೆಯ ಮೇಲೆ ಸಾರ್ವಭೌಮತ್ವವಿದ್ದ ಈಳಿಗೆಗೆ ಹೀಗಾಗಬಾರದಿತ್ತು. ಈಳಿಗೆ ಇಲ್ಲದೆ ಅಡುಗೆ ಮಾಡೋದಾ? ಆಗೋದೆ ಇಲ್ಲ ಎನ್ನುತ್ತಿದ್ದ ಕಾಲವೊಂದಿತ್ತು. ಈಳಿಗೆಗ್ಯಾಕೆ ಅಡುಗೆಮನೆಯಲ್ಲಿ ಒಬ್ಬರು ಇಬ್ಬರು ಕೂರೋ ಜಾಗ ಎನಿಸಿ.. ಅದನ್ನು ಮಾಳಗೆಗೆ ಸೇರಿಸಿದವರು ಎಷ್ಟೋ ಮಂದಿ. ಮಾಳಗೆ ಇಲ್ಲದವ್ರು, ಮನೇಲಿ ಜಾಗ ದಂಡ ಎನಿಸಿದವ್ರು ಮನೆಯಿಂದಲೇ ಹೊರಗೆ ಹಾಕಿಬಿಟ್ರು. ಈಳಿಗೆ ಈಗಂತೂ ಅಪರೂಪದ ಅತಿಥಿಯಂತಾಗಿ ಕಾಣಿಸೋದು ವಿರಳ ಆಯ್ತು.

ಈಳಿಗೆ ಸುಮಾರು ಒಂದೂವರೆ ಅಡಿಯಿಂದ ಎರಡು ಅಡಿ ಉದ್ದ, ಒಂದಡಿ ಅಗಲ ಇರೋ ಮರದ ಮಣೆ. ಕೊನೆಯಲ್ಲಿ ಅರ್ಧ ಅಡಿ ಬಾಗಿದಂತಿರುವ ಕಬ್ಬಿಣ ಇಲ್ಲವೇ ಉಕ್ಕಿನಿಂದಾಗಿರುವ ಕುಡಗೋಲಿನಂತೆ ಹರಿತವಾದ ಆಯುಧವನ್ನು ರಿವಿಟ್ಟಿನಿಂದ ಮಣೆಗೆ ಲಗತ್ತಿಸಿರುವರು. ಆಯುಧ ಎಂದರೆ ಇದನ್ನೇನು ಹೊಡೆದಾಡಲು ಬಳಸೋದಲ್ಲ. ಅಡುಗೆಗೆ ಬೇಕಾದ ತರಕಾರಿಗಳನ್ನು ಕತ್ತರಿಸಲು, ಹಣ್ಣುಗಳನ್ನು ಕತ್ತರಿಸಲು ಬಳಸೋದಷ್ಟೇ. ಬಾಗಿದ ಲೋಹದ ತುದಿಯಲ್ಲಿ ಚಿಕ್ಕ ವೃತ್ತ, ಅದರ ಸುತ್ತ ಮೊನಚಾದ ಹಲ್ಲುಗಳಿರುತ್ತವೆ. ಅದರ ಸುತ್ತ ತೆಂಗಿನ ಕಾಯಿಯನ್ನು ತಿರುಗಿಸುತ್ತ ತುರಿಯನ್ನು ತುರಿದುಕೊಳ್ಳಬಹುದು. ಅದಕ್ಕೇ ಇದನ್ನು ತುರೆ ಮಣೆ ಎನ್ನೋದುಂಟು. ವಿಪರ್ಯಾಸ ಎಂದರೆ, ಹಲ್ಲು ಹೆಚ್ಚು ಉಬ್ಬಿದ್ದರೆ ಆ ವ್ಯಕ್ತಿಯನ್ನು ತುರೇಮಣೆ ಎಂದು ಅಪಹಾಸ್ಯ ಮಾಡೋದೂ ಉಂಟು. ಕೆಲವರಂತೂ ಕಾಯಿ ಕೊಟ್ಟಿದ್ದರೆ ತುರಿದುಕೊಡುವೆ ಎಂದು ವಿಕೃತಿ ತೋರೋದೂ ಇದೆ. ಹಲ್ಲು ಹೇಗಿದ್ದರೇನು.. ಗಟ್ಟಿ ಇದ್ದರೆ ಸಾಕಲ್ವಾ?

ಆಗೆಲ್ಲ ಅಡುಗೆಮನೆಗೆ ಒಲೆ ಎಷ್ಟು ಮುಖ್ಯವೋ ಅಷ್ಟೇ ಈಳಿಗೆಯೂ ಮುಖ್ಯವಾಗಿತ್ತು. ಒಲೆಯ ಒಂದು ಪಕ್ಕದ ಮೂಲೆಯಲ್ಲಿ ಮಜ್ಜಿಗೆ ಮಂಥು, ಪುಟ್ಟ ಹಾರೆ, ಮುದ್ದೇಕೋಲು, ಒನಕೆ, ಮಣೆಗಳ ಜೊತೆ ಸಹಬಾಳ್ವೆ ಮಾಡುತ್ತಿತ್ತು.

ಹಿಂದಿನ ಈಳಿಗೆಮಣೆಗಳಲ್ಲಿ ಕತ್ತಿಯ ಕೆಳಭಾಗದವರೆಗೂ ಮಣೆಯನ್ನು ಲಘುವಾಗಿ ತಟ್ಟೆಯಂತೆ ತಗ್ಗಾಗಿ ಕೆತ್ತಲಾಗುತ್ತಿತ್ತು. ಹೆಚ್ಚಿದ ತರಕಾರಿ ಸಂಗ್ರಹಿಸಲು ತಟ್ಟೆಯ ಅವಶ್ಯಕತೆಯೇ ಇರಲಿಲ್ಲ. ಹೆಚ್ಚಬೇಕಾದ ತರಕಾರಿಗಳನ್ನು ತೊಳೆದುಕೊಂಡು ಇಟ್ಟುಕೊಂಡರೆ ಮುಗೀತು ಅವನ್ನೆಲ್ಲ ಹೆಚ್ಚಿಯೇ ಮೇಲೇಳುತ್ತಿದ್ದದ್ದು. ಮಣೆಯಲ್ಲಿ ಕುಳಿತು ಎರಡು ತೆಂಗಿನಕಾಯಿಗಳನ್ನು ತುರಿದದ್ದೂ ಅರಿವಿಗೆ ಬರುತ್ತಲೇ ಇರಲಿಲ್ಲ. ಈಳಿಗೆಮಣೆಯ ಜೊತೆಯಲ್ಲಿ ಆಯಾಸ ಎಂಬುದೇ ಇರಲಿಲ್ಲ.

ಈಳಿಗೆಯಲ್ಲಿ ತರಕಾರಿ ಹೆಚ್ಚೋದು ಕೂಡ ಸುಲಭವೇ. ಎಡಗೈನಲ್ಲಿ ಸೊಪ್ಪು, ತರಕಾರಿ ಹಿಡಿದು ಬಲಗೈನಿಂದ ಎಷ್ಟು ಗಾತ್ರ ಬೇಕೋ ಅಷ್ಟನ್ನು ಕತ್ತಿಯ ಕಡೆ ಸರ ಸರ ಸರಿಸುತ್ತಾ ಹೋಗೋದನ್ನ ನೋಡದೇ ಚೆನ್ನ. ಮತ್ತೆ.. ಈಳಿಗೆ ತರಕಾರಿ ಹೆಚ್ಚುವಾಗ ನಿಶಬ್ದ ಪಾಲಿಸ್ತಾ ಇತ್ತು. ಕಾಯಿ ತುರಿವಾಗಷ್ಟೇ ಶಬ್ದ. ಕಾಯಿ ತುರಿವಾಗ ಸ್ವಲ್ಪ ಕೌಶಲ್ಯ ಬೇಕು.. ಇಲ್ಲವಾದ್ರೆ ತುರಿ ಚೆನ್ನಾಗಿ ಕಾಣಿಸಲ್ಲ.

ಮನೆಗೆ ಸಂಬಂಧಿಗಳು, ಸ್ನೇಹಿತರು ಬಂದಾಗ, ಮಹಿಳಾ ಮಂಡಳ ಸಭೆ ನಡೆಯುತ್ತಿದ್ದದ್ದು ಈಳಿಗೆಮಣೆ ಅಧ್ಯಕ್ಷತೆಯಲ್ಲಿಯೇ. ಮನೆಗೆ ಬಂದವರು ಈಳಿಗೆಮಣೆಯ ಮೇಲೆ ಕುಳತೇಬಿಡುತ್ತಿದ್ದರು.. ಅತಿಥೇಯರು ಅಡುಗೆಗೆ ಬೇಕಾದ ತರಕಾರಿಗಳನ್ನು ಕೊಟ್ಟಂತೆಲ್ಲ ಅತಿಥಿಗಳು ಹೆಚ್ಚಿಕೊಡುತ್ತಿದ್ದರು. ಮಾತೂ ಆಯಿತು.. ಕೆಲಸವೂ ಆಗುತ್ತಿತ್ತು. ಹೀಗಾಗಿ ಈಳಿಗೆಮಣೆಯು ಮನೆಯ ಪರಮಾಪ್ತ ಬಂಧುವಾಗಿರುತ್ತಿತ್ತು.

ಯಾವುದಾದ್ರೂ ಕಾರ್ಯಕ್ರಮ ಎಂದಾಗ, ಅಕ್ಕಪಕ್ಕದ ಈಳಿಗೆಮಣೆಗಳು ಒಂದೆಡೆ ಸೇರಿಕೊಳ್ತಾ ಇದ್ದವು. ಯಾವ ಮನೆಯಾಕೆ ಅಚ್ಚುಕಟ್ಟು ಎಂಬುದನ್ನು ಈಳಿಗೆ ನೋಡಿಯೇ ಹೇಳಬಹುದು. ಬಟ್ಟಲು ಸ್ವಚ್ಛವಾಗಿರುವ, ತುಕ್ಕು ಹಿಡಿದಿರದ ಈಳಿಗೆಗೆ ಹೆಚ್ಚು ಬೇಡಿಕೆ ಇರುತ್ತಿತ್ತು ನೋಡಿ.

ರಾಜನಂತೆ ಅಡುಗೆಮನೆಯ ಪ್ರಮುಖ ಸ್ಥಾನ ಪಡೆದಿದ್ದ ಈಳಿಗೆ, ಮಾಳಿಗೆ ಸೇರಿದ್ದು ಸರಿಯಲ್ಲ ನೋಡಿ. ಈಳಿಗೆ ಹೆಚ್ಚು ಜಾಗ ತಗೊಳುತ್ತೆ. ಆದ್ರೆ ಮಹಿಳೆಯರು ಈಳಿಗೆಯಲ್ಲಿ ತರಕಾರಿಗಳನ್ನು ಹೆಚ್ಚೋಕೆ ಈಳಿಗೆಮಣೆ ಮೇಲೆ ಆರಾಮವಾಗಿ ಕೂರಬಹುದಿತ್ತು. ಆಗಾಗ್ಗೆ ಕೂತು ನಿಂತು, ಕಾಲು, ಸೊಂಟಕ್ಕೆ ವ್ಯಾಯಾಮ ಆಗೋದು. ಯಾವಾಗ ನೆಲದ ಮೇಲಿನ ಒಲೆಕಟ್ಟೆ ಮೇಲೆ ಹೋಯ್ತೋ ಆಗಿನಿಂದ ನೆಲದ ಮೇಲೆ ನಡೆಯೋದು ಬಿಟ್ರೆ ನೆಲವನ್ನೇ ಮುಟ್ಟಲ್ಲ ಅನ್ನೋ ಹಾಗಾಡ್ತಾರೆ. ಆಗೆಲ್ಲ ಕಾಲ ಮೇಲೆ ಹೆಚ್ಚು ಭಾರ ಆಗ್ತಾ ಇರಲಿಲ್ಲ. ಅದೇ ಈಗಂತೂ ನಿಂತೇ ಅಡಿಗೆ ಮಾಡ್ತಾರೆ, ಪಾತ್ರೆ ತೊಳೀತಾರೆ ಜೊತೆಗೆ ತರಕಾರಿಯನ್ನೂ ನಿಂತೇ ಹೆಚ್ಚಿಕೊಳ್ತಾರೆ. ಮತ್ತೆ ಕಾಲು,ಮಂಡಿ ನೋವು ಬರದೆ ಇರುತ್ತಾ?

ಈಳಿಗೆ ಜಾಗವನ್ನು ಚಾಕು, ಚಾಪರ್, ಫುಡ್ ಪ್ರೋಸೆಸರ್, ಗ್ರೇಟರ್.. ಇವೆಲ್ಲ ತಗೊಂಡಿವೆ. ಈಳಿಗೆಯಷ್ಟು ಮೌನವಾಗಿ ಕೆಲಸ ಮಾಡಲ್ಲ. ಈಳಿಗೆಯಷ್ಟು ವ್ಯಾಯಾಮ ಮಾಡಿಸಲ್ಲ. ಮಣೆ ದೊಡ್ಡದು ಅಂತ ತೆಗಳ, ಅಡುಗೆ ಮನೆ ತುಂಬ ಹೊಸ ಹತಾರಗಳನ್ನು ತಂದು ತುಂಬಿಕೋತಾರೆ. ಮೂರು ಮೂರು ತಿಂಗಳಿಗೂ ಚೂಪು ಮಾಡಿಸ್ತಾರೆ. ದೀರ್ಘ ಬಾಳಿಕೆ ಬರೋ ಈಳಿಗೆಯನ್ನು ಮಾಳಿಗೆ ಸೇರಿಸಿದ್ದು ಸರಿಯಾ? ಈಳಿಗೆಗೆ ಇಲ್ಲ ಏಳಿಗೆ.

***



ಸಣ್ಣ ಕತೆಗಳ ಶ್ರಾವಣದ 157 ಕತೆಗಳನ್ನು ಓದುತ್ತಿರುವ ಗಣಪ

ಲಲಿತ ಪ್ರಬಂಧ

ಗೀತಾ, ಆಹಾ! ಸಂಗೀತ

-ಶೀಲಾ ಅರಕಲಗೂಡು

ಗೀತಾ ಚಿಕ್ಕ ವಯಸ್ಸಿನಲ್ಲಿಯೇ ಸಂಗೀತ ಕಲಿಯಲಾರಂಭಿಸಿದ್ದಳು. ಚಿಕ್ಕವಳಿದ್ದಾಗ ಅವಳೇನು 'ತಾನು ಸಂಗೀತ ಕಲಿಯಬೇಕು' ಅಂದುಕೊಂಡಿರಲಿಲ್ಲ. ಅಷ್ಟಕ್ಕೂ ಮಕ್ಕಳಿಗೆ ಆಗ ಆ ಬಗ್ಗೆ ತಿಳುವಳಿಕೆ ಹೇಗಿರುತ್ತೆ ಹೇಳಿ? ಎಲ್ಲ ತಾಯ್ತಂದೆಯರಂತೆ ಗೀತಾಳ ತಾಯಿ ತಂದೆಯರೂ ಮಗಳು ಒಳ್ಳೆಯ ಗಾಯಕಿಯಾಗಲಿ, ಪ್ರವರ್ಧಮಾನಕ್ಕೆ ಬರಲಿ ಎಂದು ಸಂಗೀತಕ್ಕೆ ಸೇರಿಸಿದರು. ಪರಿಚಯವಿದ್ದ ಒಬ್ಬ ಸಂಗೀತದ ಗುರುಗಳು ಮನೆ ಮನೆಗೆ ಹೋಗಿ ಪಾಠ ಹೇಳಿಕೊಡುತ್ತಿದ್ದು, ಅವರನ್ನು ತಮ್ಮ ಮನೆಗೂ ಬಂದು ಗೀತಾಳಿಗೆ ಸಂಗೀತ ಹೇಳಿಕೊಡಬೇಕೆಂದು ವಿನಂತಿಸಿದರು.

ಗೀತಾಳ ಸಂಗೀತಾಭ್ಯಾಸ ಪ್ರಾರಂಭವಾಯಿತು. ಆಗಿನ್ನೂ ಗೀತಾ ಐದನೆಯ ತರಗತಿಯ ಪುಟ್ಟ ಬಾಲೆ. ಹುರುಪಿನಿಂದ ಸಂಗೀತಾಭ್ಯಾಸ ಆರಂಭಿಸಿದಳು. ಈಗಿನ ದಿನಗಳಲ್ಲಾದರೆ ಬಿಡಿ, ನಾಲ್ಕೈದು ವರ್ಷಕ್ಕೇನೆ ಎಲ್ಲ ತರಹದ ಶಾಲೆಗಳಿಗೆ ಮಕ್ಕಳನ್ನು ಸೇರಿಸಿಬಿಡ್ತಾರೆ. ಸಂಗೀತ ಅಂತೆ, ನೃತ್ಯವಂತೆ, ಕರಾಟೆ ಅಂತೆ, ಚಿತ್ರಕಲೆ ಅಂತೆ, ಗಿಟಾರ್ ಅಂತೆ, ಹೀಗೆ ಹತ್ತು ಹಲವಾರು ಬಗೆಯ ಕಲೆಗಳನ್ನು ಮಕ್ಕಳಿಗೆ ಬಾಲ್ಯದಲ್ಲಿಯೇ ಅರೆದು ಕುಡಿಸುವ ಪ್ರಯತ್ನ. ಬರೀ ಅಷ್ಟೇನೇ? ಖಂಡಿತ ಅಲ್ಲ. ಪಾಠಕ್ಕೆ ಸೇರಿಸುತ್ತಿದ್ದ ಹಾಗೆಯೇ, ತಮ್ಮ ಮಕ್ಕಳು ವೇದಿಕೆಗಳಲ್ಲಿ, ದೂರದರ್ಶನದಲ್ಲಿ ಪ್ರತಿಭಾ ಪ್ರದರ್ಶನ ಮಾಡಿಬಿಡಬೇಕೆಂಬ ತವಕ.

ಗೀತಾ ಕಲಿಯಲಾರಂಭಿಸಿದ್ದು ಸುಮಾರು 60-65 ವರ್ಷಗಳ ಹಿಂದೆ. ಆಗೆಲ್ಲ ದೂರದರ್ಶನ ಎಲ್ಲಿತ್ತು ಹೇಳಿ? ಪ್ರತಿಭಾ ಪ್ರದರ್ಶನ ಏನಿದ್ದರೂ ಮನೆಗೆ ಬಂದವರ ಮುಂದೆ ಅಷ್ಟೇ. ಗೀತಾ ಆರಂಭದಲ್ಲಿ ಉತ್ಸಾಹದಿಂದಲೇ ಕಲಿಯ ಲಾರಂಭಿಸಿದಳು. ಮೂರು ವರ್ಷಗಳಲ್ಲಿ ಸರಳೆವರಸೆ, ಜಂಟಿ ವರಸೆ, ಅಲಂಕಾರಗಳು, ಲಕ್ಷಣ ಗೀತೆ, ವರ್ಣ ಇವೆಲ್ಲ ಮುಗಿದು ಕೀರ್ತನೆಗೂ ಕಾಲಿಟ್ಟಳು. ಕಲಿಯುವುದೇನೋ ಕಲಿಯುತ್ತಿದ್ದಳು. ಆದರೆ ಹಾಡಲು ಬಾಯಿ ಬಿಡುತ್ತಿದ್ದುದು ಮೇಷ್ಟ್ರು ಮನೆಗೆ ಬಂದಾಗ ಮಾತ್ರ. ಆಟದ, ಹುಡುಗಾಟದ ವಯಸ್ಸಿನಲ್ಲಿ ಗಂಭೀರ ಅಭ್ಯಾಸ ಆಗುವುದಾದರೂ ಹೇಗೆ? ಆದರೂ ಅಮ್ಮನ ಬಲವಂತಕ್ಕೆ ಕಟ್ಟುಬಿದ್ದು ಒಂದಷ್ಟು ಹಾಡುವ ಪ್ರಯತ್ನ ಮಾಡುತ್ತಿದ್ದಳು ಗೀತಾ.

ಕೆಲವೊಮ್ಮೆ ಏನಾಗ್ತಿತ್ತು ಗೊತ್ತೇ? ಅಮ್ಮ, ಗೀತಾಳ ತಮ್ಮ ತಂಗಿಯನ್ನು ಕರೆದುಕೊಂಡು ಸಂಜೆ ಪೇಟೆಗೆ ಹೊರಡುತ್ತಿದ್ದಳು. ಅದೇ ಸಮಯಕ್ಕೆ ಮೇಷ್ಟ್ರು ಬರೋ ಹೊತ್ತು. ಹಾಗಾಗಿ ಅಮ್ಮ ತನ್ನನ್ನು ಕರೆದುಕೊಂಡು ಹೋಗುತ್ತಿರಲಿಲ್ಲ. ಅವರು ಹೋಗುತ್ತಾರೆ ಎಂದು ತಿಳಿಯುತ್ತಿದ್ದಂತೆಯೇ, "ನನಗಿವತ್ತು ಸಂಗೀತ ಪಾಠ ಬೇಡ. ನಾನೂ ನಿನ್ನ ಜೊತೆ ಪೇಟೆಗೆ ಬರ್ತೀನಿ" ಅಂತ ಹಠ ಹಿಡಿಯುತ್ತಿದ್ದಳು. ಕೆಲವೊಮ್ಮೆ ಜೋರಾಗಿ ಅತ್ತೂ ಕರೆದು ಮೊಂಡು ಹಿಡಿಯುತ್ತಿದ್ದಳು. ಒಂದೆರಡು ಬಾರಿಯಂತೂ, ಮೇಷ್ಟ್ರು ಬರ್ತಾ ಇರೋದು ಕಾಣಿಸುತ್ತಿದ್ದ ಹಾಗೇನೇ ಎಲ್ಲೋ ಮೂಲೆಯಲ್ಲಿ ಬಚ್ಚಿಟ್ಟುಕೊಳ್ಳುತ್ತಿದ್ದಳು. ಅಮ್ಮ ಹುಡುಕೀ ಹುಡುಕಿ ಅವಳನ್ನ ಮೇಷ್ಟ್ರ ಎದುರಿಗೆ ಕೂರುವಂತೆ ಮಾಡಬೇಕಾಗುತ್ತಿತ್ತು.

ಅಂತೂ ಹೀಗೆ ಸುಮಾರು ಮೂರು ವರ್ಷ ಕಾಲ ಪಾಠವಾಯಿತು. ಅದೇನು ಕಾರಣವೋ ಪಾಪ, ಗೀತಾಳ ಸಂಗೀತದ ಮೇಷ್ಟ್ರು ಕಾಯಿಲೆಯಿಂದ ಸತ್ತೇಬಿಟ್ಟರು. ತಿಳಿದಾಗ, ಒಂದು ರೀತಿ ಸಣ್ಣ ದುಃಖವೆನಿಸಿದರೂ, ಗೀತಾಳಿಗೆ, ಆ ಚಿಕ್ಕ ವಯಸ್ಸಿನ ಮುಗ್ಧ ಮನಸ್ಸಿಗೆ, ದುಃಖ ಅಷ್ಟೊಂದು ತಟ್ಟದೆ ಸ್ವಲ್ಪ ಸಂತೋಷವೇ ಆಯ್ತು ಬಿಡಿ.

’ಸಧ್ಯ, ಇನ್ಮೇಲಿಂದ ಸಂಜೆ ಆಟಕ್ಕೆ ತೊಂದರೆ ಇಲ್ಲ. ಅಮ್ಮನ ಜೊತೆ ತಾನೂ ಕೂಡ ಹೊರಗಡೆ ಹೋಗಬಹುದು’ ಎಂದು ಒಂದು ರೀತಿಯ ನಿಶ್ಚಿಂತಭಾವದ ಸುಖವನ್ನು ಅನುಭವಿಸಿದಳು.

ಗೀತಾ ಈಗ ಪ್ರೌಢಶಾಲೆ ಸೇರಿದಳು. ಅಲ್ಲಿ ವಿವಿಧ ವಿಷಯಗಳ ಜೊತೆ ಸಂಗೀತವನ್ನೂ ಆಯ್ಕೆ ಮಾಡಿಕೊಂಡು ಕಲಿಯಬಹುದಿತ್ತು. ಸರಿ, ಗೀತಾ ಸಂಗೀತಕ್ಕೂ ಸೇರಿಕೊಂಡಳು. ಶಾಲೆಯ ಸಮಯದಲ್ಲಿಯೇ ಸಂಗೀತ ಕಲಿಕೆಯು ಆಗುತ್ತಿದ್ದುದರಿಂದ ಆಟದ ಸಮಯ ಕಳೆದುಕೊಳ್ಳುವ ಭಯವಿರಲಿಲ್ಲ. ಜೊತೆಗೆ ಈ ಸಂಗೀತ ಪಾಠ ಇದ್ದದ್ದು ವಾರಕ್ಕೊಮ್ಮೆ ಮಾತ್ರ. ಅಲ್ಲಿ ಮಕ್ಕಳಿಗೆಲ್ಲ ಸರಳ ವರಸೆಯಿಂದ ಪಾಠ ಪ್ರಾರಂಭ. ಈಗಾಗಲೇ ಮೂರು ವರ್ಷ ಕಲಿತುಬಿಟ್ಟಿದ್ದರಿಂದ ಗೀತಾಳಿಗೆ ತಾನು ಎಲ್ಲರಿಗಿಂತ ಉತ್ತಮ ಎನ್ನುವ ಆತ್ಮವಿಶ್ವಾಸ ಉಂಟಾಯ್ತು. ಗೀತಾಳಂತೆ ಸಂಗೀತ ಜ್ಞಾನವುಳ್ಳ ಇನ್ನೂ ನಾಲ್ಕಾರು ಹುಡುಗಿಯರಿದ್ದರು. ಟೀಚರ್ ಇವರಿಗೆಂದೇ ಒಂದು ಬೇರೆಯದೇ ಗುಂಪು ಮಾಡಿ ಕೀರ್ತನೆಗಳನ್ನು ಕಲಿಸುತ್ತಿದ್ದರು. ಹಾಗಾಗಿ ಈ ಮೊದಲಿನಂತಲ್ಲದೆ ಸ್ವಲ್ಪ ಆಸಕ್ತಿವಹಿಸಿ ಕಲಿಯಲು ಆರಂಭಿಸಿದಳು ಗೀತಾ. ಎಸ್ ಎಸ್ ಎಲ್ ಸಿ ಪಾಸಾಗುವಷ್ಟರಲ್ಲಿ ಜ್ಯೂನಿಯರ್ ಪರೀಕ್ಷೆ ಪಾಸಾಯ್ತು.

ಈಗ ಗೀತಳಿಗೆ ಸಂಗೀತದಲ್ಲಿ ನಿಜವಾದ ಆಸಕ್ತಿ ಚಿಗುರಿತ್ತು. ಮನೆಯ ಸಮೀಪದಲ್ಲೇ ಮತ್ತೊಬ್ಬ ಗುರುಗಳ ಬಳಿ ಗೆಳತಿಯರೊಂದಿಗೆ ಕಲಿಯಲಾರಂಭಿಸಿದಳು. ಶ್ರದ್ಧೆಯಿಂದ ಕಲಿತು ಸೀನಿಯರ್ ಪರೀಕ್ಷೆಯನ್ನೂ ಮೊದಲ ದರ್ಜೆಯಲ್ಲಿ ಪಾಸು ಮಾಡಿಕೊಂಡಳು. ಮುಂದೆ ಒಳ್ಳೆಯ ಸಂಗೀತ ವಿದುಷಿಯಾಗಬೇಕೆಂಬ ಕನಸು ಅವಳದು. ಪಾಪ! ಅವಳ ಆಸೆಗೆ ತಕ್ಕಂತೆ ಅವಳ ಶಾರೀರವಿರಲಿಲ್ಲ. ಅವಳ ಸಂಗೀತಾಭ್ಯಾಸದಿಂದ ಅಕ್ಕಪಕ್ಕದ ಮನೆಯ ಜನರಿಗೆ ತೊಂದರೆಯಾಗುತ್ತಿದ್ದರೂ, ಹಾಗೂ ಹೀಗೂ ಸಹಿಸಿಕೊಂಡಿದ್ದರು. ಒಮ್ಮೆ ಅವಳ ಗುರುಗಳೇ ನೇರವಾಗಿ ಹೇಳಿದ್ದರು, "ನೋಡಮ್ಮ ಗೀತಾ, ನೀನು ಶ್ರದ್ಧೆಯಿಂದ ಅಭ್ಯಾಸ ಮಾಡುತ್ತಿರುವೆ. ಆದರೆ ನಿನ್ನ ಹಾಡಿಕೆಯಲ್ಲಿ ಮಾಧುರ್ಯವಿಲ್ಲ. ಆದರೂ ನಿರಾಸೆ ಬೇಡ. ತೀವ್ರವಾಗಿ ಅಭ್ಯಾಸ ಮಾಡಿದರೆ ಕಂಠ ಪಳಗುತ್ತದೆ."

ಗೀತ ಕೆಲ ಹಿರಿಯ ಸಂಗೀತಗಾರರ ಬಗ್ಗೆ ಓದಿ ತಿಳಿದಿದ್ದಳು. ಬೆಳಗಿನ ಜಾವಕ್ಕೇ ಚಳಿಯಲ್ಲಿ ಎದ್ದು ಅಕಾರ, ಇಕಾರ, ಉಕಾರಗಳ ತೀವ್ರಗತಿಯ ಅಭ್ಯಾಸವನ್ನು ಬಿಡದೆ ಮಾಡುತ್ತಿದ್ದರೆ ಎಂತಹ ಧ್ವನಿಯಾದರೂ ಸಂಸ್ಕಾರಗೊಂಡು ಮಧುರವಾಗುತ್ತದೆ ಎಂದು ತಿಳಿದುಬಂದು ಮಾರನೇ ದಿನದಿಂದಲೇ ಅಭ್ಯಾಸ ಶುರು ಮಾಡಬೇಕೆಂದುಕೊಂಡಳು ಗೀತಾ.

ಮಾರನೇ ದಿನ ಗೀತಾ ಬೆಳಗಿನ ಜಾವ ನಾಲ್ಕಕ್ಕೇ ಎದ್ದು, ಮುಖಮಾರ್ಜನ ಮಾಡಿ, ತಂಬೂರಿ ಶ್ರುತಿ ಮಾಡಿ ಆ...... ಈ...... ಊ....... ಅಭ್ಯಾಸ ಆರಂಭಿಸಿಯೇಬಿಟ್ಟಳು. ಮಲಗಿದ್ದ ಅವಳ ಚಿಕ್ಕ ತಂಗಿ ’ಕಿಟಾರ್’ ಎಂದು ಕೂಗಿಕೊಂಡು ಎದ್ದು ಅಳಲಾರಂಭಿಸಿದಳು. ಅಮ್ಮನಿಗೆ ಅವಳನ್ನು ಸಮಾಧಾನಪಡಿಸಬೇಕಾದರೆ ಸಾಕುಬೇಕಾಗಿ ಹೋಯ್ತು. ಈ ಗಲಾಟೆಗೆ ತಮ್ಮನೂ ಎದ್ದು ಕುಳಿತ. "ಅಮ್ಮಾ, ಅಕ್ಕನಿಗೇನಾಗಿದೆ? ಅದ್ಯಾಕೆ ಹಾಗೆ ಗೊಳೋ ಅಂತ ವಿಚಿತ್ರವಾಗಿ ಅಳ್ತಿದ್ದಾಳೆ?" ಎಂದು ಕೇಳಿದ. "ಅಳ್ತಿಲ್ಲಪ್ಪ, ಸಂಗೀತಾಭ್ಯಾಸ ಮಾಡ್ತಿದಾಳೆ" ಅಂತ ಅಮ್ಮ ಹೇಳಿದಾಗ, ’ಅಯ್ಯೋ! ಸಂಗೀತ ಅಂದ್ರೆ ಹೀಗೆ ಕೆಟ್ಟದಾಗಿ ಅಳ್ಬೇಕಾ?’ ಅಂದ್ಕೊಂಡು ಮಲಗಲು ಪ್ರಯತ್ನಿಸಿದ.

ಒಂದೆರಡು ದಿನ ಇದೇ ಪುನರಾವರ್ತನೆಯಾಯಿತು. ಮೂರನೇ ದಿನ ಬೆಳಗಾದ ನಂತರ ಅಕ್ಕಪಕ್ಕದ ಮನೆಯವರು ಬಂದು ತಮಗಾಗುತ್ತಿರುವ ನಿದ್ರಾಭಂಗದ ಬಗ್ಗೆ ದೂರು ನೀಡಿ, ಗೀತಾ ಬೆಳಗಿನ ಅಭ್ಯಾಸ ಕೈಬಿಡಲೇಬೇಕೆಂದು

ನಿಷ್ಠುರವಾಗಿ ತಿಳಿಸಿಬಿಟ್ಟರು. ಮನೆಯ ಮಾಲೀಕರು ಅದೇ ವಠಾರದಲ್ಲಿದ್ದವರು ನಯವಾಗಿ ಹೇಳಿದರು, "ನೋಡೀಮ್ಮಾ, ನಿಮ್ಮ ಗೀತಳಿಗೆ ಸಂಗೀತ ಅಂದರೆ ತುಂಬಾ ಇಷ್ಟ ಅಂತ ಗೊತ್ತು. ಅವಳ ಅಭ್ಯಾಸಕ್ಕೆ ಈ ಸ್ಥಳ ಸರಿಯಿಲ್ಲ. ನೀವು ಬೇರೆಲ್ಲಾದರೂ ಮನೆ ನೋಡಿಕೊಂಡರೆ ಅವಳಿಗೂ ಅನುಕೂಲ, ನಮಗೂ ನೆಮ್ಮದಿ". ತಮ್ಮನಂತೂ, "ಅಕ್ಕ ದಿನಾ ನನ್ನ ನಿದ್ದೆ ಕೆಡಿಸೋ ಹಾಗಿದ್ದರೆ, ನನ್ನನ್ನು ಬೇರೆಲ್ಲಾದರೂ ಹಾಸ್ಟೆಲ್ಲಿಗೆ ಸೇರಿಸಿಬಿಡಿ" ಎಂದು ಹಠ ಹಿಡಿದ.



ಕೃಷ್ಣ ಗಣೇಶ

ಇದೆಲ್ಲದರ ಪರಿಣಾಮವಾಗಿ, ಸಂಗೀತ ವಿದುಷಿ ಯಾಗಬೇಕೆಂದಿದ್ದ ಗೀತಾ ತನ್ನ ಸಂಗೀತ ಕಲಿಕೆ ಯನ್ನು, ಹಾಡುವುದನ್ನು ಲೋಕೋಪಕಾರಕ್ಕೆಂಬಂತೆ ತ್ಯಾಗ ಮಾಡಿಬಿಟ್ಟಳು.

ಅದಕ್ಕೆ ಸರಿಯಾಗಿ ಮುಂದೆ ಒಂದು ಐಟಿ ಕಂಪನಿಯಲ್ಲಿ ಉದ್ಯೋಗಕ್ಕೆ ಸೇರಿದ್ದರಿಂದ ಸಂಗೀತಾಭ್ಯಾಸಕ್ಕೆ ಸಮಯವೂ ಸಿಗುತ್ತಿರಲಿಲ್ಲ. ಸಮಯವಿರುತ್ತಿದ್ದರೆ ಮತ್ತೆ ಅಭ್ಯಾಸ ಮುಂದುವರೆಸುತ್ತಿದ್ದಳೋ ಏನೋ.

ಗೀತಾಳಿಗೆ ಇದನ್ನು ಒಂದು ಸವಾಲಾಗಿ ಸ್ವೀಕರಿಸಿ, ಶ್ರದ್ಧೆಯಿಂದ, ದೃಢ ಮನಸ್ಕಳಾಗಿ, ನಿರಂತರವಾಗಿ ಅಭ್ಯಾಸ ಮಾಡುವ ತಾಕತ್ತಿತ್ತಾದರೂ ಅವಳಿಗೆ ಉದ್ಯೋಗದಲ್ಲೇ ಹೆಚ್ಚು ಆಸಕ್ತಿಯುಂಟಾಗಿ ಸಂಗೀತ ಕೇಳಿ ಆನಂದಿಸುವ ಅಭ್ಯಾಸ ಮಾತ್ರ ಉಳಿಸಿಕೊಂಡಳು.

ಸಂಗೀತ ಹಾಡಲಾಗದಿದ್ದರೂ, ತನ್ನ ಹೆಸರಿನಲ್ಲಾದರೂ ಗೀತಾ ಎಂದಿದೆಯಲ್ಲ ಎನ್ನುವುದಷ್ಟೇ ಅವಳಿಗೆ ಈಗ ಸಮಾಧಾನದ ಸಂಗತಿ.

***

ಶಿಕ್ಷಣ ಮತ್ತು ಅದರ ಧ್ಯೇಯೋದ್ದೇಶಗಳು

– ಎಲ್.ಗಿರಿಜಾ ರಾಜ್

ಸೃಷ್ಟಿಯ ಉತ್ತುಂಗ ಶಿಖರದಲ್ಲಿರುವ ಮನುಷ್ಯನು, ಜೀವಿಗಳಲ್ಲಿ ಉತ್ಕೃಷ್ಟನಾದವನು, ವಿಶೇಷವಾಗಿ ಅಭಿವೃದ್ಧಿ ಯಾಗಿರುವ ಅಂಗಾಂಗಗಳು ಮುಖ್ಯವಾಗಿ ಮೆದುಳು, ಮಾತಾಡಬಲ್ಲ ಶಕ್ತಿ, ಯೋಚನಾ ಸಾಮರ್ಥ್ಯದಿಂದ ಉಳಿದ ಪ್ರಾಣಿ ಪ್ರಪಂಚದಿಂದ ಭಿನ್ನವಾಗಿ ನಿಂತಿದ್ದಾನೆ.

ದಾಸಶ್ರೇಷ್ಠರಾದ ಪುರಂದರರ "ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲು ಬೇಡಿ, ಹುಚ್ಚಪ್ಪಗಳಿರಾ!" ಎಂಬ ಪ್ರಸಿದ್ಧ ಕೀರ್ತನೆಯ ಸಾಲುಗಳನ್ನು ನೆನೆಯಬಹುದು. ಪ್ರಖ್ಯಾತ ನಾಟಕಕಾರನಾದ ಶೇಕ್ಸ್‌ಪಿಯರ್, ಭಗವಂತನ ಶ್ರೇಷ್ಠ ಕೃತಿಯಾದ ಮಾನವನ ಬಗ್ಗೆ ಹೀಗೆ ಉದ್ಗರಿಸಿದ್ದಾನೆ:

'What a piece of work is Man! The beauty of the world and the paragon of animals'
(ಅಬ್ಬ! ಎಂಥ ಅನುಪಮ ಕಲಾಕೃತಿ ಮನುಷ್ಯ! ದೇವರಿಂದ ನಿರ್ಮಾಣವಾದ ಮನುಷ್ಯ ಪ್ರಪಂಚದ ಎಲ್ಲ ಸೌಂದರ್ಯದ ಮೊತ್ತ! ಪ್ರಾಣಿ ಪ್ರಪಂಚದ ಶಿರೋರತ್ನ).

ಆದಿವಾಸಿಯಾಗಿ ಕಾಡಿನಲ್ಲಿ ಬದುಕುತ್ತಿದ್ದ ಮನುಷ್ಯ, ತನ್ನ ಬುದ್ಧಿಶಕ್ತಿ, ತೋಳ್ಬಲಗಳಿಂದ ಕಾಲಕ್ರಮೇಣ ತನ್ನ ಸುತ್ತ ಒಂದು ಸಮಾಜವನ್ನು ಕಟ್ಟಿಕೊಂಡು ಸಂಸ್ಕೃತಿ, ನಾಗರೀಕತೆಗಳನ್ನು ಮೈಗೂಡಿಸಿಕೊಂಡಿದ್ದು ಅದ್ಭುತ ಚರಿತ್ರೆ. ಶಿಕ್ಷಣ ಪಡೆಯುವ ಅರ್ಹತೆ ಇರುವ ಅದ್ಭುತ ಜೀವಿ ಎಂದರೆ ಇವನೊಬ್ಬನೇ. ವಿದ್ಯೆಯಿಲ್ಲದವನು ಪಶುವಿಗಿಂತ ಹೆಚ್ಚೇನೂ ಅಲ್ಲ ಎಂದು ಹಿರಿಯರು ಹೇಳುತ್ತಾರೆ.

ಇಂಗ್ಲೀಷ್‌ನಲ್ಲಿ ಶಿಕ್ಷಣಕ್ಕೆ ಸಮಾನವಾದ ಪದ **Education** (ಲ್ಯಾಟಿನ್ ಮೂಲ), **Educe** ಎಂದರೆ "ಹೊರಗೆಳೆ" ಎಂದರ್ಥ!

ಮಹಾತ್ಮ ಗಾಂಧೀಜಿಯಾಗಲೀ, ಸ್ವಾಮಿ ವಿವೇಕಾನಂದರಾಗಲೀ, ರವೀಂದ್ರನಾಥ ಟ್ಯಾಗೂರರಾಗಲೀ ಶಿಕ್ಷಣದ ಬಗ್ಗೆ ಒಂದೇ ಅಭಿಪ್ರಾಯ ಉಳ್ಳವರಾಗಿದ್ದಾರೆ. ಹೇಳಿರುವ ರೀತಿ, ಪದ ಜೋಡಣೆ ಬೇರೆಯಾದರೂ ಭಾವ ಹೆಚ್ಚು ಕಡಿಮೆ ಒಂದೇ ಆಗಿದೆ. ಮಹಾಪುರುಷರ ಆಲೋಚನಾ ಕ್ರಮಗಳು ಒಂದೇ ರೀತಿಯಾಗಿರುತ್ತವೆ ಎಂಬುದಕ್ಕೆ ಇದೇ ಸಾಕ್ಷಿ! "ಮನುಷ್ಯನಲ್ಲಿ ಮೊದಲೇ ಸುಪ್ತವಾಗಿರುವ ಪರಿಪೂರ್ಣತೆಯ ಪ್ರಕಾಶನವೇ ಶಿಕ್ಷಣ" ಎಂದು ವಿವೇಕವಾಣಿ ನುಡಿದರೆ "ಮಗು ಮತ್ತು ಮಾನವನಲ್ಲಿ ಶರೀರ, ಮನಸ್ಸು ಹಾಗೂ ಆತ್ಮದಲ್ಲಿಯ ಅತ್ಯುತ್ತಮ ಅಂಶಗಳನ್ನು ಹೊರಗೆಳೆಯುವುದೇ ಶಿಕ್ಷಣ" ಎಂಬುದು ಮಹಾತ್ಮನ ಉದ್ಗಾರ!

ಮಕ್ಕಳು ಸ್ವಚ್ಛಂದವಾಗಿ ಪ್ರಕೃತಿಯ ಮಡಿಲಿನಲ್ಲಿ ಆಡುತ್ತಾ, ಹಾಡುತ್ತಾ ಕಲಿಯಬೇಕು ಎಂಬ ಉನ್ನತ ವಿಚಾರಗಳನ್ನು ಹೊಂದಿದ್ದ ಟ್ಯಾಗೋರ್, "ನಿಸರ್ಗವೇ ಮಕ್ಕಳ ದೇಹ, ಮನಸ್ಸು, ಆತ್ಮದಲ್ಲಿ ಅಡಗಿರುವ ಶಕ್ತಿಗಳು ವಿಕಾಸಹೊಂದಿ ಹೊರಹೊಮ್ಮುವಂತೆ ಮಾಡುವುದು" ಎನ್ನುತ್ತಿದ್ದರು. ಈ ಸುವಿಶಾಲ ಮನೋಭಾವವೇ ಶಾಂತಿ ನಿಕೇತನ ಮತ್ತು ವಿಶ್ವಭಾರತಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಕಾರಣವಾಯಿತು.

ಪಾಶ್ಚಾತ್ಯ ಶಿಕ್ಷಣತಜ್ಞರಾದ ಅರಿಸ್ಟಾಟಲ್, ಪೆಸ್ಟಾಲಝಿ, ಫ್ರೋಬೆಲ್, ಹರ್ಬಾರ್ಟ್ ರಾಸ್ ಅಥವಾ ಟಿ.ಪಿ.ನನ್, ಜಾನ್ ಡ್ಯೂಯಿ ಎಲ್ಲರೂ ಮಕ್ಕಳ ಆಂತರಿಕ ಬೆಳವಣಿಗೆ, ವ್ಯಕ್ತಿತ್ವ ವಿಕಾಸ, ದೈಹಿಕ ಮತ್ತು ಮಾನಸಿಕ ಸಮಗ್ರ ವಿಕಸನಕ್ಕೆ ಒತ್ತುಕೊಟ್ಟವರು. ಸ್ವಾಮಿ ಪುರುಷೋತ್ತಮಾನಂದರ ಪ್ರಕಾರ, ವಿದ್ಯಾರ್ಥಿಗಳಲ್ಲಿ ಇರುವ ಅಂತಃಶಕ್ತಿಯ ಮೂರು ವಿಧವಾದ ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಯನ್ನು ಸಮರ್ಥವಾಗಿ ಜಾಗೃತಗೊಳಿಸುವವನೇ ನಿಜವಾದ ಶಿಕ್ಷಕ.

ಮನುಸ್ಮೃತಿ, ವಿಷ್ಣುಪುರಾಣ, ಮಹಾಭಾರತ, ಹಿತೋಪದೇಶ, ಸುಭಾಷಿತ ರತ್ನ ಭಾಂಡಾಗಾರ ಸಮಯೋಚಿತ ಪದ್ಯ ಮಾಲಿಕಾ, ಹರಿಹರ ಸುಭಾಷಿತ ಗ್ರಂಥಗಳಲ್ಲಿ ಶಿಕ್ಷಣದ ಬಗ್ಗೆ ಸೊಗಸಾದ ಶ್ಲೋಕಗಳಿವೆ. ಒಂದೆರೆಡು ಉತ್ತಮ ಶ್ಲೋಕಗಳು ಹಾಗೂ ಅವುಗಳ ಅರ್ಥವನ್ನು ಹೇಳಲಿಚ್ಛಿಸುತ್ತೇನೆ

1. "ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ" (ಸುಭಾಷಿತ ರತ್ನ ಭಾಂಡಾಗಾರದಿಂದ)
   ವಿದ್ವತ್ತು ಮತ್ತು ರಾಜತ್ವ ಎಂದಿಗೂ ಸಮಾನವಲ್ಲ. ರಾಜನು ತನ್ನ ದೇಶದಲ್ಲಿ ಮಾತ್ರ ಪೂಜಿತನಾಗುತ್ತಾನೆ, ವಿದ್ವಾಂಸನು ಎಲ್ಲ ದೇಶಗಳಲ್ಲೂ ಪೂಜಿತನಾಗುತ್ತಾನೆ.

2. "ವಿದ್ಯಾ ದದಾತಿ ವಿನಯಂ, ವಿನಯಾದ್ಯಾತಿ ಪಾತ್ರತಾಮ್
   ಪಾತ್ರತ್ವಾದ್ಧನ ಮಾಪ್ನೋತಿ ಧನಾದ್ಧರ್ಮಂ ತತಃ ಸುಖಮ್" (ಹಿತೋಪದೇಶದಿಂದ)
   ವಿದ್ಯೆ ವಿನಯವನ್ನು ಕೊಡುತ್ತದೆ, ವಿನಯದಿಂದ ಅರ್ಹತೆ ಬರುತ್ತದೆ. ಅರ್ಹತೆಯಿಂದ ಧನಪ್ರಾಪ್ತಿಯಾಗುತ್ತದೆ, ಧನದಿಂದ ಧರ್ಮವೂ, ಧರ್ಮದಿಂದ ಸುಖವೂ ಉಂಟಾಗುತ್ತದೆ.

ಶಿಕ್ಷಣದ ಗುರಿ, ಉದ್ದೇಶಗಳು:

ವೇದಗಳ ಕಾಲದ ಶಿಕ್ಷಣದ ಗುರಿಯಂತೂ ಆತ್ಮ ಸಾಕ್ಷಾತ್ಕಾರ, ಮೋಕ್ಷಸಾಧನೆ. ಅಷ್ಟೇ ಅಲ್ಲದೆ, ಕರುಣೆ, ಮಮತೆ, ಸಹಜೀವನ, ಹೊಂದಾಣಿಕೆ, ಸ್ವಾವಲಂಬನೆಯೂ ಆಗಿನ ಕಾಲದ ಶಿಕ್ಷಣದ ಗುರಿಯಾಗಿತ್ತು. ಪ್ರಾಚೀನ ಭಾರತದಲ್ಲಿ ಧರ್ಮವು ಪ್ರಮುಖ ಪಾತ್ರ ವಹಿಸಿದ್ದರಿಂದ ಧರ್ಮವನ್ನು ಅಭ್ಯಾಸ ಮಾಡುವುದು ಪ್ರಮುಖ ಉದ್ದೇಶವಾಗಿತ್ತು.

ಬೌದ್ಧರ ಕಾಲದ ಶಿಕ್ಷಣದಲ್ಲಿ ಅಹಿಂಸೆಯೇ ಪ್ರಮುಖ ತತ್ವ. ಬುದ್ಧ ಬೋಧಿಸಿದ ಅಷ್ಟಾಂಗ ಮಾರ್ಗಗಳನ್ನು ವಿದ್ಯಾರ್ಥಿಗಳು ಜೀವನದುದ್ದಕ್ಕೂ ಅಳವಡಿಸಿಕೊಳ್ಳಬೇಕಾಗಿತ್ತು. ಅವಾದರೋ ಒಬ್ಬ ವ್ಯಕ್ತಿ ಪರಿಪೂರ್ಣವಾಗಿ ಸಚ್ಚಾರಿತ್ರ್ಯ ರೂಪಿಸಿಕೊಳ್ಳಲು ಪ್ರಶಸ್ತವಾದ ತತ್ವಗಳೇ. ಅಲೌಕಿಕ ಅಥವಾ ಆಧ್ಯಾತ್ಮ ಸುಖದ ಕಡೆ ಒಲವು ಕಾಲ ಕ್ರಮೇಣ ಕಡಿಮೆಯಾಗಿ ಭೌತಿಕ ಅಥವಾ ಲೌಕಿಕ ಸುಖಗಳನ್ನು ಹೊಂದುವುದೇ ಶಿಕ್ಷಣದ ಗುರಿಯಾಯಿತು. ಆಸೆಗಳು ಒಂದು ಮಿತಿಯಲ್ಲಿದ್ದಾಗ ಮನುಷ್ಯನ ಹೃದಯದಲ್ಲಿ ಕರುಣೆ, ಅನುಕಂಪ, ಪ್ರೀತಿ, ಮಾನವೀಯತೆಗಳೂ ಮಿಳಿತವಾಗಿದ್ದವು. ಆದರೆ ಕ್ರಮೇಣ ಶಿಕ್ಷಣದ ಗುರಿ, ಒಳ್ಳೆಯ ವೃತ್ತಿ ಆಶ್ರಯಿಸಿ, ಆರ್ಥಿಕ ಸಬಲತೆ ಹೊಂದಿ ತಾನು, ತನ್ನ ಪತ್ನಿ, ಮಕ್ಕಳ ಯೋಗಕ್ಷೇಮಕ್ಕಷ್ಟೇ ಸೀಮಿತವಾಯ್ತು. ಒಟ್ಟು ಕುಟುಂಬಗಳ ಸಾಮರಸ್ಯತೆ ಒಡೆದು ಪ್ರತ್ಯೇಕವಾದುದು ಬಹುಶಃ ಈ ಹಂತದಲ್ಲಿ!

ಸಾಮಾಜಿಕ ನಾಟಕಗಳ ಪ್ರಪಿತಾಮಹರೆನಿಸಿದ ಟಿ.ಪಿ.ಕೈಲಾಸಂ ತಮ್ಮ 'ಟೊಳ್ಳುಗಟ್ಟಿ' ಅಥವಾ 'ಮಕ್ಕಳಸ್ಕೂಲ್ ಮನೇಲಲ್ವೇ?' ನಾಟಕದಲ್ಲಿ ಮಾನವೀಯತೆಯಿಲ್ಲದ ಶಿಕ್ಷಣವನ್ನು ಟೀಕಿಸಿದ್ದಾರೆ. ಮಾಧು ಮತ್ತು ಪುಟ್ಟು ಪಾತ್ರಗಳ

ಮೂಲಕ ಆ ಸತ್ಯವನ್ನು ಸೊಗಸಾಗಿ ಅನಾವರಣಗೊಳಿಸುತ್ತಾರೆ. ತರಗತಿಯಲ್ಲಿ ಬೋಧಿಸುವ ವಿಷಯಗಳಿಗೂ ದಿನನಿತ್ಯ ಜೀವನದ ಸನ್ನಿವೇಶಗಳಿಗೂ ಸಂಬಂಧವೇ ಇಲ್ಲದ ಶಿಕ್ಷಣವನ್ನು "ಪಾತಾಳಗರಡೀ ಕ್ರಮ"ಎಂದು ವಿಡಂಬಿಸಿದ್ದಾರೆ.

ಕಲಿಕೆಗೆ ಕೊನೆಯೆಂಬುದೇ ಇಲ್ಲ. ಮನುಷ್ಯ ಸಾಯುವವರೆಗೂ ಈ ಜಗತ್ತಿನಲ್ಲಿ ತಿಳಿದುಕೊಳ್ಳುವುದು ಅನಂತ ವಾಗಿರುತ್ತದೆ. ವಯಸ್ಕರ ಶಿಕ್ಷಣದಲ್ಲಿ ಹಣ್ಣು ಕೂದಲಿನ ಮುದುಕರು, ಎಪ್ಪತ್ತರ ನಂತರದ ವೃದ್ಧರೂ ಸ್ಲೇಟು ಬಳಪ ಹಿಡಿದು ಬರೆಯುವುದು, ವಿದ್ಯಾಭ್ಯಾಸಕ್ಕೆ ವಯಸ್ಸಿನ ಭೇದವಿಲ್ಲ ಎಂಬುದನ್ನು ಸಾರುತ್ತದೆ. ಸಾಕ್ಷರತೆಯು ಹಳ್ಳಿಗಳಲ್ಲಿ ಹೆಬ್ಬೆಟ್ಟು ಒತ್ತಿ ಮೋಸಕ್ಕೆ ಒಳಗಾಗುವ ಪ್ರಸಂಗಗಳನ್ನು ತಪ್ಪಿಸಿ ಅರಿವಿನ ಬೆಳಕನ್ನು ನೀಡಿದೆ.

ಆದರೆ ವಿದ್ಯಾಭ್ಯಾಸದ ಹಿರಿಮೆ, ಪಾವಿತ್ರ್ಯಗಳನ್ನು ಕಡೆಗಣಿಸಿ ಕೇವಲ ಹಣ ಸಂಪಾದನೆಗಾಗಿ, ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುವ ಧನದಾಹಿಗಳು ನಕಲಿ ಅಂಕಪಟ್ಟಿ ತಯಾರಿಸಿ ಮಾರುವುದು, ಒಬ್ಬ ವಂಚಕ, ವೈದ್ಯನಂತೆಯೋ, ಪೋಲೀಸನಂತೆಯೋ, ವಿವಿಧ ವೇಷಗಳನ್ನು ಧರಿಸಿ, ಸಾಮಾನ್ಯರನ್ನು ಮೋಸಗೊಳಿಸುವ ಪ್ರಸಂಗಗಳು ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿಬಿಟ್ಟಿದೆ.

ಸರಸ್ವತಿಯ ಆರಾಧನೆ ನಡೆಯುವ ಜ್ಞಾನ ದೇಗುಲದಲ್ಲಿ, ಎಂಥ ಪಾವಿತ್ರ್ಯತೆ ನೆಲೆಯಾಗಿರಬೇಕಾಗಿತ್ತೋ ಅದಿಲ್ಲ ಈಗ. ಎಲ್ಲವನ್ನೂ ಪ್ರಾಯೋಜಕ ದೃಷ್ಟಿಯಿಂದಲೇ ನೋಡುವ ಸ್ವಾರ್ಥಿ ಮನುಷ್ಯನಿಗೆ ನೀತಿಯೋ, ಅನೀತಿಯೋ ಯಾವ ಮಾರ್ಗದಲ್ಲಾದರೂ ಸರಿಯೆ! ಹಣ ಸಂಪಾದನೆಯೇ ಪರಮ ಉದ್ದೇಶವಾಗಿದೆ.

ಕೊನೆಯ ಮಾತು, ಗಾಂಧೀಜಿಯವರು, 'ತಪ್ಪುಮಾಡುವುದಿದ್ದರೆ ಹೊಸ ತಪ್ಪುಗಳನ್ನು ಮಾಡು, ಮಾಡುವ ಒಂದೊಂದು ತಪ್ಪಿನಿಂದಲೂ ಪಾಠ ಕಲಿಯಬಹುದು' ಎಂದು ಮಾರ್ಮಿಕವಾಗಿ ಹೇಳಿದ್ದಾರೆ. ಮಾಡಿದ ತಪ್ಪುಗಳನ್ನೇ ಮಾಡುತ್ತ, ಮೂರ್ಖರಂತೆ ನಾವೇ ತೋಡಿದ ಹಳ್ಳದಲ್ಲಿ ನಾವೇ ಸಮಾಧಿಯಾಗುವಂತೆ, ಮಕ್ಕಳಿಗೆ ಆದರ್ಶದ ಮೇಲ್ಪಂಕ್ತಿ ಹಾಕಿಕೊಡದೆ ಅವನತಿಯ ಹಾದಿಗೆ ಕೊಂಡೊಯ್ಯುತ್ತಿದ್ದೇವೆಯೇ?

***



ಲೇಖನ ಮಾಲೆ – ೨

'ನಾನೂ, ನನ್ನ ಸಹಪಾಠಿ ಮಿತ್ರನೂ'

ಕ್ಷಮೆ – ಕರುಣೆ

– ಮಾಧುರಿ ಕೃಷ್ಣ

ಆ ದಿನ ನಾನು ನನ್ನ ಸಹಪಾಠಿ ಮಿತ್ರನ ಮನೆಗೆ ಹೋದಾಗ ಅವನು ತನ್ನ ಅನಿವಾರ್ಯ ಭಾಗವಾಗಿದ್ದ ಮರದ ಕುರ್ಚಿಯಲ್ಲಿ ಕುಳಿತಿದ್ದ ಅವನು ಯಾಕೋ ತುಸು ಹೆಚ್ಚಿಗೆಯೇ ಗಂಭೀರವಾಗಿದ್ದಾನೆನಿಸಿತು. ಹಣೆಯ ನರಗಳು ಗಂಟುಕಟ್ಟಿದ ರೀತಿಯಲ್ಲಿ ಕಾಣಿಸುತ್ತಿದ್ದುವು.

'ಏನು ಅವನಿಗೆ ಆರೋಗ್ಯ ಹೆಚ್ಚುಕಮ್ಮಿ ಆಗಿರಬಹುದೇ! ನಾನು ಬಂದದ್ದು ಉಪದ್ರವಾಗಬಹುದೇ! ಬಂದದ್ದಂತೂ ಬಂದಾಯ್ತು, ಹೆಚ್ಚು ಸಮಯ ಇರುವುದು ಬೇಡ, ಬೇಗನೆ ಹೊರಟು ಬಿಡೋಣ' ಎಂದು ಮನಸ್ಸಲ್ಲೇ ಯೋಚಿಸುತ್ತ, ಅವನ ಮೊಮ್ಮಗ ತಂದ ಎಳನೀರು ಕುಡಿದು ಮುಗಿಸಿದೆ. ಮಿತ್ರ ಇನ್ನೂ ಏನೊಂದೂ ಮಾತಾಡಿರಲಿಲ್ಲ. ಕರ್ಚೀಫಿನಿಂದ ಬಾಯಿ ಒರೆಸಿಕೊಳ್ಳುತ್ತ, "ಅಬ್ಬ! ನೀವೆಲ್ಲ ಈ ಸೆಕೆಯನ್ನು ಅದ್ಹೇಗೆ ಸಹಿಸಿಕೊಳ್ಳುತ್ತೀರೋ ನಾ ಕಾಣೆ, ನಾನಂತೂ ಏಪ್ರಿಲ್ ಮೇ ತಿಂಗಳಲ್ಲಿ ಯಾರೆಷ್ಟು ಕರೆದರೂ ಊರಿಗೆ ಬರುವುದೇ ಇಲ್ಲ. ಮಾರ್ಚ್‌ಗೇ ಹೀಗಿದ್ದರೆ...!"

ಈಗಲೂ ಅವನೇನೂ ಮಾತನಾಡುವ ಮನಸ್ಸು ಮಾಡಲಿಲ್ಲ. ನನಗೆ ಗಲಿಬಿಲಿ ಉಂಟಾಯಿತು 'ಏನಾಗಿದೆ ಇವನಿಗೆ ಇವತ್ತು!' ಎಂದು ಅವನ ಹೆಣ್ಣುಮಕ್ಕಳೆಡೆ ನೋಡುವುದರೊಳಗೆ ಮಿತ್ರನೇ ನನ್ನನ್ನು ಕೇಳಿಬಿಟ್ಟ, "ನಿನಗೆ ಆ ಸ್ಪೋರ್ಟ್ಸ್ ಡೇ ನೆನಪಿದೆಯಾ?"

"ಸ್ಪೋರ್ಟ್ಸ್ ಡೇ!" ಜ್ಞಾಪಿಸಿಕೊಳ್ಳುವ ಅಗತ್ಯವೇ ಇಲ್ಲದಿದ್ದರೂ, ಅಷ್ಟು ಬೇಗ ಅದನ್ನು ಒಪ್ಪಿಕೊಳ್ಳಬಾರದೆಂಬಂತೆ ಮುಗ್ಧತೆ ನಟಿಸಿದೆ. ಈಗ ಸಹಪಾಠಿ ಮಿತ್ರ ನನ್ನ ಕಣ್ಣುಗಳನ್ನು ನೇರ ದಿಟ್ಟಿಸಿದ. ವಿನೋದದ ಕಿರಿನಗುವೊಂದು ಅವನ ತುಟಿಗಳಲ್ಲಿ ವಕ್ರವಾಗಿ ಮಿನುಗಿತು. ನಾನು ಗಮನಿಸದವಳಂತೆ ಹಾಗೇ ಉಳಿದೆ. ಕೊನೆಗೆ ನಿಟ್ಟುಸಿರೊಂದನ್ನು ಹೊರಹಾಕಿ ಹೇಳಿದ.

"ಅದೇ, ನೀನು ಸ್ಪೋರ್ಟ್ಸ್ ಸೆಕ್ರೆಟರಿಯಾದ ವರ್ಷದ ಸ್ಪೋರ್ಟ್ಸ್ ಡೇ!" ಯಾಕೋ ಮಾತು ಸಲೀಸಾಗಿ ಹೊರಬರಲಿಲ್ಲ. ಕೊನೆಯ ಶಬ್ದವಂತೂ ತುಸು ಅಸ್ಪಷ್ಟವೆನಿಸಿತು.

ಇನ್ನು ನಟಿಸಿ ಪ್ರಯೋಜನವಿಲ್ಲ! ಈ ಚಾಪ್ಟರ್ ನನ್ನಲ್ಲೂ ಅಳಿಸಿಹೋಗಬೇಕು. 50 ವರ್ಷಗಳಿಂದಲೂ ಯಾರಲ್ಲೂ ಹೇಳದೇ, ಹೇಳಿಕೊಳ್ಳಲಾಗದೇ ಇದ್ದ ಸಂಗತಿಯೊಂದು ಕೊನೆಗಾದರೂ ಮೋಕ್ಷ ಕಾಣಲೇಬೇಕು! ಎಂದು ಮನಸ್ಸಲ್ಲೇ ಅಂದುಕೊಂಡರೂ ಎದೆಯಲ್ಲಿ ಅವಲಕ್ಕಿ ಕುಟ್ಟತೊಡಗಿತು.

ಮಿತ್ರ ಮಗಳಿಗೆ ಸನ್ನೆ ಮಾಡಿದನೇನೋ, ಮಗಳು ಎದ್ದು ಬಂದು ಕಂಕುಳಿಗೆ ಕೈಹಾಕಿ, ಅವನನ್ನು ತುಸು ಎತ್ತಿ ಸರಿಯಾಗಿ ಕೂರಿಸಿದಳು. ನಾನಿನ್ನೂ ಅವನ ಮಾತಿಗೆ ಉತ್ತರಿಸಿರಲಿಲ್ಲ. ಅವನೇ ಮಾತಾಡಲು ಶುರುಮಾಡಿದ.
"ಆವತ್ತು ನಿನಗೆ ಮೈ ಮೇಲೇನೋ ಆವೇಶ ಬಂದಂತಿತ್ತು. ಒಂದರ ಮೇಲೊಂದು ಸ್ಪೋರ್ಟ್ ಐಟಂನಲ್ಲಿ ಗೆಲ್ಲುತ್ತಾ ಇನ್ನೇನು ಆ ವರ್ಷದ ಸ್ಪೋರ್ಟ್ಸ್ ಚಾಂಪಿಯನ್ನೂ ಆಗುವುದರಲ್ಲಿದ್ದೆ".

ಈಗ ನನ್ನ ಬಾಯಿಂದ ಮಾತು ಸ್ಫೋಟಿಸಿಕೊಂಡು ಸಿಡಿಯಿತು. "ಆಗುವುದರಲ್ಲಿದ್ದೆ ಏನು? ಆಗಿಯೇ ಬಿಟ್ಟಿದ್ದೆ. ಮೊದಲ ಬಾರಿಗೇ ಎಸೆದುಬಿಟ್ಟ ಆ ಜ್ಯಾವೆಲಿನ್ ದೂರ ಹೋಗಿ ಕುಳಿತು, ಇನ್ನಾರೂ ಅದರ ಸಮೀಪಕ್ಕೂ ಎಸೆದಿರಲಿಲ್ಲ.!!"

"ಹೌದು!" ಮಿತ್ರ ಪೂರಾ ಐವತ್ತು ವರ್ಷಗಳ ಬಳಿಕ ತಲೆ ತಗ್ಗಿಸಿದ. ಇಷ್ಟು ದಿನಗಳ ಭೆಟ್ಟಿಯಲ್ಲಿ ಪ್ರಥಮಬಾರಿ ನನ್ನನ್ನು ನೇರ ನೋಡದಾದ. ನನ್ನೆದೆಯ ಬೆಂಕಿ ಎಲ್ಲ ಜ್ವಾಲಾಮುಖಿಯಂತೆ ಕಣ್ಣುಗಳಲ್ಲಿ ಅಂದು ಹೊರ ಸುರಿದಂತೆ ಇಂದೂ ಹೊರಮುಖ ಜ್ವಲಿಸುತ್ತಿತ್ತೋ ಏನೋ! ಮಿತ್ರ ಕುಳಿತಲ್ಲೇ ಚಡಪಡಿಸತೊಡಗಿದ. ಅವನ ಹೆಣ್ಣುಮಕ್ಕಳಿಬ್ಬರೂ ಅನಿರೀಕ್ಷಿತವೆಂಬಂತೆ ದಿಗ್ಭ್ರಾಂತರಾದರು. ಅಲ್ಲಿ ಕುಳಿತಿದ್ದ ಎಲ್ಲರಲ್ಲೂ ಉಸಿರು ಒಳಗೇ ಅಡಗಿಬಿಟ್ಟಿತು.

"ಹೌದು!! ಘೋರಾಪರಾಧ ನನ್ನಿಂದ ನಡೆಯಿತು, ಅಕಾರಣವಾಗಿ ನಿನಗೆ ಅನ್ಯಾಯ ಮಾಡಿದೆ. ತಪ್ಪು ಮಾಡಿದೆ!".

ನಾನು ಅವನ ಮುಖ ನೋಡಲಿಲ್ಲ. ಅಂದು ನನಗೆ ಸಲ್ಲಬೇಕಾದ ಗೆಲುವು, ಯಶಸ್ಸು, ಆ ವರ್ಷದ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್, ನನ್ನ ಕೈ ಬೆರಳುಗಳಿಂದ ಬಿಡಿಸಲ್ಪಟ್ಟು, ಇನ್ನೊಬ್ಬ ವಿದ್ಯಾರ್ಥಿನಿಗೆ ವಿನಾಕಾರಣ ಕೊಡಲ್ಪಟ್ಟಿತು. ನನ್ನ ಎಸೆತದ ಮಾರ್ಕರ್, ಇದೇ ಸಹಪಾಠಿ ಮಿತ್ರನಿಂದಾಗಿ ಹಿಚುಕಿ ಎಸೆಯಲ್ಪಟ್ಟಿತು. ಎಲ್ಲ ತೀರ್ಪುದಾರರ, ವಿದ್ಯಾರ್ಥಿಗಳ ಮುಂದೆ ನಡೆದ ಈ ದಾರ್ಷ್ಟ್ಯವನ್ನು ಯಾರೂ ಖಂಡಿಸಲೇ ಇಲ್ಲ. ಒಬ್ಬಂಟಿಯಾಗಿ ಪ್ರತಿಭಟಿಸುತ್ತಿದ್ದ ನನ್ನನ್ನು ನಮ್ಮ ಪಿ.ಟಿ. ಇನ್ಸ್ಟ್ರಕ್ಟರ್ ಕೈಹಿಡಿದು ಗ್ರೌಂಡಿಂದ ಹೊರತಂದು, "ಪ್ಲೀಸ್, ಏನೂ ಮಾತಾಡಬೇಡ, ಕಾಲೇಜಲ್ಲಿ ದೊಡ್ಡ ಗಲಾಟೆಯೇ ನಡೆದುಬಿಡಬಹುದು" ಎಂದು ಅಂಗಲಾಚಿದರು. ನಿಸ್ಸಹಾಯಕಳಾದ ನನಗೆ ಬೇರೆ ಆಯ್ಕೆ ಏನಿತ್ತು, ಮನೆಗೆ ಹಿಂದಿರುಗುವುದು ಬಿಟ್ಟರೆ?

ಅಳುತ್ತಾ, ವ್ಯವಸ್ಥೆಯ ವಿರುದ್ಧ ನೊಂದುಕೊಳ್ಳುತ್ತಾ ಲೇಡೀಸ್ ವೈಟಿಂಗ್ ರೂಮಿನಲ್ಲಿದ್ದ ನನ್ನ ಬ್ಯಾಗ್ ಪ್ಯಾಕನ್ನು ತೆಗೆದುಕೊಂಡು ಲಂಚ್ ಬಾಕ್ಸನ್ನು ಎತ್ತಿಕೊಳ್ಳಲು ಸಪರೇಟ್‌ನ್ನು ದಾಟಿ ಡೆಸ್ಕಿಗೆ ಕೈ ತೂರಿದ್ದೆನಷ್ಟೇ, ಹೊರಗೆ ಕಾರಿಡಾರಿನಲ್ಲಿ ಹುಡುಗರ ಗಲಾಟೆ ಕೇಳಿಸಿತು.

ಅಯ್ಯೋ ನಾನು ಗಲಾಟೆ ಮಾಡಿದುದರ ಕಾರಣದಿಂದ ಹುಡುಗರು ನನ್ನನ್ನು ಹಿಂಬಾಲಿಸಿ ಬಂದಿದ್ದಾರೆಯೇ? ಅನ್ಯಾಯ ಅವಮಾನದ ನೋವಿನೊಂದಿಗೆ ಭಯಂಕರ ಭಯವೂ ಈಗ ನನ್ನಲ್ಲಿ ಹುಟ್ಟಿತು. ಇಡೀ ದೇಹ ನಡುಗತೊಡಗಿತು. ಅಷ್ಟರಲ್ಲೇ ಧ್ವನಿಯೊಂದು ಕೇಳಿಸಿತು.

"ಯಾರು ನೀವು? ಯಾಕೆ ಇಲ್ಲಿಗೆ ಬಂದಿದ್ದೀರಿ? ನಿಮಗೇನು ಕೆಲಸ ಇಲ್ಲಿ?" ಹೆಂಗಸಿನ ಧ್ವನಿಯಲ್ಲಿ ಬಂದಿದ್ದರೂ ಕಟುವಾಗಿತ್ತು, ಉಗ್ರವಾಗಿ ಕೇಳಿಸಿತು.

"ಇವಳು ನಮಗೆಲ್ಲ ಬೈದು ಇಲ್ಲಿಗೆ ಬಂದಿದ್ದಾಳೆ!" ಇದೇ ಮಿತ್ರನ ಧ್ವನಿ ಸ್ಪಷ್ಟವಾಗಿ ಕೇಳಿಸಿತು.

"ಹೆಲೋ, ಹೆಲೋ.. ನೀನು ಮಾಡಿದ್ದು ಅಪರಾಧವಲ್ಲವೇ?" ನಮ್ಮ ಲೇಡಿ ಲೈಬ್ರರಿಯನ್ನರ ಧ್ವನಿ ಸ್ಪಷ್ಟವಾಗಿ ತೀಕ್ಷ್ಣವಾಗಿ ಗುಡುಗಿ ಬಂತು. "ಒಬ್ಬ ಬಡಪಾಯಿ ಟ್ಯಾಲೆಂಟೆಡ್ ಸ್ಪೋರ್ಟ್ಸ್ ಗರ್ಲ್‌ಗೆ ನೀನು ಅವಳು ಗಳಿಸಿರುವ ಜಯವನ್ನು

ನಿನ್ನ ಕೈಯಾರೆ ಕಿತ್ತು, ನಿನ್ನ ಕೆಟ್ಟ ಶಕ್ತಿಯ ಪ್ರದರ್ಶನವನ್ನು ತೋರಿಸಿದ್ದೂ ಅಲ್ಲದೇ ಇಲ್ಲಿಗೂ ಹಿಂಬಾಲಿಸಿ ಬಂದೆಯಾ? ಇದು ಸರಿಯೇ? ನಿನಗೆ ಇದು ತಮಾಷೆಯಾಗಿರಬಹುದು, ಆದರೆ ಇದು ಅಪರಾಧ, ಘೋರ ಅನ್ಯಾಯ! ನೆನಪಿಟ್ಟುಕೋ! ಈಗ ಸೀದಾ ಇಲ್ಲಿಂದ ಹೊರಟು ಹೋಗಿ!!"

ಸದಾ ಬೆಂಕಿಯ ಉಂಡೆಯಂತೆ ನನ್ನಲ್ಲಿ ಜ್ವಲಿಸುತ್ತಲೇ ಬಂದಿದ್ದ ಈ ಕೆಟ್ಟ ಘಟನೆ ಮತ್ತೊಮ್ಮೆ ಭುಗಿಲ್ಲೆಂದು ಮೇಲೇಳುತ್ತಿದ್ದಂತೆ ಅದೇ ಸಹಪಾಠಿ ಮಿತ್ರ ಕೊನೆಗೂ ಮಾತನಾಡಿದ.

"ಹೌದು! ಅದು ನನ್ನ ಜೀವನದ ಬಹು ದೊಡ್ಡ ತಪ್ಪಾಗಿತ್ತು. ಎಂದಿಗೂ ಸರಿಪಡಿಸಲಾಗದ ತಪ್ಪಾಗಿ ಉಳಿದುಬಂತು. ಯಾಕೆ ಅಂದು ಹಾಗೆ ಮಾಡಿದೆ ಎಂದು ಈವರೆಗೂ ನನಗೆ ಅರ್ಥವೇ ಆಗಿಲ್ಲ. ನೀನು ಮೊದಲಬಾರಿ ನನ್ನನ್ನು ಹುಡುಕಿ ನೋಡಲು ಬಂದಾಗಿನಿಂದ ಈ ಕ್ಷಣದ ವರೆಗೂ ಒಳಗಿನಿಂದಲೇ ಬೇಯುತ್ತಿದ್ದೇನೆ."

ಸಹಪಾಠಿ ಮಿತ್ರ ನನ್ನನ್ನು ನೋಡುತ್ತಲೇ ಕೈ ಜೋಡಿಸಿದ. ಮತ್ತೆ ಮಾತನಾಡಲಿಲ್ಲ. ಅವನ ಇಬ್ಬರೂ ಹೆಣ್ಣುಮಕ್ಕಳು ನೋಡುತ್ತಲೇ ಇದ್ದರು. ಮಡದಿಗಾದರೂ ಏನೊಂದೂ ಸ್ಪಷ್ಟವಾಗದೇ ಸುಮ್ಮನೆ ಉಳಿದಿದ್ದಳು.

ನನ್ನಲ್ಲಿ ಈಗ ಇರುವ ಆಯ್ಕೆಯಾದರೂ ಏನು?? ಅವನನ್ನು 'ಕ್ಷಮಿಸಿದೆ' ಎಂದು ಹೇಳುವುದೇ? ಈ ಐವತ್ತು ವರ್ಷಗಳಿಂದ ಕ್ಷಣವೂ ಬಿಡದೆ ನರಳಿಕೊಂಡು ಬಂದು ಈಗ ಅಷ್ಟು ಸುಲಭದಲ್ಲಿ ಅದನ್ನು ನುಂಗಿಕೊಂಡು ದೇವತ್ವ ಬೇಡ! ಮನುಷ್ಯತ್ವ ತೋರುವುದೇ ??????

***



ಚಕ್ಕಡಿ ಎಂಬ ಸುಭಗ

– ರಾಧಿಕಾ ವಿ ಗುಜ್ಜರ್

ದಣಿದ ಗೃಹಿಣಿಯೋರ್ವಳ ವಿಶ್ರಾಂತ ಭಂಗಿಯಂತೆ
ಗೋಡೆಗೊರಗಿ ಕಾಲು ನೀಡಿ ಕುಳಿತಿದೆ ಚಕ್ಕಡಿ
ಮಾಘ–ಫಾಲ್ಗುಣ ರೈತ ಹೊಲದ ದಾರಿ ಹಿಡಿಯದೆ
ಕಣದಿ ಪೇರಿಸುವ ಕಾಳ ನೋಡುತಿದೆ ಚಕ್ಕಡಿ

ನೊಗದ ಎತ್ತುಗಳು ಕೊಟ್ಟಿಗೆಯಲಿ ವಿಶ್ರಾಂತ
ಹಗ್ಗ, ಚಾಟಿ, ಸನ್ನೆ, ಮೂಗುದಾರಕೆ ವಿರಾಮ
ಕುಂಭಗಳು ದುರಸ್ತಿಗೊಳ್ಳುತ್ತಿವೆ ಎಣ್ಣೆ ನೀವಿ
ಚಕ್ರಗಳು ಬಳೆಯ ಸೇವೆಗೆ ಕಮ್ಮಾರನಲ್ಲಿ

ಮಾಗಿಯ ಬಿಸಿಲು ತಡೆಯಲು ಚಕ್ಕಡಿಯ ನೆರಳಿಗೆ
ಚೌಕಬಾರದ ಹಾಸು, ಕವಡೆ, ಕಾಯಿ ಕರೆಯುತಿವೆ
ಸಂಚಿ ಹಿಡಿದು ಕವಳ ಮೆಲ್ಲುತ ಸೇರಿದೆ ಗುಂಪು
ನಾಗಿ, ಸಾಕಿ, ಪದ್ದು, ದ್ಯಾಮಿ ಮರೆವರಿನ್ನು ಮುಪ್ಪು

ಸೇರಿದೆ ಚೌಕಡಿ ಎಂದು ಚಾಪೆಗೆ ಹರವಿ ಹಪ್ಪಳ
ಸಂಡಿಗೆ ಬಿಟ್ಟಿಹರು ಸೊಸೆಯರು ಸುತ್ತಲರಿಸಿ ಬಚ್ಚ
ಇಳಿಬಿದ್ದಿದೆ ಕಂಬಿಗೆ ಕಂದಮ್ಮನ ಜೋಳಿಗೆ
ವಿರಮಿಸಿಹ ಚಕಡ, ಸಾಕ್ಷಿಯು ಮನೆವಾರ್ತೆಗೆ

ನಿಂತಾಗ ಮನೆ ಮಕ್ಕಳ ನೆಚ್ಚಿನ ಆಟದ ತಾಣ
ಓದುವ ಹುಡುಗರಿಗೆ ಗೊಡವೆಯಿರದ ನಿಲ್ದಾಣ
ಜಾತ್ರೆ, ಸಂತೆ, ಶುಭಕಾರ್ಯಕೊದಗುವ ಕೊಲ್ಲಾರ
ಗೋಣಿಯೊಂದ ಹಾಸಿಕೊಂಡರೆ ನಿದ್ದೆಗೆ ದಿವಾಣ

ಆಷಾಢದ ನಾಟಿಗೆ ಸಸಿ ಹೊರಲು ಸಜ್ಜಾಗುವುದು
ಗೊಬ್ಬರ, ಕೀಟನಾಶಕ, ಹತ್ಯಾರೆ ಸಾಗಿಸುವುದು
ಹೊರುತ ಹೇರಿದ ಸರಕು ಸರಾಗವಾಗಿಸಿ ಸಂಚಾರ
ಋತು ವಿಪರೀತಗಳ ಎಣಿಸದೆ ಹೊರೆವ ಚಾರ

ಬಡಗಿಯ ಕೈಚಳಕದೆ ಬಂಡಿಯಾಗಿ ಮೈದಾಳಿ
ರೈತಗೆ ವರವಾದ ವಾಹನ ಮರೆಯದು ಪಾಳಿ
ಮನೆಮನೆಗೂ ಮಗನಂತೆ ದುಡಿಮೆಗೆ ನಿಂತಾಗ
ಹಬ್ಬಗಳಲಿ ಪೂಜೆಗೊಳ್ವ ಸಹಚಾರಿ ಸುಭಗ

***

ಲಲಿತ ಪ್ರಬಂಧ

ಅಡುಗೆಮನೆ ಅವಾಂತರಗಳು

– ಜಿ.ವಿ.ನಿರ್ಮಲ

ಅಡುಗೆಮನೆ ಅವಾಂತರಗಳು ಎಂದಾಕ್ಷಣ ಅಡುಗೆಮನೆಗಳು, ಅವಾಂತರಗಳು ಕೇವಲ ಮನೆಯ ಅಡುಗೆಮನೆ ಗಳಿಗೆ ಮಾತ್ರ ಸೀಮಿತವಲ್ಲ. ನಾನು ಕಂಡಿರುವಂತೆ ಆಫೀಸು, ಫ್ಯಾಕ್ಟರಿಗಳಲ್ಲಿಯೂ ಅಡುಗೆಮನೆಯೇ ಅತಿ ಚಟುವಟಿಕೆಯ ಕೇಂದ್ರ. ಅಲ್ಲಿನ ಯಾವ ವಿಭಾಗ ಕೆಲಸ ಮಾಡದಿದ್ದರೂ ಕ್ಯಾಂಟೀನ್ ಮಾತ್ರ ಸಮಯಕ್ಕೆ ಸರಿಯಾಗಿ ಕೆಲಸಗಾರರಿಗೆ ಊಟ, ತಿಂಡಿ, ಕಾಫಿ, ಟೀಗಳನ್ನು ಸರಬರಾಜು ಮಾಡದಿದ್ದರೆ ರಾದ್ಧಾಂತವೇ ಅಗುವುದಲ್ಲವೇ? ಕೊನೆಗೆ ವಡೆಯ ಗಾತ್ರ, ಇಡ್ಲಿ-ದೋಸೆಗಳ ಉದ್ದಗಲ, ವಿವಿಧ ತಿಂಡಿಗಳ ಹದ ಯಾವುದು ಸರಿ ಇಲ್ಲದಿದ್ದರೂ ದೇವರೇ ಗತಿ. ಮುಷ್ಕರ, ಹಾಹಾಕಾರ, ಕೂಗಾಟ, ಕಿರುಚಾಟ ಶುರುವಾಗಿ ವಾತಾವರಣ ಹದಗೆಡುತ್ತದೆ.

ಈಗಂತೂ ಹಲವಾರು ಭಾಗ್ಯವಂತರೇ ತುಂಬಿರುವ ಕನ್ನಡ ನಾಡಿನಲ್ಲಿ ಶಾಲೆಯ ಬಿಸಿಯೂಟ, ಹಸಿದವರ ಕ್ಯಾಂಟೀನ್, ಹೊಟ್ಟೆ ತುಂಬಿದವರ ಭೋಜನ ಸಮಾರಂಭಗಳು ಮುಂತಾದವುಗಳಲ್ಲಿಯೂ ದೊಡ್ಡ ಅವಾಂತರಗಳಾಗುವುದನ್ನು ಸುದ್ದಿ ಮಾಧ್ಯಮಗಳಲ್ಲಿ ನೋಡುತ್ತಲೇ ಇರುತ್ತೇವೆ. ದೊಡ್ಡ ಸಮಾರಂಭಗಳಲ್ಲಿ ಹತ್ತಾರು ಸಾವಿರ ಜನರಿಗೆ ಊಟ ಹಾಕುವ ವ್ಯವಸ್ಥೆ ಮಾಡಿದ್ದರೂ ಸಾಲದೆ, ಊಟ ಸಿಗದೆ ಸಿಟ್ಟಾದವರು ಅಡುಗೆ ಮನೆಗೆ ನುಗ್ಗಿ ದಾಂಧಲೆ ಮಾಡಿರುವುದೂ ತಿಳಿದದ್ದೆ. ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆ ಕೊಡುವುದೋ, ಹಣ್ಣು ಕೊಡುವುದೋ ಎನ್ನುವ ಚರ್ಚೆ, ಬಿಸಿ ಅಡುಗೆಯನ್ನು ಯಾರು ತಯಾರಿಸುವುದೆನ್ನುವ ಜಿಜ್ಞಾಸೆ ಇತ್ಯಾದಿಗಳು ಸಾಮಾನ್ಯ. ತರಕಾರಿಗಳ ಬೆಲೆ ಏರಿರುವ ಕಾಲದಲ್ಲಿ ಸಾರ್ವಜನಿಕರಿಗಾಗಿ ಮಾಡುವ ಅಡುಗೆಗೆ ಎಷ್ಟು ತರಕಾರಿ ಹಾಕಬಹುದೆನ್ನುವುದೂ ಮತ್ತೊಂದು ದ್ವಂದ್ವ. ಹೋಟೆಲುಗಳಲ್ಲಿ 'ಟೊಮ್ಯಾಟೋ' ಬಳಸುವುದೋ, ಬೇಡವೋ ಎನ್ನುವುದು ವಿಧಾನ ಸಭೆಯಲ್ಲಿ ಚರ್ಚೆಯಾಗುತ್ತದೆ. ಕೊನೆಗೆ ಅವಾಂತರಗಳು ದೇವಸ್ಥಾನದ ಪ್ರಸಾದವನ್ನೂ ಬಿಡುವುದಿಲ್ಲ. ವಿಷಯುಕ್ತ ಪ್ರಸಾದ ಸೇವಿಸಿ, ಅಸ್ವಸ್ಥರಾದವರ ಸುದ್ದಿ ಓದಿದಾಗಲಂತೂ ಮೈನಡುಕ ಬರುತ್ತದೆ. ಒಮ್ಮೆ ನಮ್ಮ ಸ್ನೇಹಿತರ ಮನೆಯ ಗೃಹಪ್ರವೇಶದಲ್ಲಿ ಹೀಗಾಗಿ ಆತ ಬಹಳ ಪೇಚಾಡಿಕೊಂಡಿದ್ದರು.

ವಿಷಯುಕ್ತ ಎಂದಾಗ ಒಂದು ಪ್ರಸಂಗ ನೆನಪಾಗುತ್ತಿದೆ. ನಮ್ಮ ನೆಂಟರ ಮನೆಯಲ್ಲಿ ಯಾವುದೋ ಸಮಾರಂಭ ವಾಗಿತ್ತು. ಅಂದು ಮನೆಗೆ ಬರುವವರು, ಇದ್ದವರು ಎಲ್ಲರಿಗೂ ಕಾಫಿ ಸಮಾರಾಧನೆಯಾಗುತ್ತಿತ್ತು. ಸುಮಾರು ಜನರಿಗೆ ಕಾಫಿಯಾದ ನಂತರ ಪಾತ್ರೆಯಲ್ಲಿದ್ದ ಹಾಲು ತಳ ತಲುಪಿತು. ಮುಂದಿನವರಿಗೆ ಕಾಫಿ ಬೆರೆಸಲೆಂದು ಹಾಲು ತೆಗೆದುಕೊಂಡಾಗ ತಳದಲ್ಲಿ ಕಂಡದ್ದೇನು? ಸತ್ತು ಸ್ವರ್ಗ ಸೇರಿದ್ದ ಹಲ್ಲಿ! ಕಾಫಿ ಮಾಡುತ್ತಿದ್ದವರಿಗೆ ವಿಪರೀತ ಭಯವಾಯಿತು. ಯಾರಿಗೆ ಹೇಳುವುದು? ಮಕ್ಕಳು, ಮರಿಯಾದಿಯಾಗಿ ಎಲ್ಲರೂ ಆ ಹಾಲಿನ ಕಾಫೀ, ಟೀ, ಕುಡಿದಿದ್ದರು. ಮುಂದೇನು ಎಂದು ದಾರಿಕಾಣದೆ ದೇವರಿಗೆ ಕೈ ಮುಗಿದು, ಸ್ವಲ್ಪ ಸಮಯ ಕಾದು ನೋಡೋಣವೆಂದು ಜಪಮಾಡಲು ಶುರುಹಚ್ಚಿಕೊಂಡರು. ಜಪದ ಫಲವೋ, ಹಲ್ಲಿಯ ಆಶೀರ್ವಾದವೋ ಯಾರಿಗೂ ಏನೂ ಆಗಲಿಲ್ಲ. ಕಾಫಿ ಮಾಡಿದವರ ಕೈಕಾಲು ನಡುಕ ನಿಂತದ್ದು ಮಾರನೆಯ ದಿನ ಬೆಳಕು ಹರಿದ ನಂತರವೇ.

ಮತ್ತೊಬ್ಬರ ಮನೆಯ ಗೃಹಪ್ರವೇಶದಲ್ಲಿ ಲಾಡುವಿಗೆ ಬೂರಾ ಸಕ್ಕರೆ ಬದಲು ಪುಡಿಯುಪ್ಪು ಬೆರೆತು, ಎಲೆಗೆ ಲಾಡು ಬಡಿಸುವವರೆಗೂ ಯಾರಿಗೂ ತಿಳಿಯಲಿಲ್ಲ. ವಿಷಯ ತಿಳಿದ ನಂತರ ಮನೆಯಾತ ನೊಂದು ಪೇಚಾಡಿದರು. ಅಷ್ಟೂ ಪದಾರ್ಥ ವ್ಯರ್ಥವಾಯ್ತು. ಬೂರಾ ಸಕ್ಕರೆ ಮತ್ತು ಉಪ್ಪು ಬದಲಾದರೆ ದೊಡ್ಡ ಅವಾಂತರವೇ ಆಗುವುದಲ್ಲವೇ?

ಮತ್ತೊಂದು ಸಾರಿ ಚಿರೋಟಿಗೆ ಬಡಿಸಲು ಬೂರಾ ಸಕ್ಕರೆ ಎಂದುಕೊಂಡು ಪುಡಿಯುಪ್ಪು ತಂದರು. ಒಬ್ಬಿಬ್ಬರಿಗೆ ಬಡಿಸಿದ ನಂತರ ತಿಳಿದು ಕೂಡಲೆ ಅದನ್ನು ಪಕ್ಕಕ್ಕಿಟ್ಟು ಬೂರಾ ಸಕ್ಕರೆ ಬಡಿಸಿದರು. ಸಧ್ಯ! ಹೆಚ್ಚೇನೂ ತೊಂದರೆಯಾಗಲಿಲ್ಲ.

ಗೃಹಿಣಿಯೂ ಇತ್ತೀಚಿಗೆ ಸಂಪಾ'ಧಣಿ'ಯೇ ಆಗಿರುವುದರಿಂದ ಮನೆಯ ಅಡುಗೆಮನೆಗೆ ಆಗಾಗ್ಗೆ ಮನೆಯ ಅಧಿಪತಿಯೂ ಅಡುಗೆ'ಪತಿ' ಆಗುವುದು ಸಹಜ. ನಾನು ಮನೆಗೆ ಬರುವಷ್ಟರಲ್ಲಿ ಒಂದು ಪಾವು ಅಕ್ಕಿ ಅನ್ನ ಮಾಡಿಬಿಡಿ ಎಂದಾಗ ಆಗುವ, ಆಗಬಹುದಾದ ಅವಾಂತರಗಳನ್ನು ನೋಡೋಣ. ಈಗೀಗ ಮನೆಯಲ್ಲಿ ಪಾವು, ಸೇರುಗಳಲ್ಲಿ ಅಳೆಯುವುದೇ ಕಡಿಮೆ. ಪಾವಿನ ಬದಲಾಗಿ ಸಾಮಾನ್ಯವಾಗಿ ಸ್ಟೀಲ್ ಲೋಟ ಅಥವಾ ಕಪ್ ಬಳಕೆಯಾಗುತ್ತದೆ. ಸರಿ ಬಿಡಿ. ಅದೇನೂ ದೊಡ್ಡ ವಿಷಯವಲ್ಲ. ಮುಂದೆ ಎಷ್ಟು ನೀರು ಹಾಕುವುದು? ಮೂರು ಲೋಟ ಎಂದಿಟ್ಟುಕೊಳ್ಳೋಣ. ಹಾಗಂದಾಗ ನೀರಿಗೆ ಯಾವ ಲೋಟ ಎನ್ನುವ ಪ್ರಶ್ನೆ ಎದುರಾಗುತ್ತದೆ. ಅಕ್ಕಿಯ ಡಬ್ಬದಲ್ಲಿರುವ ಲೋಟ ಒದ್ದೆಯಾಗಬಾರದೆಂದು ಬೇರೆ ಲೋಟ ಬಳಸಲೇ ಬೇಕು. ಅವೆರಡೂ ಲೋಟಗಳು ಒಂದೇ ಅಳತೆಯದ್ದಾಗಿರುವುದು ಅತ್ಯಗತ್ಯ. ಹಾಗೂ ಹೀಗೂ ಅಕ್ಕಿ, ಅಕ್ಕಿಗೆ ತಕ್ಕ ನೀರು ಸಿದ್ಧವಾಗುತ್ತದೆ. ಮುಂದೆ ಯಾವ ಕುಕ್ಕರ್, ಅದರೊಳಗೆ ಎಷ್ಟು ನೀರು ಎಲ್ಲವೂ ರೆಡಿಯಾಯಿತೆಂದುಕೊಳ್ಳೋಣ. ಕುಕ್ಕರಿನಲ್ಲಿ ಎಷ್ಟು ಸೀಟಿ ಬರಬೇಕೆನ್ನುವ ಎಣಿಕೆ. 'ಸ್_ _..' ಒಂದು, 'ಸ್_ _..' ಎರಡು. 'ಟ್ರಿಣ್' ಗಮನಿಸಿ, ಇದು ಫೋನ್ ನಿನಾದ. ಅಡುಗೆಪತಿ ಅಧಿಪತಿಯಾಗಿ ಬದಲಾಗುತ್ತಾನೆ. ಮುಗಿಯಿತು ಕಥೆ. 'ಸ್_' ನಾಲ್ಕು, ಐದು, ಆರು ಆಗಿ ಕುಕ್ಕರಿಗೆ ಸುಸ್ತಾದ ನಂತರವೇ ಕುಕ್ಕರ್ ಆಫ್ ಆಗುತ್ತದೆ. ಅನ್ನ ಹೇಗಾಗಿರುತ್ತದೆಂದು ನಾನು ಹೇಳುವುದೇ ಬೇಡ. ಮುದ್ದೆಯೋ? ಮತ್ತೇನೋ?

ಇಷ್ಟೇ ಆದ್ರೆ ಪರವಾಗಿಲ್ಲ. ಮತ್ತೆ ಕೆಲವು ಅವಾಂತರಗಳೆಂದರೆ ಕುಕ್ಕರಿನ ಅಡಿಪಾತ್ರೆಯಲ್ಲಿ ನೀರು ಹಾಕದಿರುವುದು, ಅತಿ ಹೆಚ್ಚು ನೀರು ಹಾಕುವುದು, ಅನ್ನದ ಪಾತ್ರೆಯ ಮೇಲೆ ದೊಡ್ಡ ತಟ್ಟೆ ಮುಚ್ಚಿ ಕುಕ್ಕರಿನ ಆವಿ ಹೊರಬಾರದಂತೆ ಬಂದ್ ಮಾಡುವುದು ಇತ್ಯಾದಿ. ವೈಟ್ ಹಾಕಿದ್ದೇನೆಂದು ತಿಳಿದು ಟಿವಿ ನೋಡುತ್ತಾ ಕೂತು, ಬಹಳ ಹೊತ್ತಾದರೂ ವಿಷಲ್ ಬರಲಿಲ್ಲವೆಂದು ನೋಡಿದರೆ ವಿಷಲ್ ಹೇಗೆ ಬರುತ್ತದೆ? ನೀರೆಲ್ಲಾ ಖಾಲಿಯಾಗಿರುತ್ತದೆ. ಅದನ್ನು ನೋಡದೆ ಆಗ ವೈಟ್ ಹಾಕಿದರೆ, ಅವಾಂತರವಾಗುವುದು ಖಚಿತ. ಇವೆಲ್ಲಕ್ಕಿಂತಲೂ ಮತ್ತೊಂದು ಅವಾಂತರ ಹೀಗಾಗುವುದುಂಟು. ಕುಕ್ಕರ್ ಇಡುತ್ತಿದ್ದಂತೆ ಆವಿ ಬರುವುದಕ್ಕೂ ಕಾಯದೆ ವೈಟ್ ಹಾಕಿಬಿಡುವುದು ಕೆಲವರ ಅಭ್ಯಾಸ. ಆ ಹೊತ್ತಿಗೆ ಸರಿಯಾಗಿ ಫೋನ್ ಬಂದರೆ, ಫೋನ್ ತೆಗೆದುಕೊಂಡು ಮಾತಾಡುತ್ತಲೇ ಹೊರನಡೆದು ಮಾತಿನಲ್ಲಿ ಮುಳುಗಿಬಿಡುತ್ತಾರೆ. ಎಷ್ಟೋ ಹೊತ್ತಿನ ನಂತರ ಕುಕ್ಕರ್ ನೆನಪಾಗಿ, ಅಡುಗೆಮನೆಯೊಳಗೆ ಇಣುಕಿ ನೋಡಿ, ತೆಪ್ಪಗಿರುವ ಕುಕ್ಕರ್ ಕಂಡು, ಆರಿಸಿರುವೆನೆನ್ನುವ ಸಮಾಧಾನದಿಂದ ಮಾತು ಮುಂದುವರಿಸುತ್ತಲೇ ಇರುತ್ತಾರೆ. ಊಟದ ಸಮಯ ಬಂತೆಂದು ನೋಡಿದರೆ, ಕುಕ್ಕರ್ ತಣ್ಣಗಿದೆ! ಸ್ಟೋವ್ ಹೊತ್ತಿಸುವುದನ್ನೇ ಮರೆತಿರುತ್ತಾರೆ ಸಂಪಾ'ಧಣಿ' ಅಥವಾ ಅಡುಗೆಪತಿ. ಅದಕ್ಕೆ ನಮ್ಮ ಸಿಹಿಕಹಿ ಚಂದ್ರು ತಮ್ಮ ಅಡುಗೆ ಶೋಗಳಲ್ಲಿ ಯಾವಾಗಲೂ 'ಮೊದಲು ಸ್ಟೋವ್ ಅಂಟಿಸಬೇಕು' ಎಂದು ಹೇಳುವುದನ್ನು ಗಮನಿಸಿದ್ದೀರಾ? ಹೀಗೆ ಅನ್ನ ಮಾಡುವುದು ಎಷ್ಟು ಸುಲಭವೋ ಅವಾಂತರಗಳನ್ನು ಸೃಷ್ಟಿ ಮಾಡುವುದೂ ಕಷ್ಟವಲ್ಲ. ಮರೆಯದಿರಿ. ಇದು ಸ್ಯಾಂಪಲ್ ಮಾತ್ರ.

ಓರ್ವ ಆಧುನಿಕ ಸುಖಪುರುಷ ಇತ್ತೀಚಿಗೆ ಹೇಳಿರುವ ಮಾತೆಂದರೆ ಕುಕ್ಕರ್ ವಿಷಲ್ ಕೂಗುವಾಗ 'ಒಂದು_., ಎರಡು_, ಮೂರು_, ಎಂದು ಕೂಗಿದರೆ ಒಳ್ಳೆಯದು' ಎಂದು. ನಿಜ. ಆಧುನಿಕ ಕೃತಕ ಬುದ್ಧಿಮತ್ತೆಯ ಕಾಲದಲ್ಲಿ ಇವೆಲ್ಲವನ್ನೂ ಕಾಣುವ ದಿನಗಳು ದೂರವಿಲ್ಲ. ಕೆಲವು ಕುಕ್ಕರ್‌ಗಳು ಈಗಾಗಲೇ ಬಂದಿವೆ ಎನ್ನುವುದೂ ನಿಜ.

ಅವಾಂತರದ ಮತ್ತೊಂದು ಅವತಾರದ ಸಾಕ್ಷಾತ್ಕಾರವಾಗುವುದು ಸಾಮಾನುಗಳನ್ನು ಡಬ್ಬಿಗಳಲ್ಲಿ ತುಂಬಿಸುವಾಗ. ಒಂದೇ ಒಂದು ಉದಾಹರಣೆ ಹೇಳುತ್ತೇನೆ. ತುಪ್ಪ, ಎಣ್ಣೆಗಳು ಕೆಲವು ವರ್ಷಗಳಿಂದ ಪ್ಯಾಕೆಟ್‌ಗಳಲ್ಲಿ ಬರುವುದನ್ನು ನೋಡಿದ್ದೇವೆ. ಹಬ್ಬದ ದಿನದಂದು ಹೆಚ್ಚು ಕೆಲಸವಿದ್ದ ಕಾರಣದಿಂದ ಇಂಜನಿಯರ್ ಸಾಹೇಬರ ಪತ್ನಿಯೊಬ್ಬರು ಸಾಹೇಬರಿಗೆ ಎಣ್ಣೆ ಪ್ಯಾಕೆಟ್‌ನಿಂದ ಡಬ್ಬಕ್ಕೆ ಎಣ್ಣೆ ಬಗ್ಗಿಸುವಂತೆ ಕೇಳಿಕೊಂಡರಂತೆ. ಸಾಹೇಬರು ಪ್ಯಾಕೆಟ್ ತಳಭಾಗ ಹಿಡಿದುಕೊಂಡು, ಮೇಲ್ಭಾಗ ಕತ್ತರಿಸಿ, ಕತ್ತರಿ ಕೆಳಗಿಡುವಾಗ ಪ್ಯಾಕೆಟ್ ಜಾರೀತೆಂದು ತಳಭಾಗವನ್ನು ಗಟ್ಟಿಯಾಗಿ ಹಿಡಿದುಕೊಂಡರಂತೆ. ಏನಾಗಿರಬಹುದು? ಎಣ್ಣೆಯ ಕಾರಂಜಿ ಶುರುವಾಯ್ತು. ಏನು ಮಾಡಬೇಕೆಂದು ತೋಚದೆ 'ಅಯ್ಯೋ, ಅಯ್ಯೋ' ಎಂದು ಕಿರುಚುತ್ತಾ ಸಾಹೇಬರು ತಳಭಾಗವನ್ನು ಮತ್ತಷ್ಟು ಗಟ್ಟಿಯಾಗಿ ಹಿಡಿದುಕೊಂಡಾಗ ಎಣ್ಣೆ ಪೂರ್ತಿ ನೆಲಕ್ಕೆ ಬಿತ್ತು. ಕೆಲಸ ಬೇಗ ಆಗಲಿ ಎಂದು ಬಯಸಿದ ಸಾಹೇಬರ ಹೆಂಡತಿಗೆ ಎಣ್ಣೆ ಬಳಿಯುವ ಕೆಲಸವೂ ಸೇರಿತು.

ಹೀಗೆ ಎಲ್ಲರ ಅಡುಗೆಮನೆಯಲ್ಲಾಗುವ ಅವಾಂತರಗಳನ್ನು ಪಟ್ಟಿ ಮಾಡಿದರೆ ಕೊನೆಯೇ ಇರುವುದಿಲ್ಲ. ಈಗ ಸದ್ಯಕ್ಕೆ ಮಧ್ಯಂತರ ಎಂದಷ್ಟೇ ಹೇಳಿ ನನ್ನ ಓದನ್ನು ಮುಗಿಸುತ್ತೇನೆ.

***



ದಾಸೋಹದ ಸಂಚಿಕೆಗಳನ್ನು ಓದುತ್ತಿರುವ ಗಣಪ

ಪ್ರಾ. ಎಚ್ಚೆಸ್ಕೆಯವರ 104ನೇ ಜನ್ಮದಿನ

ಪ್ರಾ. ಎಚ್ಚೆಸ್ಕೆ – ಒಂದು ನೆನಪು

– ಗುರುಪ್ರಸಾದ್ ಹಾಲ್ಕುರಿಕೆ



ಇಂದು ನಾವು ಪ್ರಾಚಾರ್ಯ ಎಚ್ಚೆಸ್ಕೆ ಅವರ 104ನೇ ಜನ್ಮ ದಿನವನ್ನು ಸಸಕಸ ವೇದಿಕೆಯಡಿಯಲ್ಲಿ ಆಚರಿಸುತ್ತಿರುವುದು ಸಂತಸದ ಸಂಗತಿ. ಈ ಸಂದರ್ಭದಲ್ಲಿ ಪ್ರಾಚಾರ್ಯರ ನೂರಾರು ಸಾಹಿತ್ಯ ಕೃತಿಗಳಲ್ಲಿನ "ತುಳಸಿ ಬಿಲ್ವ" ಕೃತಿಯ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತುತಪಡಿಸಲು ಬಯಸುವೆ.

'ತುಳಸಿ ಬಿಲ್ವ'– ಇದು ಪ್ರಾಚಾರ್ಯ ಎಚ್ಚೆಸ್ಕೆ ಅವರ 24 ವೈಚಾರಿಕ ಲೇಖನಗಳ ಸಂಗ್ರಹ. ಆ ಲೇಖನಗಳೆಂದರೆ :

ಸಂಸ್ಕೃತಿ ಕರ್ನಾಟಕ: ಒಂದು ಮಿಂಚುನೋಟ
ಸಮಸ್ಯೆಗಳ ಸುಳಿಯಲ್ಲಿ ಕರ್ನಾಟಕ
ಭಾಷಾ ಸಮಸ್ಯೆಯ ವಿವಿಧ ಮುಖ
ಭಾರತದ ಭಾಷಾ ಸಮಸ್ಯೆ
ಬ್ಯಾಂಕು ಮತ್ತು ಭಾಷೆ
ಕರ್ನಾಟಕದ ಸಾಮಾಜಿಕ ಆರ್ಥಿಕ ವಿಕಾಸ
ಕರ್ನಾಟಕ ಏಕೀಕರಣದ ಕಥೆ
ಕನ್ನಡದ ಹಿರಿಮೆ ಗರಿಮೆ
ಸಮೂಹ ಸಂಪರ್ಕ ಮಾಧ್ಯಮಗಳು
ಬಾನುಲಿಗಾಗಿ ಬರವಣಿಗೆ
ಪತ್ರಕರ್ತ ಗಾಂಧೀಜಿ
ನಮ್ಮ ಶಿಕ್ಷಣ ವ್ಯವಸ್ಥೆಗೆ ಏನಾಗಿದೆ
ಗಾಂಧೀಜಿ – ಇಂದೂ ಇವರು ನಮಗೆ ಬೇಕು
ಇಂದಿನ ಪತ್ರಿಕಾ ಲೋಕ
ಆದರ್ಶ ಗುರು – ಡಾ. ರಾಧಾಕೃಷ್ಣನ್
ಆಡಳಿತ ಭಾಷೆಯ ಜಾರಿ – ಕೆಲವು ಅಂಶಗಳು
ವಚನ : ಕನ್ನಡದ ವಿಶಿಷ್ಟ ಸಾಹಿತ್ಯಪ್ರಕಾರ
ಯುಜಿ – ಯಾರು ಇವರು
ಭುವನಜ್ಯೋತಿ ಯೇಸುಕ್ರಿಸ್ತ
ಬಸವ ಮಾರ್ಗ – ವಿಶ್ವಬಂಧುತ್ವದೆಡೆಗೆ
ಬಸವ ಮತ್ತು ಗಾಂಧಿ
ಬಸವ ಚಿಂತನೆ : ಸಮಗ್ರ ಕ್ರಾಂತಿಗೊಂದು ನೀಲನಕ್ಷೆ
ಕಾವ್ಯರಚನೆ – ಕೆಲವು ಕಾಳಜಿಗಳು
ಕಾವ್ಯ ಯಾರಿಗೆ ಬೇಕು

ಇವುಗಳಲ್ಲಿ ಆಯ್ದ ಲೇಖನಗಳ ಸಾಲುಗಳನ್ನು ಪ್ರಸ್ತುತಪಡಿಸಲು ಬಯಸುತ್ತೇನೆ.

ಸಂಸ್ಕೃತಿ ಕರ್ನಾಟಕ: ಒಂದು ಮಿಂಚುನೋಟ

'ಕರ್ನಾಟಕ' ಎಂಬುದು ಬರಿಯ ಹೆಸರಲ್ಲ. 'ಮಂತ್ರ ಕಣಾ, ಶಕ್ತಿ ಕಣಾ, ತಾಯಿ ಕಣಾ, ದೇವಿ ಕಣಾ' ಎನ್ನುತ್ತಾರೆ ಕವಿ ಕುವೆಂಪು, 'ನಮ್ಮ ಕರ್ಣಾಟಕ ಬರಿಯ ದೇಶ ವಿಸ್ತೀರ್ಣಕ್ಕೆ ಮಾತ್ರ ಸಂಬಂಧಪಟ್ಟುದಲ್ಲ; ಕಾಲ ವಿಸ್ತೀರ್ಣವನ್ನೂ ನಾವು ಪ್ರಮುಖವಾಗಿ ಭಾವಿಸುತ್ತೇವೆ. ಅದನ್ನು ಚದರ ಮೈಲಿಗಳಿಂದ ಅಳೆದರೆ ಸಾಲದು; ಚದರ ವರ್ಷಗಳಿಂದಲೂ ಗುರುತಿಸಬೇಕು. ವ್ಯಷ್ಟಿರೂಪವಾದ ವ್ಯಕ್ತಿಗೆ ಕೋಶಗಳಿರುವಂತೆಯೇ ಸಮಷ್ಟಿರೂಪವಾದ ದೇಶಕ್ಕೂ ಕೋಶಗಳವೆ ಎಂದು ಭಾವಿಸುವುದಾದರೆ ಕರ್ನಾಟಕಕ್ಕೆ ಅನ್ನಮಯರೂಪವಾದ ಭೂಪ್ರದೇಶವಿರುವಂತೆಯೇ ಪ್ರಾಣಮನೋಮಯ ರೂಪವಾದ ಚಿತ್ತ್ವದೇಶವೂ ಇದೆ. ಚಿನ್ಮಯವೂ ಆಧ್ಯಾತ್ಮಿಕವೂ ಆಗಿರುವ ಆ ಸಂಸ್ಕೃತಿಕೋಶವೆ ಕರ್ಣಾಟಕದೇವಿಯ ಸೂಕ್ಷ್ಮಶರೀರ' ಎಂಬುದು ಅವರ ನಂಬಿಕೆ. ಅಂತೆಯೇ ಕರ್ನಾಟಕ ಎಂದೊಡನೆಯೇ ಒಬ್ಬೊಬ್ಬರಲ್ಲಿ ಒಂದೊಂದು ತೆರನಾದ ಭಾವನೆ ಸ್ಫುರಿಸುವುದು ಸಹಜ. ಕರ್ನಾಟಕ ಎಂಬ ಹೆಸರಿನ ಪ್ರಾಚೀನತೆಯನ್ನು ನೆನೆಯುವುದಾದರೆ ಮಹಾಭಾರತದಷ್ಟು ಹಿಂದಕ್ಕೆ ನಮ್ಮ ನೆನಪು ಜಾರುತ್ತದೆ. ಕನ್ನಾಡು, ಕರುನಾಡು ಎಂಬ ಅಚ್ಚಕನ್ನಡ ಪದಗಳಿಂದ ಕರ್ನಾಟಕ, ಕರ್ಣಾಟಕ ಪದಗಳ ವ್ಯುತ್ಪನ್ನವಾಗಿದೆಯೆನ್ನುವುದು ಒಂದು ಅಭಿಪ್ರಾಯ. ಅದು ಕರಿಯ ಮಣ್ಣಿನ ಭೂಮಿಯುಳ್ಳ ಚೆಲುವಾದ ಪ್ರದೇಶ. 'ಕೆಳಗೆ ಬೆಳೆಹೊಲ ಕಪ್ಪು ಮೇಲೆ ಬಾಂಬೊಲ ಕಪ್ಪು, ಬೆಟ್ಟಗಳು ಕಪ್ಪು, ಕಾರ್ಮೋಡಗಗಳು ಕಪ್ಪು, ಹೊಳೆಕೆರೆಯ ಮಡು ಕಪ್ಪು, ತಾಯ ಕಾಲ್ ತೊಳೆವ ಉಪ್ಪು ಕಡಲದು ಕಪ್ಪು-ಕನ್ನಡದ ಕಣ್ನೋಟ-ಕೂರ್ಪು, ಆರ್ಪು!' ಎಂಬುದು ಬಿಎಂಶ್ರೀ ವಾಣಿ.

ಕರ್ನಾಟಕ ಏಕೀಕರಣದ ಕಥೆ

ನಮ್ಮ ಕರ್ನಾಟಕ ರಾಜ್ಯಕ್ಕೆ ಈಗ ಐವತ್ತು ತುಂಬಿದೆ. ಐವತ್ತೊಂದನೆಯ ವರ್ಷ ಆರಂಭವಾಗುತ್ತಿದೆ. ನಮ್ಮದು ಸುವರ್ಣ ಕರ್ನಾಟಕವೆಂದು ಎಲ್ಲರೂ ಹರ್ಷೋದ್ಧಾರ ಮಾಡುತ್ತಿದ್ದಾರೆ. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂದು ಹಾಡಿದ ಹುಯಿಲಗೋಳ ನಾರಾಯಣರಾಯರ ಕನಸು ನನಸಾಗಿ ಅರ್ಧ ಶತಮಾನವಾಗಿದೆ. 'ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂದು ನಾವೀಗ ಒಕ್ಕೊರಲಿನಿಂದ ಹಾಡುತ್ತಿದ್ದೇವೆ. 'ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗು ನೀ ಕನ್ನಡವಾಗಿರು ಎಂಬುದು ನಮಗೆ ಕುವೆಂಪು ಅವರ ಅನುಶಾಸನ, 'ನೀ ಮೆಟ್ಟುವ ನೆಲ-ಅದೆ ಕರ್ನಾಟಕ: ನೀನೇರುವ ಮಲೆ ಸಹ್ಯಾದ್ರಿ, ನೀ ಮುಟ್ಟುವ ಮರ-ಶ್ರೀಗಂಧದ ಮರ ನೀ ಕುಡಿಯುವ ನೀರ್-ಕಾವೇರಿ' ಎಂಬುದೂ ಕುವೆಂಪು ವಾಣಿ.

'ವಾಸ್ತವವಾಗಿ ಏಕೀಕರಣ ಮತ್ತು ಅಖಂಡತೆ ಹೊಚ್ಚಹೊಸದಾಗಿ ಸೃಷ್ಟಿಯಾದುದೇನೂ ಅಲ್ಲ, ಸಾಂಸ್ಕೃತಿಕವಾಗಿ ದೇಶದ ಮನೋಮಂಡಲದಲ್ಲಿ ಯಾವುದು ಅನೇಕ ಶತಮಾನಗಳಿಂದಲೂ ಅಚ್ಯುತವಾದ ಭಾವಸತ್ಯವಾಗಿದ್ದಿತೋ ಅದು (ಏಕೀಕರಣದಿಂದ) ಭೌಗೋಳಿಕವಾಗಿಯೂ ಸಿದ್ಧವಾಯಿತು' ಎಂಬ ಕುವೆಂಪು ಅವರ ಮಾತು ಮನನಯೋಗ್ಯ. ಅದನ್ನು ನಾವು ನಮ್ಮ ಶಿರದಲ್ಲಿ ಧಾರಣೆಮಾಡಬೇಕು.

ಕನ್ನಡದ ಹಿರಿಮೆ ಗರಿಮೆ

ಕನ್ನಡ ರಾಜ್ಯೋತ್ಸವವನ್ನಾಚರಿಸುತ್ತಿರುವ ನವೆಂಬರ್ ತಿಂಗಳಲ್ಲಿ ನಮ್ಮೆಲ್ಲರ ಮನಸ್ಸುಗಳೂ ನಮ್ಮ ಭಾಷೆ ಸಂಸ್ಕೃತಿಗಳತ್ತ ತಿರುಗುವುದು ಸಹಜ. ಇಡೀ ತಿಂಗಳ ಮೂವತ್ತು ದಿನಗಳಲ್ಲೂ ಒಂದಿಲ್ಲೊಂದು ಕಡೆ ಸಭೆ ಸಮಾರಂಭಗಳು ಏರ್ಪಡುತ್ತವೆ. ನಮ್ಮ ಭಾಷೆ, ಸಂಸ್ಕೃತಿ, ಸಾಮಾಜಿಕ ಸ್ಥಿತಿಗತಿ, ಸಮಸ್ಯೆಗಳು-ಇವುಗಳ ಬಗ್ಗೆ

ಪುಂಖಾನುಪುಂಖವಾಗಿ ಭಾಷಣ ಗಳಾಗುತ್ತವೆ. ನಾಲಗೆಯ ಚಟ ಇರುವವರಿಗೆ ಇದೊಂದು ಸುಗ್ಗಿಯ ತಿಂಗಳು; ಹಬ್ಬ ಹರಿದಿನಗಳಂದು, ಮುಖ್ಯವಾಗಿ ವ್ರತಗಳನ್ನಾಚರಿಸುವಾಗ, ಪುರೋಹಿತರಿಗೆ ಬೇಡಿಕೆ ಇರುವ ಹಾಗೆ.

ಇತ್ತೀಚೆಗೆ ನಮ್ಮ ಸೋದರ ಭಾಷೆಯಾದ ತಮಿಳಿಗೆ ಶಾಸ್ತ್ರೀಯ ಭಾಷೆಯ, ಎಂದರೆ ಅಭಿಜಾತ ಭಾಷೆಯ– ಇಂಗ್ಲಿಷಿನಲ್ಲಿ ಹೇಳುವುದಾದರೆ 'ಕ್ಲಾಸಿಕಲ್' ಭಾಷೆಯ ಸ್ಥಾನಮಾನವನ್ನು ನಮ್ಮ ಕೇಂದ್ರ ಸರ್ಕಾರ ನೀಡಿದೆ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರ್ಕಾರದ ಪಕ್ಷಗಳ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ತಮಿಳಿಗೆ ಈ ಬಗೆಯ ಮನ್ನಣೆ ನೀಡುವ ವಿಚಾರವೂ ಸೇರಿತ್ತು. ಇದಕ್ಕೆ ಅನುಗುಣವಾಗಿ ಸರ್ಕಾರದ ಆದೇಶದಂತೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಡಿಯಲ್ಲಿ ನೇಮಕವಾದ ತಜ್ಞರ ಸಮಿತಿ ಈ ಬಗ್ಗೆ ಸಮಾಲೋಚನೆ ನಡೆಸಿ, ಒಂದು ಭಾಷೆ ಅಭಿಜಾತ ಭಾಷೆಯೆಂದು ಪರಿಗಣಿತವಾಗಬೇಕಾದರೆ ಕೆಲವು ಮಾನದಂಡಗಳಿಗೆ ಅನುಗುಣವಾಗಿರಬೇಕು ಎಂದು ಹೇಳಿತು. ಅದು ಕನಿಷ್ಠ ಒಂದು ಸಾವಿರ ವರ್ಷಗಳಷ್ಟು ಹಳೆಯ ಸಾಹಿತ್ಯಕೃತಿಗಳನ್ನು ಹೊಂದಿರಬೇಕು ಅಥವಾ ಐತಿಹಾಸಿಕ ದಾಖಲೆ ಇರಬೇಕು. ಅದರ ಪ್ರಾಚೀನ ಸಾಹಿತ್ಯಕೃತಿಗಳು ಆ ಭಾಷೆಯ ಅಮೂಲ್ಯವಾದ ಪರಂಪರೆಯ ಸಂಕೇತಗಳೆನಿಸಬೇಕು. ಆ ಭಾಷೆಯನ್ನಾಡುವ ಜನ ಹಾಗೆಂದು ಪರಿಗಣಿಸುತ್ತಿರಬೇಕು. ಅದರ ಸಾಹಿತ್ಯ ಪರಂಪರೆ ಸ್ವೋಪಜ್ಞವಾಗಿರಬೇಕು, ಸ್ವತಂತ್ರವಾಗಿರಬೇಕು; ಬೇರೆ ಯಾವುದೇ ಭಾಷಾ ಸಮುದಾಯದಿಂದ ಎರವಲು ಪಡೆದದ್ದಾಗಿರಬಾರದು.

ಪತ್ರಕರ್ತ ಗಾಂಧೀಜಿ

ಗಾಂಧೀಜಿ ಬೇರೆ ಏನೇ ಆಗಿದ್ದಿರಬಹುದು, ಆದರೆ ಪತ್ರಕರ್ತರಾಗಿದ್ದರೆ? ಎಂದು ಕೆಲವರಾದರೂ ಆಶ್ಚರ್ಯಪಡಬಹುದು. ಸದಾ ಹೋರಾಟದಲ್ಲಿ ನಿರತರಾಗಿದ್ದ ಮಹಾತ್ಮರಿಗೆ ಓದುವುದಕ್ಕಾಗಲಿ ಬರೆಯುವುದಕ್ಕಾಗಲಿ ಪುರಸೊತ್ತಾದರೂ ಎಲ್ಲಿತ್ತು? ಪತ್ರಿಕೋದ್ಯಮವಂತೂ ಸಾಧ್ಯವೇ ಇದ್ದಿರಲಾರದು ಎಂದು ಭಾವಿಸಬಹುದು.

ಆದರೆ ಗಾಂಧೀಜಿ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಪ್ರಸ್ತುತ ಎನಿಸುವಂತೆ ಆಗುತ್ತಿರುವುದಕ್ಕೆ, ಆಗಿಂದಾಗ್ಗೆ ಜಗತ್ತು ಗಾಂಧೀಜಿಯನ್ನು ನೆನಸಿಕೊಳ್ಳುತ್ತಲೇ ಇರುವುದಕ್ಕೆ ಅವರ ಬದುಕೂ ಸಾಧನೆಗಳೂ ಎಷ್ಟರಮಟ್ಟಿಗೆ ಕಾರಣವೋ, ಅವರ ಬರಹಗಳೂ ಅಷ್ಟೇಮಟ್ಟಿಗೆ ಕಾರಣ. ದೇಶದ, ಜಗತ್ತಿನ, ಮಾನವತೆಯ ಎಲ್ಲ ಸಮಸ್ಯೆಗಳನ್ನೂ ಕುರಿತಂತೆ ಅವರು ಆಳವಾಗಿ ಚಿಂತಿಸಿದರು. ಆ ಚಿಂತನೆಗೆ ಮಾತಿನ ರೂಪು ನೀಡಿದರು. ಗಾಂಧೀಜಿಯ ಬದುಕೇ ಮಹಾಕಾವ್ಯ, ಅವರ ಬರವಣಿಗೆಯೂ ಕಾವ್ಯಮಯವೇ. ಬದುಕಿದ್ದ ಸೀಸರನಿಗಿಂತ ಸತ್ತ ಸೀಸರನ ಪ್ರಭಾವ ಅಗಾಧ. ವಿಶ್ವಾದ್ಯಂತ ಜನರ ಮೇಲೆ ಅಗಾಧ ಪ್ರಭಾವ ಬೀರುವ ಜೀವನದರ್ಶನವೊಂದನ್ನು ಗಾಂಧೀಜಿ ತಮ್ಮ ಬರವಣಿಗೆಯ ಮೂಲಕ ಮುಂದಿನ ಪೀಳಿಗೆಗಳಿಗೆ ಬಿಟ್ಟು ಹೋಗಿದ್ದಾರೆ. ಅವರು ಬರವಣಿಗೆಯ ಕಾರ್ಯ ಮಾಡಿದ್ದು ಬಹುತೇಕ ಅವರೇ ನಡಸುತ್ತಿದ್ದ ಪತ್ರಿಕೆಗಳಿಗಾಗಿಯೆ. ಪತ್ರಿಕೆ ಅವರ ದೃಷ್ಟಿಯಲ್ಲಿ ಲಾಭೋದ್ದೇಶದ ಉದ್ಯಮವಾಗಿರಲಿಲ್ಲ; ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸುವ, ಜನರನ್ನು ಯೋಚಿಸಲು ಹಚ್ಚುವ, ಅವರ ಬದುಕುಗಳನ್ನು ರೂಪಿಸುವ ಅನನ್ಯ ಸಾಧನವಾಗಿತ್ತು.

ಗಾಂಧೀಜಿ: ಇಂದೂ ಇವರು ನಮಗೆ ಬೇಕು

ಶ್ರೀ ಸಾಮಾನ್ಯರು ಕಂಡ ಗಾಂಧೀಜಿಯ ಚಿತ್ರ ಎಂಥದು? ಕೈಲಾಸಂ ಬರೆದ ಒಂದು ಪದ್ಯ ಇದನ್ನು ವರ್ಣಿಸುತ್ತದೆ. ಇಂಗ್ಲಿಷಿನಲ್ಲಿರುವ ಆ ಪದ್ಯವನ್ನು ರಾಜರತ್ನಂ ಕನ್ನಡಿಸಿದ್ದಾರೆ:

ಒಂದು ಹಿಡಿ ಮೂಳೆ ಚಕ್ಕಳ ಅಷ್ಟೆ; ಆದಕೆ ಸುರಿ
ಮೂರೂ ನಾಲ್ಕೋ ಚಮಚ ರಕ್ತ, ಮಾಂಸ; ಜೊತೆಗಿರಿಸು –
ಪಾಪವನು ನೆರೆತೊರೆದ ಕಡಲಿನಾಳದ ಮಾನಸ,
ನೆರೆಬಂದ ಕಡಲಿನೊಲ್ ಪ್ರೇಮವನು ತುಂಬಿದೆದೆಯ;
ಹಚ್ಚು–ಮೊರಕಿವೆಯೆರಡ, ಎರಡು ಪಿಳಿಪಿಳಿ ಕಣ್ಣ;
ಹಾಲು ಹಸುಳೆಯ ಮಂದಹಾಸವನು ಲೇಪಿಸದಕೆ.
ಒಳಗಿರಿಸು–ಜೇನ ನಗುವವೊಲ್ ಇನಿಯ ನಾಲಗೆಯ,
ಜೊತೆಗೇ ಹಿಮಗಿರಿಯ ಮೀರಿಸಿ ನಿಮಿರ್ದ ಹಿರಿಯಾತ್ಮವ.
ಪೂರಣವೋ? ಸೋಯಾಬಿನ್ಸ್, ಖರ್ಜೂರ, ಮೇಕೆ ಹಾಲು!
ಮೇಲಿನಂಚಿನ ವರೆಗು ದುಃಖಿಗಳ ಕಣ್ಣೀರು ತುಂಬಿ,
ಪಕ್ವಮಾಡೀ ಇದನು ಸೆರೆಮನೆಯೊಳೊಂದಿನಿತು ವರುಷ.
ಹೊರಗೆ ತೆಗೆ; ಪರೆಯ ಪರಿವಾರದಿಂ ಗಮಗಮಿಸಗೊಳಿಸಿ,
ಚಿಂದಿಯಲಿ ಸುತ್ತಿ, ಸೆಳೆಬೋಂಬಿನಾಲಂಬನವವಿತ್ತು,
ಬಡಿಸು ತಾ! ಅವನೆ ಕಾಣ್! ಲೋಕತಾರಕ! ನಮ್ಮ ಬಾಪೂ!!

ಆದರ್ಶ ಗುರು – ಡಾ.ರಾಧಾಕೃಷ್ಣನ್

ಅಧ್ಯಾಪಕ ವಿದ್ಯಾರ್ಥಿಗಳ ಆರಾಧ್ಯ ದೈವ. ಅವರಿಗೆ ಅವರೇ ಆದರ್ಶ. ಕಾಪಿ ಪುಸ್ತಕದಲ್ಲಿ ಮೇಲ್ಪಂಕ್ತಿ ಇದ್ದ ಹಾಗೆ. ಉಳಿದ ಸಾಲುಗಳನ್ನು ಆ ಮೇಲ್ಪಂಕ್ತಿಯನ್ನನುಕರಿಸಿ, ಅನುಸರಿಸಿ, ವಿದ್ಯಾರ್ಥಿ ಬರೆಯಬೇಕು. ವಿದ್ಯಾರ್ಥಿಗಳ ಬಾಳು ರೂಪು ಗೊಳ್ಳುವುದಕ್ಕೆ ಸಹಕಾರಿಯಾಗುವುದು ಅಧ್ಯಾಪಕನ ದಿನಚರಿ ಅವನ ಜೀವನದ ರೀತಿ ನೀತಿ. ಅವನೇ ಸರಿಯಾಗಿರದಿದ್ದರೆ ವಿದ್ಯಾರ್ಥಿಗಳು ಹೇಗೆ ಸರಿಯಾಗಿ ರೂಪುಗೊಂಡಾರು? ದಿನದ ಇಪ್ಪತ್ನಾಲ್ಕು ಗಂಟೆಯೂ ಅವನು ಆದರ್ಶ ಜೀವನವನ್ನನುಸರಿಸುವುದಾದರೆ ಆಗ ವಿದ್ಯಾರ್ಥಿ ಅವನ ಪಡಿಯಚ್ಚು. ಅಧ್ಯಾಪಕನಿಗೆ ಆತ ಅಚ್ಚುಮೆಚ್ಚು. ಅಧ್ಯಾಪಕನಿಗೂ ತನ್ನ ವಿದ್ಯಾರ್ಥಿಯಲ್ಲಿ ಅದೇ ರೀತಿಯ ತಾದಾತ್ಮ ಇರಬೇಕು. ಆಗಲೇ ಶಿಕ್ಷಣವೆಂಬುದು ಪರಿಪೂರ್ಣ. ತಾವು ಕೂತಿದ್ದ ಕೋಚನ್ನೆಳೆದ ವಿದ್ಯಾರ್ಥಿಗಳ ಪ್ರೀತಿ ಅಭಿಮಾನ ಗೌರವಗಳನ್ನು ತಾವು ಅಲ್ಲಿದ್ದ ಮೂರೇ ವರ್ಷಗಳಲ್ಲಿ ಸಂಪಾದಿಸಿ ಕೊಂಡಿದ್ದ ಆ ಗುರುವಿನ ಮಹಾತ್ಮೆ ಸಾಮಾನ್ಯವಲ್ಲ, ಇಡೀ ಲೋಕಕ್ಕೆ ಗುರುವೆನ್ನಬಹುದಾದ ಮಹಾನ್ ಆಚಾರ್ಯರವರು. ಅವರು ಬೇರೆ ಯಾರೂ ಅಲ್ಲ; ಡಾ. ಸರ್ವಪಲ್ಲಿ ರಾಧಾಕೃಷ್ಣನ್.

ಬಸವ ಮತ್ತು ಗಾಂಧಿ

ಬಸವ ಮತ್ತು ಗಾಂಧಿ ಇವರಿಬ್ಬರೂ ಒಂದೇ ಕಾಲದವರಲ್ಲ. ಇವರಿಬ್ಬರೂ ನಡೆಸಿದ ಹೋರಾಟದ ಕಣಗಳೂ ಬೇರೆಬೇರೆ. ಇವರಿಬ್ಬರ ಮನೋಧರ್ಮ ಒಂದೇ ಆದರೂ ಇವರಿಬ್ಬರ ನಡುವೆ ಸುಮಾರು ಎಂಟು ಶತಮಾನಗಳ ಅಂತರ, ತಲೆಮಾರುಗಳ ನಡುವೆ ಸೇತುವೆ ನಿರ್ಮಿಸಿದ್ದು ಇವರ ಮಹಾಸಾಧನೆ. ನಾನು ಬೋಧಿಸುತ್ತಿರುವುದರಲ್ಲಿ ಹೊಸದೇನೂ ಇಲ್ಲ. ಇದೆಲ್ಲಾ ಹಿಮಾಲಯ ಪರ್ವತದಷ್ಟು ಹಳೆಯದು ಎಂದು ಗಾಂಧೀಜಿ ಪದೇಪದೇ ಹೇಳುತ್ತಿದ್ದರು. ಬಸವಣ್ಣನವರ ಬೋಧನೆಯೂ ಒಂದು ರೀತಿಯಲ್ಲಿ ಬಹಳ ಹಿಂದಿನಿಂದ ನಡೆದುಬಂದದ್ದೇ. ಪ್ರಾಚೀನವಾದ ಹಣತೆಗೆ ಕಟ್ಟಿದ್ದ ಜಿಡ್ಡನ್ನು ಒರೆಸಿ, ಅದರ ಕುಡಿಗೆ ಅಂಟಿದ್ದ ಕಿಟ್ಟವನ್ನುದುರಿಸಿ, ಅದು ಹೆಚ್ಚು ಬೆಳಕು ಚೆಲ್ಲುವ ಹಾಗೆ, ಆ ಬೆಳಕು ದೂರದೂರ ಹರಿಯುವ ಹಾಗೆ ಮಾಡಿದವರು ಬಸವಣ್ಣ, ಗಾಂಧೀಜಿಯೂ ಹಾಗೆಯೇ. ಕೋಟ್ಯಂತರ ಭಾರತೀಯರ ಕಣ್ಣೀರನೊರಸಿ, ಅವರಲ್ಲಿ ನಗೆ ಚಿಮ್ಮಿಸುವುದು ಗಾಂಧೀಜಿಯ ಕನಸು. ಇಬ್ಬರೂ ಯುಗಪುರುಷರೇ.

***

ಭಾರತಾಂಬೆಗೊಂದು ಪತ್ರ

– ಶಾಂತಿ ವಾಸು

ಅಮ್ಮ ಓ ಅಮ್ಮ, ಫಲವತ್ತಾದ
ಮುಷ್ಟಿ ಮಣ್ಣು ಬೇಕಾಗಿದೆ...
ಎಲೈ ಧಾರಿಣಿಯೇ
ಹುಟ್ಟಿಸೆಂದು ಮಾತ್ರ ಹೇಳದಿರು....

ನಿರ್ಮಲಾತಿನಿರ್ಮಲ
ಜಲ ಕುಡಿಯಬೇಕಿದೆ....
ಭೂಮಿಜೆಯೇ
ಹುಟ್ಟಿಸಿ ಸಾಕಾಯಿತೇ?? ಎಂದು ಜರಿಯದಿರು...

ಬದುಕ ನೀಡುವ ಕರುಣೆಯ
ಕರ ಕಾಣದಾಗಿಹೋಗಿದೆ...
ತಾಯಿ ಇಳೆಯೇ
ಒಂದೇ ಒಂದನ್ನೂ ಹುಟ್ಟಿಸಲಾರೆಯಾ?? ಎಂದು ಕೇಳದಿರು...

ಕಾನೂನೆಂಬ ನ್ಯಾಯವನೆಳೆದು
ತರುವ ಕಾನನ ಕೊಚ್ಚಿಹೋಗಿದೆ...
ಎಲೈ, ಭೂಮಿ ತಾಯಿಯೇ
ನಿನ್ನ ಕಣ್ಣ ಮುಚ್ಚಿದವರಾರೆಂದು ಪ್ರಶ್ನಿಸದಿರು...

ನ್ಯಾಯದ ಸೊಗಡು,
ಒಂದೊಂದೇ ಅಳಿಯುತ್ತಿದೆ...
ಅಮ್ಮಾ ಅವನಿಯೇ
ಸೃಷ್ಟಿಸುವವನ ಹುಟ್ಟಿಸು ಎಂದು ಸವಾಲೆಸೆಯದಿರು...

ಮುಂದಿನ ಪರಂಪರೆಗೇನು
ಉತ್ತರಿಸಲಿ??? ಎನಿಸುತ್ತಿದೆ...
ತಾಯಿ ಭಾರತಿಯೇ
ಎಂದೋ ಹುಟ್ಟಿರುವ ಪ್ರಕೃತಿಯು, ಕೇವಲ ಶಾವಾಳದೆನ್ನದಿರು...

***

ಮೊಮ್ಮಗಳು ಕಲಿಸಿದ ಪಾಠ

– ಹು.ವಾ. ಶ್ರೀಪ್ರಕಾಶ್

ಲಾಲ್‌ಬಾಗ್‌ನಲ್ಲಿ ನಡೆಯುತ್ತಿದ್ದ ಪುಷ್ಪ ಪ್ರದರ್ಶನವನ್ನು ತೋರಿಸಲು ಮೊಮ್ಮಗಳನ್ನು ಕರೆದುಕೊಂಡು ಕ್ಯಾಬ್‌ನಲ್ಲಿ ಹೋದೆ. ಲಾಲ್‌ಬಾಗಿನ ಮುಂಭಾಗದ ಗೇಟ್ ಸಮೀಪಿಸುತ್ತಿದ್ದಂತೆಯೇ ಗೌಜು ಗದ್ದಲ ಅತಿಯಾಗಿತ್ತು. ಪೋಲೀಸರು ಮೈಕ್‌ನಲ್ಲಿ ಜೋರಾಗಿ ಕೂಗುತ್ತಿದ್ದರು, "ರೀ ಯಾರ್ರೀ ಅದು. ಗಾಡಿ ನಿಲ್ಸ್‌ಬೇಡಿ, ಮುಂದೆ ಹೋಗ್ರಿ.. ಗಾಡಿ ನಂಬರ್.." ಹೀಗೆ ಬಹಳ ಜೋರಾಗಿ ಕೂಗುತ್ತಿದ್ದರೆ ನಮ್ಮ ಕಾರು ನಿಲ್ಲುವಷ್ಟರಲ್ಲಿ ಒಬ್ಬ ಜೋರಾಗಿ ಪೀಪಿ ಊದಿ ಮುಂದೆ ನಿಲ್ಲಿಸುವಂತೆ ಕೈ ತೋರಿಸಿದ. ಅಡ್ಡಾದಿಡ್ಡಿ ಜನಜಂಗುಳಿ, ಬಂದು ನಿಲ್ಲುತ್ತಿರುವ ಕಾರುಗಳು, ಆಟೋಗಳು, ಪೀಪಿಯ ಸದ್ದು, ಮೈಕಿನ ಅರಚಾಟದ ನಡುವೆ ಕಾರು ನಿಲ್ಲಿಸಿದ ಡ್ರೈವರ್, "ಬೇಗ ಬೇಗ ಇಳಿದುಕೊಳ್ಳಿ" ಎಂದ.

ದಡಬಡಿಸಿ ಕಾರಿನಿಂದ ಇಳಿದು, ಗೇಟಿನತ್ತ ಧಾವಿಸುವ ಗುಂಪಿನೊಂದಿಗೆ ಸೇರಿ ಟಿಕೆಟ್ ಪಡೆದು ಒಳಗೆ ಹೋಗುವಷ್ಟರಲ್ಲಿ ಮೊಮ್ಮಗಳ ಮುಖ ತೀರ ಚಿಕ್ಕದಾಗಿಬಿಟ್ಟಿತ್ತು.

ನನ್ನ ಮುಖ ನೋಡುತ್ತ ಆಕೆ, "ಯಾಕೆ ಇಷ್ಟು ಜೋರಾಗಿ ಕೂಗುತ್ತಾರೆ?" ಅಂದಳು.

ಅವಳು ಎರಡು ವರ್ಷ ಇರುವಾಗಲೇ ಕೆನಡಾಕ್ಕೆ ಹೋದವಳು. ಪ್ರಶಾಂತ ವಾತಾವರಣದಲ್ಲಿ ಶಾಲೆಗೆ ಹೋಗಿ ಬರುತ್ತಿದ್ದಳು. ಮನೆಯಲ್ಲೂ ಒಬ್ಬಳೇ! ಅದರಲ್ಲೂ ಎರಡು ವರ್ಷ ಕೊರೋನ ಬಂದದ್ದರಿಂದ ಹೊರಗಿನ ಪ್ರಪಂಚದ ಅರಿವೆಯೇ ಇಲ್ಲದಂತೆ ಮನೆಯಲ್ಲಿದ್ದವಳು. ಐದು ವರ್ಷದ ನಂತರ ಬೆಂಗಳೂರಿಗೆ ಬಂದಿರುವ ಅವಳಿಗೆ ಪುಷ್ಪ ಪ್ರದರ್ಶನ ಇಷ್ಟವಾಗಬಹುದು ಎಂದು ಕರೆತಂದಿದ್ದೆ. ಅವಳ ಅಪ್ಪ ಅಮ್ಮ ಇತರ ಕೆಲಸಗಳಿಗೋಸ್ಕರ ಮಗಳನ್ನು ಬಿಟ್ಟು ಹೋಗಿದ್ದರು. ಲಾಲ್‌ಬಾಗ್‌ನಲ್ಲಿ ಸಂತೋಷವಾಗಿ ಕಾಲ ಕಳೆಯಬಹುದು ಎಂದುಕೊಂಡಿದ್ದೆ. ಆದರೆ ಇಲ್ಲಿಯ ವಾತಾವರಣ ಹಾಗಿರಲಿಲ್ಲ.

ಇಲ್ಲಿಯ ಗೌಜು ಗದ್ದಲದಿಂದ ಆತಂಕಗೊಂಡಿದ್ದ ಅವಳನ್ನು ಸಮಾಧಾನಪಡಿಸುತ್ತಾ, "ತುಂಬಾ ಜನ ಬರ್ತಾ ಇದಾರಲ್ಲ ಅದಕ್ಕೆ. ನಮಗೇ ಅಂತಲ್ಲ, ಇಲ್ಲಿ ಬರುವ ವಿಪರೀತ ಜನಸಂದಣಿಯನ್ನು ನಿಗ್ರಹಿಸುವುದು ಕಷ್ಟವಾಗುತ್ತದೆ ಹಾಗಾಗಿ ಕೂಗುತ್ತಾರೆ" ಎಂದೆ.

ಗಾಜಿನ ಮನೆಯೊಳಗೂ ವಿಪರೀತ ನೂಕುನುಗ್ಗಲು. ಒಬ್ಬ ಹೆಂಗಸು ಮೊಮ್ಮಗಳನ್ನು ತಳ್ಳಿಕೊಂಡು ನಡೆದಾಗ "ಮಗು ಇದೆ, ಸ್ವಲ್ಪ ನೋಡಿಕೊಂಡು ನಡೆಯಮ್ಮ" ಎಂದೆ. "ಈ ರಶ್‌ನಲ್ಲಿ ಅದೆಲ್ಲ ನೋಡಕ್ಕಾಗುತ್ತಾ?" ಎಂದಳು. ಮೊಮ್ಮಗಳು ನನ್ನ ಮುಖ ನೋಡುತ್ತಾ "ಅವಳು ತುಂಬಾ ರೂಡಾಗಿ ಹೇಳಿದಳಲ್ವಾ" ಅಂದಳು.

ನಾನು ಮೊಮ್ಮಗಳ ಕೈ ಹಿಡಿದು ಜನಸಂದಣಿ ಕಡಿಮೆ ಇರುವ ಕಡೆ ಕರೆದುಕೊಂಡು ಹೋದೆ. ಪುಷ್ಪ ಪ್ರದರ್ಶನ ನೋಡಿ ಮನೆಗೆ ಬರುವಷ್ಟರಲ್ಲಿ ಅವಳಿಗೆ ಒಂದು ಪುಸ್ತಕ ಕೊರಿಯರ್‌ನಲ್ಲಿ ಬಂದಿತ್ತು. ಅದರ ಕವರಿನ ಒಂದು ಬದಿಯನ್ನು ಕೈಯಲ್ಲಿ ಹರಿಯುವ ಪ್ರಯತ್ನ ಮಾಡುತ್ತಿದ್ದಾಗ ನಾನು ಒಳಗಿನಿಂದ ಕತ್ತರಿ ತಂದು ಕತ್ತರಿಸಬೇಕು ಎನ್ನುವಷ್ಟರಲ್ಲಿ ಅವಳು ಕೈ ಹಾಕಿದ್ದರಿಂದ ಕತ್ತರಿ ಬೆರಳಿಗೆ ತಾಗಿ ರಕ್ತ ಚಿಮ್ಮಿತು. ನಾನು ಗಾಬರಿಯಾಗಿ ಬೊಬ್ಬೆ ಹಾಕಿದೆ. "ಅಯ್ಯೋ.. ಏನಾಯ್ತಪ್ಪಾ... ಅಷ್ಟು ಗೊತ್ತಾಗಲ್ವಾ ಕೈ ಹಾಕ್ತೀಯಲ್ಲ" ಎಂದು ಬೊಬ್ಬೆ ಹಾಕುತ್ತಾ ತಲೆ ಬಡಿದುಕೊಂಡು

ಹತ್ತಿಗಾಗಿ ಹುಡುಕಾಡತೊಡಗಿದೆ. ಅವಳು ನನ್ನ ವರ್ತನೆ ನೋಡಿ ಗಾಬರಿಯಾಗಿ, "ಅಜ್ಜ ಹಾಗೆ ಮಾಡಬೇಡ ಅಜ್ಜ, ನಂಗೆ ಅಂತದೇನು ಆಗಿಲ್ಲ. ಸಮಾಧಾನವಾಗಿರು" ಎಂದು ಸಿಂಕಿನಲ್ಲಿ ಕೈ ತೊಳೆದುಕೊಂಡು ಬಂದಳು. ನಾನು ಅಷ್ಟರಲ್ಲಿ ಹತ್ತಿ ಹುಡುಕಲು ಹೋಗಿ ಕಪಾಟಿನ ಬಾಗಿಲು ತೆಗೆದಾಗ ಬಟ್ಟೆಗಳೆಲ್ಲ ಉದುರಿದವು. ಕೊನೆಗೆ ಯಾವುದೇ ಒಂದಷ್ಟು ಬಾಕ್ಸ್‌ಗಳನ್ನೆಲ್ಲ ಹೊರಗೆ ಎಳೆದು ಹತ್ತಿಯನ್ನು ಹುಡುಕಿ ತೆಗೆದೆ.

ಬೆರಳಿನಿಂದ ರಕ್ತ ಬರುವುದನ್ನು ನೋಡಿ ಗಾಬರಿಯಿಂದ ಬಡಬಡಿಸುತ್ತಲೇ ಅವಳ ಕೈಬೆರಳಿಗೆ ಒಂದಷ್ಟು ಹತ್ತಿಯನ್ನು ಒತ್ತಿ ಹಿಡಿದೆ. ನನ್ನ ಅವಾಂತರ ನೋಡಿ ಗಾಬರಿಯಾದ ಅವಳು ನನ್ನ ತಬ್ಬಿಕೊಂಡು, "ಅಜ್ಜ, ಏನೂ ಆಗಿಲ್ಲ ಸುಮ್ನೆ ಇರು ಅಜ್ಜ" ಎಂದು ಅಳತೊಡಗಿದಳು.

ಮೆಲ್ಲನೆ ಹತ್ತಿ ತೆಗೆದು ನೋಡಿ ರಕ್ತ ಬರುವುದು ನಿಂತದ್ದರಿಂದ ಸಮಾಧಾನಗೊಂಡೆ. ಒಂದು ಬೆರಳಿನ ಉಗುರಿನ ಬಳಿ ಸ್ವಲ್ಪ ಕತ್ತರಿ ತಾಗಿತ್ತು. ನಾನು ಸಮಾಧಾನ ಸ್ಥಿತಿಗೆ ಬಂದಿದ್ದರಿಂದ ಮೊಮ್ಮಗಳಿಗೂ ಆತಂಕ ಕಡಿಮೆಯಾಗಿತ್ತು.

"ಅಜ್ಜಾ, ನಾನು ಒಮ್ಮೆ ಶಾಲೆಯಲ್ಲಿ ಬಿದ್ದಿದ್ದೆ. ನನ್ನ ಮೊಣಕಾಲಿನ ಗಂಟಿಗೆ ಗಾಯವಾಗಿ ರಕ್ತ ಬಂದಿತ್ತು. ನೋಡಿಲ್ಲಿ ಕಲೆ" ಎಂದು ತೋರಿಸುತ್ತಾ, "ಆಗ ಯಾರೋ ಒಬ್ಬಳು ಹುಡುಗಿ ನನ್ನ ಓಡಿ ಬಂದು ಅಪ್ಪಿಕೊಂಡಳು. ಅವಳು ಯಾರು ಅಂತ ನನಗೆ ಇವತ್ತಿಗೂ ಗೊತ್ತಿಲ್ಲ. ನಾನು ಅವಳ ಮುಖವನ್ನು ನೋಡಲಿಲ್ಲ. ಥ್ಯಾಂಕ್ಸ್ ಕೂಡ ಹೇಳಲಿಲ್ಲ ಆದರೆ ಆ ಘಟನೆ ಮಾತ್ರ ಚೆನ್ನಾಗಿ ನೆನಪಿದೆ. ಒಳ್ಳೇದು ಮಾಡಿದವರು ನೆನಪಿರುತ್ತಾರಲ್ವಾ. ಆಮೇಲೆ ಟೀಚರ್ ಬಂದು 'ಆರ್ ಯು ಓಕೆ? ಯು ವಿಲ್ ಬಿ ಆಲ್ ರೈಟ್' ಎಂದು ಸಮಾಧಾನ ಮಾಡಿ ಪ್ರಿನ್ಸಿಪಾಲ್ ರೂಮಿಗೆ ಕರೆದುಕೊಂಡು ಹೋಗಿ ಬ್ಯಾಂಡೇಜ್ ಕಟ್ಟಿದರು. ಆಮೇಲೆ ಅಮ್ಮನಿಗೆ ಫೋನ್ ಮಾಡಿದರು" ಎಂದಳು.

"ಹೌದಾ ಮುದ್ದು. ನಾನು ಸ್ವಲ್ಪ ಗಾಬರಿಯಾಗಿದ್ದೆ. ಗಾಬರಿಯಲ್ಲಿ ನಾನು ಬಯ್ದೆ. ನಿನ್ನ ಬಗ್ಗೆ ತುಂಬಾ ಪ್ರೀತಿ ಇದೆ ಪುಟ್ಟ" ಎಂದು ಅವಳನ್ನು ತಬ್ಬಿಕೊಂಡೆ. "ನಾನು ಪ್ರೀತಿಯಿಂದ ಬಯ್ಯೋದು, ಬೇಜಾರು ಮಾಡಬೇಡ. ನಮಗೂ ಚಿಕ್ಕವರಿದ್ದಾಗ ಹಾಗೆ ಬಿದ್ದಾಗ, ಬಿದ್ದ ಪೆಟ್ಟು ಸಾಲದು ಎಂಬಂತೆ ಅಪ್ಪನಿಂದಲೂ ಒಂದು ಏಟು ಬೀಳುತ್ತಿತ್ತು" ಎಂದೆ.

ಮನಸ್ಸು ಮಾತ್ರಾ ನನ್ನ ವರ್ತನೆ ಬಗ್ಗೆ ಬೇಸರಗೊಂಡಿತ್ತು. ನಾನು ಏಕೆ ಹೀಗೆ ವರ್ತಿಸಿದೆ ಮೊಮ್ಮಗಳಿಗೆ ಅಜ್ಜ ಎಂದರೆ ಇನ್ನುಮುಂದೆ ನನ್ನ ಈ ಗಾಬರಿ ಮುಖವೇ ನೆನಪಾಗಿ ಉಳಿದುಬಿಡುತ್ತದೇನೋ ಎಂದು ತುಂಬಾ ಖೇದ ವಾಯಿತು. ಎಂತಹಾ ಪರಿಸ್ಥಿತಿಯಲ್ಲೂ ಶಾಂತವಾಗಿ ವರ್ತಿಸಬೇಕೆಂಬ ಅವಳ ಮಾತು ನನ್ನ ಮನಸ್ಸನ್ನು ತಟ್ಟಿತು.

***

ಉಯಿಲು (ದಿ ವಿಲ್)

ಇಂಗ್ಲಿಷ್ ಮೂಲ: ಅಮೃತಾ ಪ್ರೀತಂ
ಕನ್ನಡ ಅನುವಾದ: **ವಿಜಯಕುಮಾರ್ ಸುರತ್ಕಲ್**

ಸಂಪೂರ್ಣ ಸ್ವಸ್ಥ ಕಾಯ ಮತ್ತು ಮನಸ್ಸಿನಲ್ಲಿ
ಬರೆಯುತ್ತಿರುವ ನನ್ನ ಮರಣಪತ್ರವಿದು.

ನನ್ನ ಸಾವಿನ ಬಳಿಕ
ನನ್ನ ಕೋಣೆಯನ್ನು ಕೂಲಂಕಷ ಶೋಧಿಸಿ
ಮನೆಯ ಮೂಲೆ ಮೂಲೆ ಹುಡುಕಿಬಿಡಿ
ಪ್ರತಿ ವಸ್ತುವನ್ನು ಹುಡುಕಿ ತೆಗೆಯಿರಿ
ಅಲ್ಲಲ್ಲಿ ಚದುರಿಹೋಗಿವೆ ಅವು
ಕೀಲಿ ಹಾಕಿಲ್ಲ ನೋಡಿ!

ದಾನ ಮಾಡಿ ನನ್ನ 'ಕನಸು'ಗಳನ್ನು
ಆ ಎಲ್ಲಾ ಹೆಂಗಳೆಯರಿಗೆ,
ಅಡುಗೆ ಮತ್ತು ಮಲಗುವ ಕೋಣೆಗಳ
ನಾಲ್ಕು ಗೋಡೆಗಳ ನಡುವೆ ಬಂಧಿತರವರು,
ತಮ್ಮ ಪ್ರಪಂಚವನ್ನೇ ಕಳಕೊಂಡಿಹರು–
ಬಹಳ ಹಿಂದೇಯೇ ಮರೆತಿಹರು ಕನಸು ಕಾಣುವುದನ್ನು!

ನನ್ನ ನಗುವನ್ನು ಚೆಲ್ಲಿಬಿಡಿ ಆ
ವೃದ್ಧಾಶ್ರಮದ ಸಹವಾಸಿಗಳ ನಡುವೆ,
ಅವರ ಮಕ್ಕಳು ಅಮೇರಿಕಾದ ಬಣ್ಣಬಣ್ಣದ
ನಗರಗಳಲ್ಲಿ ಕಳೆದು ಹೋಗಿಹರು!

ನನ್ನ ಮೇಜಿನ ಮೇಲೆ ಕೆಲವು ಬಣ್ಣಗಳಿವೆ
ಅದರಿಂದ ಆ ಹೆಣ್ಣುಮಗಳ ಬಿಳಿ ಸೀರೆಗೆ ಬಣ್ಣ ಹಾಕಿ,
ಅದರ ಅಂಚುಗಳು ಕೆಂಪಗಾಗಿವೆ
ಅವಳ ಗಂಡನ ರಕ್ತದಿಂದ.
ಅವನ ದೇಹವನ್ನು ಸುತ್ತಿದ್ದಾರೆ–
ತ್ರಿವರ್ಣ ಧ್ವಜದಿಂದ.
ನಿನ್ನೆ ಸಂಜೆಯೇ ಅಸುನೀಗಿದ್ದಾನವನು
ಯುದ್ಧದ ಗಾಯಗಳಿಂದ.

ನನ್ನ ಕಣ್ಣೀರನ್ನು
ಹಂಚಿಬಿಡಿ ಎಲ್ಲಾ ಕವಿಗಳಿಗೂ
ನಾನು ಮಾತು ಕೊಡುತ್ತೇನೆ
ಪ್ರತಿ ಹನಿಯಲ್ಲೂ ಗರ್ಭಸ್ಥವಾಗಿದೆ ಒಂದೊಂದು ಕವನ.

ನನ್ನ ಗೌರವ ಮತ್ತು ಖ್ಯಾತಿ
ಆ ದೇಹ ಮಾರುತ್ತಿರುವ
ಅಸಹಾಯಕ ಹೆಂಗಳೆಯರಿಗೇ ಮೀಸಲು.
ಅವರ ಹೆಣ್ಣು ಮಕ್ಕಳಾದರೂ
ವಿದ್ಯೆ ಪಡೆದು, ಬಾಳಲಿ ಈ ಸಮಾಜದಲ್ಲಿ ಗೌರವದಿಂದ.

ವಾಗ್ದಾನ ಮಾಡಿ,
ಈ ದೇಶದ ಯುವಶಕ್ತಿಯನ್ನು ಹಿಡಿದು
ನನ್ನ ರೋಷಾಗ್ನಿಯನ್ನು ಅವರ
ದೇಹದೊಳಗೆ ಚುಚ್ಚಿಬಿಡುವಿರೆಂದು!
ಅವರಲ್ಲಿ ಕ್ರಾಂತಿಯ ಬೀಜ ಮೊಳೆಯಲು
ಅದು ಅಗತ್ಯ ಬೀಳಬಹುದು.

ನನ್ನ ಭಾವಪರವಶತೆಯಂತೂ
ಸೂಫಿಸಂತರ ಆಸ್ತಿ,
ಎಲ್ಲವನು ತೊರೆದವರವರು–
ದೇವರನ್ನು ಅರಸುತ್ತಾ ಹೊರಟವರು.

ಕೊನೆಗೆ ನನ್ನಲ್ಲಿ ಉಳಿದದ್ದೇನು?
ನನ್ನ ದ್ವೇಷ
ನನ್ನ ಜಿಪುಣತನ
ನನ್ನ ಕೋಪ
ನನ್ನ ಸುಳ್ಳುಗಳು ಮತ್ತು
ನನ್ನ ಸ್ವಾರ್ಥ

ಸುಮ್ಮನೆ ಸುಟ್ಟುಬಿಡಿ
ಅವನ್ನೆಲ್ಲಾ,
ಬೂದಿಯಾಗಲಿ ಅವು
ನನ್ನ ದೇಹದೊಂದಿಗೆ.

***

ಯಾವುದು ಸರಿ?

– ಪೋರ

ನಾನು ಮತ್ತು ನನ್ನ ಹೆಂಡತಿ ಕೆಲವು ತಿಂಗಳುಗಳ ಕಾಲ ಇಂಗ್ಲೆಂಡಿನಲ್ಲಿದ್ದೆವು. ನನ್ನ ಮಗಳು ಅಲ್ಲಿ ನೆಲೆಸಿರುವುದರಿಂದ ನಮಗೂ ಅಲ್ಲಿ ಕಾಲ ಕಳೆಯುವ ಅವಕಾಶ ಆಗಾಗ ಪುಕ್ಕಟ್ಟೆ ದೊರೆಯುತ್ತದೆ. ಮಕ್ಕಳನ್ನು ವಿದೇಶಕ್ಕೆ ಅಟ್ಟಿದ ಎಲ್ಲ ತಂದೆ ತಾಯಿಯರಿಗೆ ದೊರೆಯುವ ಬೋನಸ್ಸು! ಸವಲತ್ತು ಇದು. ಆ ವಿಷಯ ಅಲ್ಲಿಗೆ ಬಿಡೋಣ.

ನನ್ನ ಮಗಳು, ಅಳಿಯ ಇರೋ ಆ ಊರು ಸಣ್ಣದೇ. ಇಂಗ್ಲೆಂಡಿನ ಎಲ್ಲ ಸಣ್ಣ ಊರುಗಳಂತೆ ಅದೂ ಸಹ ಶಾಂತವಾಗಿ, ಸ್ವಚ್ಛವಾಗಿ ಅಚ್ಚುಕಟ್ಟಾಗಿದೆ. ಗಿಡಮರಗಳು, ತಿದ್ದಿ ತೀಡಿದಂತಿರುವ ರಸ್ತೆಗಳು, ಎರಕ ಹೊಯ್ದಂತಹ ಮನೆಗಳು, ಶಬ್ದಮಾಡದ ವಾಹನಗಳು, ರಸ್ತೆಗಿಳಿಯದ ಮಕ್ಕಳು, ಕೊರಳಪಟ್ಟಿ ಇರುವ ನಾಯಿಗಳು– ಇವೆಲ್ಲ ನೋಡಿ ನಮಗಿಬ್ಬರಿಗೂ ಕೌತುಕ. ಊರು ಹೀಗೂ ಇರಲು ಸಾಧ್ಯವೇ ಎಂಬ ಆಶ್ಚರ್ಯ. ಜೊತೆಗೆ ಜನನಿಬಿಡ ಜಾಗ, ಎಲ್ಲ ಕಡೆ ಹಸಿರು, ವಾಕಿಂಗ್ ಮಾಡುವ ಹುಮ್ಮಸ್ಸೂ ನಮಗೆ ಹೆಚ್ಚಾಗಿತ್ತು. ಪ್ರತಿ ದಿನ ಮುಂಜಾನೆ ನಡೆದು ಹೋಗಿ ಊರ ಮಧ್ಯೆ ಭಾಗದ ಪಾರ್ಕ್ ತಲುಪಿ ಒಂದೆರಡು ಸುತ್ತುಹಾಕಿ ಮತ್ತೆ ಪಕ್ಕದ ಕೋ ಆಪರೇಟಿವ್ ಅಂಗಡಿಯಲ್ಲಿ ಅದು ಇದೂ ಕೊಂಡು ಮನೆಗೆ ಹಿಂದುರುಗುತ್ತಿದ್ದೆವು. ದಾರಿಯಲ್ಲಿ ಎದುರು ಸಿಕ್ಕ ಬಿಳಿಯರಿಗೆ 'ಹಲೋ' ಎಂದು ಹೇಳಿ ಹಲ್ಲುಗಿಂಜಿ ಮುಂದೆ ಹೋಗುವುದನ್ನೂ ಕಲಿತಿದ್ದೆವು. ಅದಕ್ಕಿಂತ ಹೆಚ್ಚಿನ ಮಾತುಕತೆ ಇಲ್ಲ. ನನ್ನ ಮಗಳೂ ಬಿಡುವಿದ್ದರೆ ಕೆಲವೊಮ್ಮೆ ನಮ್ಮ ಜೊತೆ ವಾಕಿಂಗಿಗೆ ಸೇರಿಕೊಳ್ಳುತ್ತಿದ್ದಳು.

ಒಂದು ದಿನ, ಹೀಗೆ ನಡೆದು ಹೋಗುತ್ತಿದ್ದಾಗ, "ಎಷ್ಟು ಚಂದ ಇವೆ ಬೀದೀಲಿ ಬೆಳೆದ ಹೂವುಗಳು. ಎಷ್ಟು ಬಣ್ಣವಾಗಿ ಇವೆ ಅಲ್ಲಾ?" ಎಂದದ್ದು ನನ್ನ ಹೆಂಡತಿ.

"ಇಲ್ಲಿ ಯಾರೂ ಹೂ ಕೀಳುವುದೇ ಇಲ್ಲವೆ? ಎಷ್ಟು ಹೂ ಇವೆ ನೋಡು ದಾರಿ ಬದಿ. ಇನ್ನು ಮನೆಯ ತೋಟಗಳ ಒಳಗೆ ಕೇಳಲೇಬೇಕಿಲ್ಲ. ಇಲ್ಲಿನ ನೆಲದ ಗುಣ ಹಾಗಿದೆ ಎನಿಸುತ್ತದೆ". ಮುಂದುವರೆದವಳು,

"ಹೇಗೂ ರಸ್ತೆ ಪಕ್ಕ ಇವೆ ಒಂದು ಹೂ ಕಿತ್ತುಕೊಡೆ. ನಾಳೆ ದೇವರಿಗಿಟ್ಟರಾಯಿತು. ಬಂದಾಗಿನಿಂದ ದೇವರ ತಲೆಯ ಮೇಲೆ ಹೂ ಇಟ್ಟಿಲ್ಲ" ಎಂದಳು.

"ಹೇ ಅಮ್ಮ, ಹಾಗೇನಾದರೂ ಮಾಡೀಯೆ. ಇಲ್ಲಿ ನಿನ್ನದಲ್ಲದ್ದು ಪಬ್ಲಿಕ್ ಪ್ರಾಪರ್ಟಿ ಆಗುತ್ತದೆ. ನೀನು ಕೀಳುವಂತಿಲ್ಲ" ಮಗಳು ತಟ್ಟನೆ ಎಚ್ಚರಿಸಿದಳು. ನನಗೆ ಈ ಸಂಭಾಷಣೆ ಚಿಂತನೆಗೆ ಹಚ್ಚಿತು.

ನನ್ನ ಮಗಳು ಬೆಂಗಳೂರಿನಲ್ಲಿದ್ದಾಗ ಬೇರೆಯೇ ಇದ್ದಳು. ಕಾಂಪೌಂಡು ಹತ್ತಿ ಪಕ್ಕದ ಮನೆ ಪೇಪೆಕಾಯಿ ಕೀಳಲು ಹೇಸುತ್ತಿರಲಿಲ್ಲ. ಮನೆಗೆ ಯಾರಾದರೂ ಸ್ಕೂಟರೋ, ಮೋಟರ್‌ಬೈಕೋ ತಂದರೆ ದುಂಬಾಲು ಬಿದ್ದು, ಇಲ್ಲವೇ ಕೀ ಕದ್ದು, ಅವರ ಗಾಡಿಯನ್ನು ತೆಗೆದುಕೊಂಡು ಓಡಿಸುತ್ತಿದ್ದಳು. ಹೆಲ್ಮೆಟ್ ಧರಿಸದೆ, ಲೈಸೆನ್ಸ್ ಇಲ್ಲದೆ ಮನೆಯ ಸುತ್ತಮುತ್ತ ಗಾಡಿ ಓಡಿಸಿ 'ಗಂಡುಬೀರಿ' ಪದವಿ ಪಡೆದುಕೊಂಡಿದ್ದಳು. ಅದೇ ಅವಳು ಇಲ್ಲಿ ನಮಗೆ ಕಾನೂನು, ಸಭ್ಯತೆ, ತನ್ನದು–ಪರರದು ಎಂದೆಲ್ಲ ಬಾಷಣ ಬಿಗಿಯುತ್ತಿದ್ದಾಳೆ! ಈ ಮಾರ್ಪಾಡು ಹೇಗಾಯಿತು. ನಾವು ನಾಲಿಗೆ ಕಿತ್ತುಕೊಂಡರೂ ಬದಲಾಗದವಳು ಈ ಮೂರು ವರ್ಷಗಳಲ್ಲಿ ಸಿವಿಲೈಸ್ಡ್, ಸಂಭಾವಿತೆ ಆಗಿಬಿಟ್ಟಿದ್ದಾಳೆ!

ನನಗೆ ಇತ್ತೀಚೆಗೆ ಓದಿದ ವಸಾಹತೋತ್ತರ ಕಲ್ಪನೆಗಳು ಎಂಬ ಲೇಖನವೊಂದರ ಕೆಲವು ಮಾತುಗಳು ನೆನಪಾದವು. 'ನಾನು' ಅರ್ಥಾತ್ 'ಪ್ರಜ್ಞೆ' ಎನ್ನುವ ಪರಿಕಲ್ಪನೆ ಬಹಳ ಸಂಕೀರ್ಣವಾದುದು. ಆಧುನಿಕೋತ್ತರ ಕಾಲದಲ್ಲಿ ಈ 'ವ್ಯಕ್ತಿತ್ವ', 'ಪ್ರಜ್ಞೆ' ಅಲಿಯಾಸ್ 'ಸೆಲ್ಫ್' ಎಂಬುದಕ್ಕೆ ನಿರ್ದಿಷ್ಟ ಮಿತಿ ಇಲ್ಲ. ವಲಯ ಇಲ್ಲ. ಅದು ಅಮೂರ್ತ, ವಿಸ್ತೀರ್ಣಗೊಳ್ಳಬಲ್ಲದು. ಅದಕ್ಕೆ, ಸಂಕುಚಿತವೂ ಆಗಬಹುದು. 'ಸೆಲ್ಫ್' ತನ್ನ ಸುತ್ತಲಿನ ಕುಟುಂಬ, ಸಮಾಜ, ದೇಶ, ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗಿ ಹಿಗ್ಗಲೂಬಹುದು, ಕುಗ್ಗಲೂಬಹುದು. ಸುಪ್ತವಾಗಿರುವ ಪ್ರತಿಭೆಗಳು, ಆಮಿಷಗಳು ಹೊರಬರಲೂಬಹುದು ಎಂದು ಓದಿದ್ದು ನೆನಪಾಯಿತು.

ಹೌದು, ಭಾರತ ಅವಕಾಶಗಳ ಸಮಾಜ ಹೊಂದಿದೆ. ವ್ಯಕ್ತಿಯೊಬ್ಬನಿಗೆ ಪೂರ್ಣ ಪ್ರಮಾಣದ ಸ್ವಾತಂತ್ರ್ಯ ಕೊಡುತ್ತದೆ. ಕಾನೂನಿನ ತೊಡಕು ಅಷ್ಟು ಇಲ್ಲ. ಅವನ ಹುಂಬುತನಕ್ಕೆ, ಚೇಷ್ಟೆಗಳಿಗೆ ಸೃಜನಶೀಲ ಪ್ರಯೋಗಗಳಿಗೆ, ತಿಕ್ಕಲುಗಳಿಗೆ ಮುಕ್ತ ಅವಕಾಶ ನೀಡುತ್ತದೆ. ಅದಕ್ಕೆಂದೇ ಇಷ್ಟು ಗೊಂದಲಗಳು ಇಲ್ಲಿ. ಪ್ರತಿಯೊಬ್ಬರಿಗೂ ಅವರವರದೆ ನ್ಯಾಯ, ಅವರವರದೇ ಸಂವಿಧಾನ, ಅವರವರದೇ ಸರಿ–ತಪ್ಪುಗಳ ಮಾನದಂಡ, ವ್ಯಾಖ್ಯಾನ. ಎಲ್ಲರೂ ಬೇರೆ ಬೇರೆ.

ಅದೇ ಯೂರೋಪಿನಲ್ಲಿ ಎಲ್ಲರೂ ಒಂದೇ ಅಚ್ಚಿನಲ್ಲಿ ಹೊಯ್ದ ಬೊಂಬೆಗಳು. ಅವರ ನಡವಳಿಕೆ ಒಂದೇ ತೆರನಾದದ್ದು. ಅಲ್ಲಿ ಜೋರಾಗಿ ದನಿ ಎತ್ತಿ ಮಾತನಾಡುವಂತಿಲ್ಲ. ಇಷ್ಟ ಬಂದ ಗಿಡ ತಂದು ಮನೆಮುಂದೆ ನೆಡುವಂತಿಲ್ಲ. ಮನೆಗೆ ತನಗಿಷ್ಟವಾದ ಬಣ್ಣ ಹಚ್ಚುವಂತಿಲ್ಲ. ಮಗುವನ್ನು ತೊಡೆಯ ಮೇಲೋ, ತೋಳಿನಲ್ಲೋ ಹಿಡಿದು ಕಾರಿನಲ್ಲಿ ಕೂತು ಸಂಚರಿಸುವಂತಿಲ್ಲ. ಇಲ್ಲ....ಇಲ್ಲ ಇಲ್ಲ.. ಅವುಗಳೇ ಹೆಚ್ಚು.

ಆದರೆ ಇವೇ ನೀತಿ ನಿಯಮಗಳಿಂದಾಗಿ ಸಾಮಾನ್ಯ ಮನುಷ್ಯನಿಗೆ ಈ ದೇಶಗಳಲ್ಲಿ ಕೆಲವು ಸೌಲಭ್ಯಗಳು ದೊರೆತಿವೆ. ಕಾರನ್ನು ವೇಗವಾಗಿ ಚಲಿಸಬಹುದು, ಮನೆ ಮುಂದೆ ಬಿಟ್ಟು ಮರೆತ ವಸ್ತು ವಾರವಾದರೂ ಅಲ್ಲೇ ಬಿದ್ದಿರುತ್ತದೆ. ಇಡೀ ಬೀದಿ ನಿಶ್ಶಬ್ದವಾಗಿರುತ್ತದೆ. ಸಮಯಕ್ಕೆ ಸರಿಯಾಗಿ ಬಸ್ಸು ಬರುತ್ತದೆ, ಅಕ್ಕಪಕ್ಕದ ಜನ ನಿಮ್ಮ ಮನೆ ವಿಷಯದ ಗೋಜಿಗೆ ಹೋಗುವುದಿಲ್ಲ. ಇತ್ಯಾದಿ, ಇತ್ಯಾದಿ.

ಹಾಗಾದರೆ ಪರಿಪೂರ್ಣ ಸ್ವಾತಂತ್ರ್ಯ, ಸ್ವೇಚ್ಛ ಬದುಕು ಬಯಸುವ ನಾವು ನಮ್ಮ ಸಾಮಾಜಿಕ ಅಭಿವೃದ್ಧಿಗಳನ್ನು ಅಡವಿಟ್ಟಿವೆ? ಸ್ವೇಚ್ಛವಾಗಿ ಬದುಕ ಹೊರಟ ನಾವು ತೆರುತ್ತಿರುವ ಬೆಲೆ ಏನು? ನಮ್ಮ ಸುರಕ್ಷ ಸಾಮಾಜಿಕ ಬದುಕು ಮತ್ತು ಬೆಳವಣಿಗೆ ಕುಂಠಿತವಾಯಿತೇ?

ಯಾವುದು ಮುಖ್ಯ?. ಯಾಂತ್ರಿಕವಾಗಿ ಕ್ರೋಟಾನ್ ಗಿಡದಂತೆ, ಕಬ್ಬಿನ ಗದ್ದೆಯಂತೆ ಬೆಳೆಯುವುದೇ? ಇಲ್ಲಾ ಹೊಂಗೆ ಮರದಂತೆ ಬೆಳೆದು ಹೂ ಬಿಟ್ಟು ಸಂಭ್ರಮಿಸುವುದೆ? ಯಾರೋ ಬಂದು ಹೊಲಕ್ಕೆ ಸೊಪ್ಪು ಬೇಕೆಂದು ಮರವಿಡೀ ಕತ್ತರಿಸಿದರೂ ಮತ್ತೆ ಚಿಗುರುವುದೇ? ಸತ್ಯ ತಿಳಿಯಲಿಲ್ಲ.

ಸ್ವಾತಂತ್ರ್ಯ ಬಯಸುವ ಸಮಾಜ ಹೆಚ್ಚೇ, ಇಲ್ಲಾ ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೇರಿ ತಾವು ಬೇಡುವ ಎಲ್ಲಾ ಸೌಲಭ್ಯಗಳನ್ನು ತಮ್ಮದಾಗಿಸಿಕೊಳ್ಳುವ ಸಮಾಜ ದೊಡ್ಡದೇ? ಎಷ್ಟು ಯೋಚಿಸಿದರೂ ಯಾವುದೂ ಸ್ಪಷ್ಟವಾಗಲಿಲ್ಲ. ಸುಮ್ಮನಾದೆ. ಮಾರನೆಯ ದಿನ ಬೇರೊಂದು ಕಾರಣಕ್ಕೆ ವಾಕಿಂಗ್ ಹೊಗಲಾಗಲಿಲ್ಲ. ಆದರೆ ಒಳಗೇ ಕೊರೆಯುತ್ತಿದ್ದ ಪ್ರಶ್ನೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ಮಾರನೆಯ ದಿನ ವಾಕಿಂಗ್ ಹೊರಟೆ. ಸಮಸ್ಯೆಯಿಂದ ತಪ್ಪಿಸಿಕೊಳ್ಳಲು ಜನ ಮನೆಯಿಂದ ಹೊರಗೆ ವಾಕಿಂಗ್ ಹೊರಡುತ್ತಾರೆ ಎಂಬ ಸತ್ಯ ಆಗ ಅರಿವಾಯಿತು. ಆ ವಿಚಾರ ಬಿಡಿ.

ಹಾಗೆ ಹೊರಟು ಮನೆಗೆ ಹಿಂತಿರುಗುವಾಗ ಮತ್ತೇ ಅದೇ ದಾರಿ ತುಳಿದೆವು, ಅದೇ ನಿರ್ಜನ ಬೀದಿ, ಅದೇ ಬೀದಿ ಬದಿ ಹೂವು. ಆ ಹೂವಿನಲ್ಲಿ ಅದೇ ಛೇಡಿಸುವ ನಗು. ಮತ್ತೆ ಅದೇ ದ್ವಂದ್ವ. ಯೋಚನೆ ಹೆಚ್ಚಿತು. ಈ ಬಾರಿ ಹೆಚ್ಚು ಯೋಚಿಸುವ ಗೋಜಿಗೆ ಹೋಗಲಿಲ್ಲ. ಹೆಂಡತಿಯ ಕಡೆ ನೋಡಿದೆ. ಅವಳು ಹೂವು ಕೇಳಲಿಲ್ಲ. ನಾನು ಕೀಳಲಿಲ್ಲ. ಇಬ್ಬರೂ ನೆಟ್ಟಗೆ ನಡೆದು ಮನೆ ಸೇರಿದೆವು.

***



ಗೂಗಲ್ ಮೀಟ್ ಅಂತರ್ಜಾಲ ವೇದಿಕೆಯಲ್ಲಿ ಸಾಹಿತ್ಯ ದಾಸೋಹ ವೀಕ್ಷಿಸುತ್ತಿರುವ ಗಣಪನ ವಿವಿಧ ಭಂಗಿಗಳು

ಗೊರೂರರ ‘ನಮ್ಮ ಊರಿನ ರಸಿಕರು’

ಒಂದು ಮರು ಓದು

– ಶ್ರೀಧರ ಬಾಣಾವರ

ಕಳೆದ ದಾಸೋಹದಲ್ಲಿ ನಾನು ಗೊರೂರರ ‘ಅಮೆರಿಕದಲ್ಲಿ ಗೊರೂರು’ ಎಂಬ ಕೃತಿಯ ಪರಿಚಯ ಮಾಡಿಕೊಟ್ಟಿದ್ದೆ. ಇಂದು ನಾನು ಅವರ ಅತ್ಯಂತ ಜನಪ್ರಿಯವಾದ ಕೃತಿ ‘ನಮ್ಮ ಊರಿನ ರಸಿಕರು’ ಬಗ್ಗೆ ಮಾತನಾಡಲು ಪ್ರಯತ್ನಿಸುತ್ತೇನೆ. ೫೦ರ ದಶಕದಲ್ಲಿ ನನ್ನಕ್ಕನಿಗೆ ಎಸ್.ಎಸ್.ಎಲ್.ಸಿ.ಯಲ್ಲಿ ಉಪಪಠ್ಯವಾಗಿದ್ದ ಪುಸ್ತಕ ‘ನಮ್ಮ ಊರಿನ ರಸಿಕರು’ ನಮ್ಮ ಮನೆ ಸೇರಿತ್ತು. ಕೆನಿಲ್‌ವರ್ತ್ ಎಂಬ ಅನುವಾದ ಕೃತಿ, ಅಳಸಿಂಗಾಚಾರ್ಯರ ರಾಮಾಯಣದ ಪ್ರತಿಗಳು, ವೀಣಾ ರಹಸ್ಯ ಅಥವಾ ಸಂಧ್ಯಾವಂದನೆಯ ತಾತ್ವರ್ಯ ಮುಂತಾದ ಕೆಲವೇ ಕೆಲವು ಪುಸ್ತಕಗಳು ನಮ್ಮ ಮನೆಯಲ್ಲಿದ್ದವು.

ಆರೇಳರ ಬಾಲಕನಾಗಿದ್ದ ನನಗೆ ಓದಬಹುದಾಗಿದ್ದ ಪುಸ್ತಕವೆಂದರೆ ‘ನಮ್ಮ ಊರಿನ ರಸಿಕರು’ ಒಂದೇ. ಅಂದಿನಿಂದ ಆರಂಭಿಸಿ ಇಂದಿನವರೆಗೆ ನೂರಾರು ಸಾರಿ –ಖಂಡಿತಾ ಉತ್ಪ್ರೇಕ್ಷೆಯಲ್ಲ– ಓದಿರುವ ಪುಸ್ತಕ ‘ನಮ್ಮ ಊರಿನ ರಸಿಕರು’ ಮಾತ್ರ. ನಂತರದಲ್ಲಿ ಇವರ ಅನೇಕ ಪುಸ್ತಕಗಳನ್ನು ಓದಲು ಇದು ಪ್ರೇರೇಪಿಸಿತು.

ಗೊರೂರರ ಮುಂಚಿನ ಕೃತಿ ‘ಹಳ್ಳಿಯ ಚಿತ್ರಗಳು’ಗೆ ದೊರಕಿದ ಉತ್ತೇಜನದಿಂದ ಬರೆದ ಕೃತಿಯಂತೆ, ‘ನಮ್ಮ ಊರಿನ ರಸಿಕರು’. ಇದರ ರಂಗಪ್ರವೇಶ ಹೆಚ್ಚಾಗಿ ಹಿರಿಯರ ಆಶೀರ್ವಾದಪೂರ್ವಕವಾಗಿ ಆಯಿತು ಎಂದು ಲೇಖಕರು ಹೇಳಿಕೊಂಡಿದ್ದಾರೆ. ಹಸ್ತಪ್ರತಿಯಲ್ಲಿ ಅದರ ಮೊದಲ ವಾಚನ ಮಾಸ್ತಿಯವರ ಮನೆಯಲ್ಲಿ ಆಯಿತಂತೆ. 40 ಜನ ವಿದ್ವಾಂಸರು, ಹಿತೈಷಿಗಳು ಭಾಗವಹಿಸಿದ್ದರಂತೆ. ಬಿಎಂಶ್ರೀ, ತೀನಂಶ್ರೀ, ದೇಜಗೌ, ಪುತಿನ ಎಲ್ಲರೂ ಸಭೆಯಲ್ಲಿದ್ದರಂತೆ. ಈ ಎಲ್ಲರ ಉತ್ತೇಜನದಿಂದ ಈ ಕೃತಿ ಮುದ್ರಣ ರೂಪದಲ್ಲಿ ಹೊರಬಂದಿತಂತೆ. ಈ ಕೃತಿಗೆ ಡಿವಿಜಿಯವರು ಮಹತ್ವಪೂರ್ಣ ಮುನ್ನುಡಿಯನ್ನು ಬರೆದಿದ್ದಾರೆ.

ಹಾಸನ ಜಿಲ್ಲೆಯ ಒಂದು ಸಣ್ಣ ಗ್ರಾಮ ಗೊರೂರು. ಹೇಮಾವತಿಯ ದಡದಲ್ಲಿನ ಈ ಗ್ರಾಮದಲ್ಲಿ ಎಲ್ಲ ಜಾತಿ ಪಂಗಡಗಳ, ವಿವಿಧ ಕಸುಬಿನ ಜನರಿದ್ದಾರೆ. ಅನಕ್ಷರಸ್ಥರು ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಅಲ್ಪಸ್ವಲ್ಪ ಓದಿದವರು, ಕಾಲೇಜು ಕಲಿತವರು, ರಾಮಾಯಣ ಮಹಾಭಾರತ ಅರಿತ ಜ್ಞಾನಿಗಳೂ ಇಲ್ಲಿದ್ದಾರೆ. ಇಲ್ಲಿ ಹುಟ್ಟಿ ಬೆಳೆದ ಗೊರೂರರಿಗೆ ಲಭ್ಯವಾದದ್ದು ಹೈಸ್ಕೂಲ್‌ವರೆಗಿನ ವಿದ್ಯಾಭ್ಯಾಸ ಮಾತ್ರ.. ಇವರು ತಮ್ಮ 14–15ನೆಯ ವಯಸ್ಸಿಗೇ ಗಾಂಧಿಯವರಿಂದ ಪ್ರೇರೇಪಿತರಾಗಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ್ದರಿಂದ ತಮ್ಮ ಹಳ್ಳಿಯ ಜೀವನ, ಜಾನಪದ ಸಾಹಿತ್ಯ, ಗಾಂಧಿಯವರ ಒಡನಾಟ, ಅವರ ತತ್ವಗಳು, ಖಾದಿ ಚಳವಳಿ, ಇವೇ ಅವರ ಕಾಲೇಜು, ವಿಶ್ವವಿದ್ಯಾಲಯಗಳಾದುವು. ತಮ್ಮ ಜೀವನದಿಂದ ಕಲಿತ ಪಾಠಗಳನ್ನು, ಸರಳ ಸ್ವಾರಸ್ಯಕರ ಪ್ರಬಂಧಗಳು, ಜೀವನ ಚರಿತ್ರೆಗಳು, ವೈಚಾರಿಕ ಲೇಖನಗಳು, ಜಾನಪದ ಸಂಗ್ರಹ–ವಿಶ್ಲೇಷಣೆಯ ಕೃತಿಗಳನ್ನು ರಚಿಸುವುದರಲ್ಲಿ ಬಳಸಿಕೊಂಡು ವಿಶಿಷ್ಟ ಸಾಹಿತಿಯಾಗಿ ಹೊರಹೊಮ್ಮಿದರು. ಹಳ್ಳಿಯ ಜೀವನದ ಬಗ್ಗೆ ಅನೇಕ ಕೃತಿಗಳು ಇವರಿಂದ ರಚಿತವಾಗಿವೆ. ಅದರಲ್ಲಿ ‘ನಮ್ಮ ಊರಿನ ರಸಿಕರು’ ಕೃತಿ ಅತ್ಯಂತ ಜನಪ್ರಿಯ. ಇದರ ಬಗ್ಗೆ ಒಂದು ಸ್ವಾರಸ್ಯಕರ ಘಟನೆಯನ್ನು ಇಲ್ಲಿ ಉಲ್ಲೇಖಿಸಬೇಕು. ಕನ್ನಡ ಪಂಡಿತರ ಹುದ್ದೆ ಪಡೆಯುವ ಸಲುವಾಗಿ ಇವರು ಕನ್ನಡ ಪಂಡಿತ ಪರೀಕ್ಷೆ ಬರೆಯಬೇಕಾಗಿಬರುತ್ತೆ. ಅನೇಕ ಕನ್ನಡ ಕೃತಿಗಳನ್ನು ಇವರು ಅಭ್ಯಸಿಸಬೇಕಾಗುತ್ತದೆ. ಅದರಲ್ಲೊಂದು ಅಷ್ಟರೊಳಗಾಗಲೇ ಜನಪ್ರಿಯವಾಗಿದ್ದ ಇವರದೇ ಕೃತಿ

'ನಮ್ಮ ಊರಿನ ರಸಿಕರು'. ಈ ರೀತಿಯ ಪರಿಸ್ಥಿತಿ ನಮ್ಮ ಕನ್ನಡದ ಅನೇಕ ಲೇಖಕರಿಗೆ ಒದಗಿಬಂದಿರುವ ಉದಾಹರಣೆಗಳಿವೆ. ತಮ್ಮದೇ ಪುಸ್ತಕದ ಬಗ್ಗೆ ಬಂದ ಪ್ರಶ್ನೆಗಳಿಗೆ ಚೆನ್ನಾಗಿಯೇ ಉತ್ತರಿಸಿರುವುದು ಸಹಜ. ಆದರೆ ಪರೀಕ್ಷಕರಾಗಿದ್ದ ಕನ್ನಡ ವಿದ್ವಾಂಸ ಮುಳಿಯ ತಿಮ್ಮಪ್ಪಯ್ಯನವರ ನಿರೀಕ್ಷೆಗೆ ಇದು ಸಾಕಾಗಿರಲಿಲ್ಲವೇನೋ? ಮುಂದೆ ಅವರು ಗೊರೂರರನ್ನು ಕಂಡಾಗ "ಏನ್ರೀ, ನೀವೇ ಬರೆದ ಪುಸ್ತಕ ಅದು. ಇನ್ನೂ ಚನ್ನಾಗಿ ಓದಿಕೊಂಡು ಬಂದು ಉತ್ತರ ಬರೆಯಬಾರದಿತ್ತೇನ್ರೀ? ನಿಮಗೆ ಕೊಟ್ಟ ಅಂಕ ಹೆಚ್ಚಾಯಿತು, ಇನ್ನೂ ಕಡಿಮೆ ಕೊಡಬೇಕಾಗಿತ್ತು" ಎಂದರಂತೆ.

ಈ ಕೃತಿಯ ಬಗ್ಗೆ ಹೇಳುವುದಾದರೆ ಇಲ್ಲಿನ ದಿನನಿತ್ಯದ ಜನಜೀವನ, ಊರಿನ ಪ್ರಕೃತಿ ಸೌಂದರ್ಯ, ಕಾಲಾಂತರದಲ್ಲಿ ನಡೆದ ಅನೇಕ ಪ್ರಸಂಗಗಳ ವರ್ಣನೆಗಳ ನಿರೂಪಣೆ ವಿಶಿಷ್ಟವಾದ ಗೊರೂರರ ಲೇಖನಿಯಲ್ಲಷ್ಟೇ ಸಾಧ್ಯ. ಅದರಲ್ಲೂ ಇಲ್ಲಿನ ಸಾಧಾರಣರಲ್ಲಿ ಅಸಾಧಾರಣರಾದ ಜನಪದ, ಶಾಲು ಸಾಬಿ, ಜೋಡಿದಾರರು, ಶೀನಪ್ಪ, ರಂಗೇಗೌಡ, ಗುಂಡ, ಮಣೆಗಾರರು, ಅತಂತ್ರ ವಿಧವೆಯರು ಇವರೇ ಪಾತ್ರಧಾರಿಗಳು.

ತಮ್ಮೂರಿನ ಜನಗಳ ಬಗ್ಗೆ ಗೊರೂರರೇ ಹೀಗೆ ಹೇಳುತ್ತಾರೆ: "ನಮ್ಮ ಊರಿನವರೆಲ್ಲಾ ಬಹಳ ರಸಿಕರು. ಅಲ್ಲಿ ವಿನೋದ ಪ್ರಿಯರಲ್ಲದವರು ಯಾರೂ ಸಿಕ್ಕುವುದಿಲ್ಲ. ಕೋಪಿಷ್ಠರಾಗಲೀ ಮುಖವನ್ನು ಗಂಟು ಹಾಕಿಕೊಳ್ಳುವವರಾಗಲೀ ಅಲ್ಲಿಗೆ ಬಂದರೆ ಕೂಡಲೇ ಮಾಯವಾಗಿಬಿಡುತ್ತಾರೆ ಅಥವಾ ಮುಂಗೋಪ ಬಿಟ್ಟು ಎಲ್ಲರಂತೆ ತಾವೂ ನಗಲು ಪ್ರಾರಂಭಿಸುತ್ತಾರೆ"

ಇಲ್ಲಿ ಬರುವ ಒಂದು ಪಾತ್ರ ಸೀನಪ್ಪ ಇಡೀ ಊರಿನ ಹಳ್ಳಿಯ ಯಜಮಾನನಂತೆ ಕಾಣಿಸಿಕೊಳ್ಳುತ್ತಾನೆ. ಅವನು ಪ್ರವೇಶಿಸದ ಮನೆ ಇಲ್ಲ. ಹೋಗದ ಜಾಗವಿಲ್ಲ, ತಲೆಹಾಕದ ಪ್ರಸಂಗವಿಲ್ಲ. ಅವನಿಲ್ಲದೆ ಮದುವೆ ಮುಂಜಿ ನಡೆಯುವಂತಿಲ್ಲ. ಸ್ಮಶಾನ ಕಾರ್ಯ ಮುಗಿಯುವಂತಿಲ್ಲ ಕೊನೆಗೆ ಅವನು ಸತ್ತ ಎಮ್ಮೆಯನ್ನೂ ಹೊತ್ತವನು. ಅವನು ವಿನೋದಕ್ಕೂ ಸರಿ, ರಾಜಿ ಮಾಡುವುದಕ್ಕೂ ಸರಿ. ಅವನ ತುಂಟತನವನ್ನೇ ಅರ್ಥಮಾಡಿಕೊಂಡಿರುವುದರಿಂದ ಯಾರಿಗೂ ಅವನ ಮೇಲೆ ಕೋಪವೇ ಬರುವುದಿಲ್ಲ.

ಹಳ್ಳಿಯ ರೈತರ ಮನೆಯ ಸಮಾರಂಭದ ಊಟ ಒಂದರಲ್ಲಿ ಆದ ಪೇಚಿನ ಪ್ರಸಂಗವೊಂದನ್ನಂತೂ ಓದುಗ ಮರೆಯಲು ಸಾಧ್ಯವೇ ಇಲ್ಲ. ರಂಗೇಗೌಡ ತನ್ನ ಮದುವೆ ಸಂದರ್ಭದಲ್ಲಿ ಊರಿಗೆಲ್ಲ ಸೊಗಸಾದ ಊಟ ಕೊಡುವ ಯೋಚನೆ ಮಾಡುತ್ತಾನೆ. ಚೆನ್ನಾದ ಊಟವೆಂದರೆ ಹಿಟ್ಟು ಅನ್ನ, ಎಸರು(ಸಾರು). ಪಾಯಸ, ಇತ್ಯಾದಿ. ಅಲ್ಲಿ ಕಾರದ ಎಸರಿಗೆ ಎಣ್ಣೆ ಬಿಡುವುದು ಪದ್ದತಿ. ಹೀಗೆ ಎಣ್ಣೆ ಬಿಡುವುದರ ಮೇಲೆ ಅವನ ಐಶ್ವರ್ಯ ನಿರ್ಧಾರವಾಗುತ್ತದೆ. ಎಣ್ಣೆ ಬಿಡುವುದು ಚಮಚ, ಸೌಟಿನಲ್ಲಿ ಅಲ್ಲ, ಬೆರಳಿನಲ್ಲಿ. ಒಂದು ಬೆರಳು ತೀರಾ ಬಡತನ, ಎರಡು ಮಧ್ಯಮ, ಮೂರು ಬೆರಳಲ್ಲಿ ಎಣ್ಣೆ ಬಿಡುವವ ಧನಿಕ. ಅದು ಹಳ್ಳಿಯವರ ಬಾಯಲ್ಲಿ ಮೂರು ಬೆಟ್ಟು ಎಣ್ಣೆ ಬಿಟ್ಟು ಗಣರಾಧನೆ ಮಾಡಿದ ಅವನಿಗೇನು ಕಡಿಮೆ? ಎಂದಾಗಿ ಹೊಮ್ಮುತ್ತದೆ. ಇಂತಹ ಸಂದರ್ಭ ನಾಲ್ಕು ಖಂಡುಗ ರಾಗಿ, ಅಕ್ಕಿಯ ಖರ್ಚು. ಸೀನಪ್ಪನ ನೇತೃತ್ವದಲ್ಲಿ ರಂಗೇಗೌಡನ ಮದುವೆಯಲ್ಲಿ ಬ್ರಾಂಬ ಎಸರು ತಯಾರಾಗಿದೆ. ಊಟಕ್ಕೆ ಕುಳಿತವರೆಲ್ಲರಿಗೂ ಮೊದಲ ಪಂಕ್ತಿಯಲ್ಲಿ ನಾಲ್ಕು ನಾಲ್ಕು ಮುದ್ದೆ ಒಂದೊಂದು ಮೇಕೆ ಹಾರುವಷ್ಟು ಅನ್ನ ಬಡಿಸಿದ್ದಾಗಿದೆ. ಮಾಡಿದ ಎಸರನ್ನು ಎಲ್ರೂ ಪಾಯಸದಂತೆ ಕುಡಿಯ ತೊಡಗಿದರು. ಎಲ್ಲರೂ ಹೊಟ್ಟೆ ತುಂಬಿದರೂ ಇನ್ನೂ ಎಸರು ತತ್ತಾ ಅನ್ನುವವರೆ. ಮುಂದಿನವರಿಗೆ ಏನೂ ಉಳಿಯುವ ಲಕ್ಷಣ ಕಾಣದಾದಾಗ ರಂಗೇಗೌಡನ ಚಿಕ್ಕಪ್ಪ ಎರಡು ಅಡ್ಡೇಲಿ

ನಾಲ್ಕು ಬಿಂದಿಗೆ ನೀರು ತರಿಸಿ ಎಸರಿಗೆ ಮದುವೆ ಮಾಡಿಸುತ್ತಾನೆ. ರಂಗೇಗೌಡನಿಗೂ ರುಚಿ ನೋಡಲು ಎಸರು ಸಿಗುವುದಿಲ್ಲ.

ಇನ್ನು ಹಳ್ಳಿಯ ಹೆಂಗಸರು ರಾತ್ರಿ ಬೇಕೆಂದು ಹೆಚ್ಚಾಗಿಯೇ ಮಾಡಿ ಉಳಿಸಿದ ರಾಗಿ ಮುದ್ದೆಯಲ್ಲಿ ಬೆಳಗ್ಗೆ ಬೇಗನೇ ಹೊಲಗದ್ದೆಗಳಿಗೆ ಹೋಗುವ ಗಂಡಾಳುಗಳಿಗೆ ಬಿಸಿಬಿಸಿ ಉಪ್ಪಿಟ್ಟು ತಯಾರಿಸುವ ರೆಸಿಪಿ ಸಹ ಗೊರೂರರು ಈ ಕೃತಿಯಲ್ಲಿ ಕೊಟ್ಟಿದ್ದಾರೆ.

ಇನ್ನು ಊರಿನ ಜನರ ಬರಹಗಳ ಹಲವು ಉದಾಹರಣೆಗಳನ್ನು ನೋಡೋಣ. ಶಂಖಪುರದ ನರಸಿಂಹ ಜೋಯಿಸರ ರುಜು ಎಂದು ಬರೆಯಬೇಕಾದ ಕಡೆ ಗಾಬರಿಯಲ್ಲಿ ಜೋಯಿಸರು ಪಂಕಜ ಶರೋಜಿನಿ ಸಖಿ ಎಂದು ಬರೆದುಬಿಡುತ್ತಾರೆ. ಹತ್ತು ರೂಪಾಯಿ ಎಂಟಾಣೆ ಬದಲಿಗೆ ಹತ್ತು ರೂಪಾಯಿ ಎಣ್ಣೆ ಎಂದು ಬರೆದು ಆಡಿಟರ್‌ಗಳನ್ನು ಗೊಂದಲಕ್ಕೆ ಸಿಲುಕಿಸುತ್ತಾನೆ ನಂಜ. ಪ್ರಾಸಪ್ರಿಯ ನಾಣಿ ಎಲ್ಲೆಂದರಲ್ಲಿ ಉದುರಿಸುವ ಚಾಟೋಕ್ತಿಗಳು ಕೂಡಾ ಸ್ವಾರಸ್ಯವಾಗಿವೆ. ಯಾರಿಗೋ ಮುಂಜಿ ಎಂದಾಗ ನಾಣಿ ಹೇಳುತ್ತಾನೆ: ‘ಅವನ್ಗೆ ಯಾಕೆ ಮುಂಜಿ, ಕುಡಿಯೋಕೆ ಇಲ್ಲ ಗಂಜಿ, ನೂಲ್ಲಿ ಹತ್ತಿ ಹಿಂಜಿ, ಸಿಗುತ್ತೆ ಅನ್ನದ ಗಂಜಿ’. ಇದು ಒಂದು ಉದಾಹರಣೆ. ಶಾಲು ಸಾಬಿ, ಹರಿಶ್ಚಂದ್ರ ನಾಟಕ ಇವುಗಳ ಪ್ರಸಂಗ ಮರೆಯುವ ಹಾಗೇ ಇಲ್ಲ. ಜೋಡಿದಾರ್ರು, ಸೀನಪ್ಪ ಮುಂತಾದವರು ಊರಲ್ಲಿ ಬಡ ಜನರ ಶವ ಸಂಸ್ಕಾರಕ್ಕೆ ಒಂದು ದಾರಿ ಮಾಡಿದ್ದು, ತಾವೇ ಅನೇಕ ಸಂದರ್ಭಗಳಲ್ಲಿ ಅಂತ್ಯ ಸಂಸ್ಕಾರಕ್ಕೆ ಸಂಬಂಧಿಸಿದ ಕ್ರಿಯೆಗಳನ್ನು ನಡೆಸಲು ಮುಂದಾದದ್ದು, ಪುರೋಹಿತರ ಹುಳಿಯನ್ನದಾಸೆಯ ಬಗ್ಗೆ ಸೀನಪ್ಪ ಸೇಡು ತೀರಿಸಿಕೊಂಡ ಪ್ರಸಂಗ, ದಾಸಯ್ಯಗಳಿಗೆ ನಕಲಿ ವಸ್ತುಗಳಿಂದ ಮಣೇವು ಹಾಕಿ ಅವರ ಸೊಕ್ಕು ಮುರಿದದ್ದು, ಊರಿಗೆ ಬರುವ ಬಸ್ಸು ಮತ್ತದರ ಡ್ರೈವರ್, ಇಂತಹ ಅನೇಕ ಘಟನೆಗಳ ಬಗ್ಗೆ ಗೊರೂರರಷ್ಟೇ ಅತ್ಯಂತ ಸ್ವಾರಸ್ಯವಾಗಿ ಬರೆಯಬಲ್ಲರು.

ಹಳ್ಳಿಗೆ ನಾಗರಿಕ ಸಮಾಜದ ಪರಿಚಯವಾಗುವ ಸಂದರ್ಭಗಳನ್ನೂ ಜೋಡಿದಾರರ ಮಕ್ಕಳು, ಸೊಸೆ, ಗುಂಡ ಇವರ ಮೂಲಕ ಸ್ವಾರಸ್ಯಕರವಾಗಿ ಚಿತ್ರಿಸುತ್ತಾರೆ. ಪುಟಪುಟಗಳಲ್ಲೂ ಸ್ವಾರಸ್ಯ, ನಗೆ, ಜೀವನಪ್ರೀತಿ ತುಂಬಿದ ಘಟನೆಗಳ ವರ್ಣನೆ ಈ ಕೃತಿಯಲ್ಲಿ ತುಂಬಿದೆ. ಬಾಲ್ಯದಲ್ಲಿ ಅಥವಾ ಬೇರೆ ಹಂತದಲ್ಲಿ ಹಳ್ಳಿಯ ಜೀವನ ಕಂಡ ನನ್ನಂಥವರಿಗಂತೂ ಎಂದಿಗೂ ಪ್ರಿಯವಾಗುವ ಕೃತಿ. ಕಳೆದ ದಶಕಗಳ ಹಳ್ಳಿಯ ಜೀವನ ಕಾಣದವರಿಗೆ ಅದನ್ನು ಅಣುಅಣುವಾಗಿ ಮನನ ಮಾಡಿಕೊಡಬಲ್ಲ ಸಾರ್ಥಕ ಕೃತಿ ಇದು.

ದೇಜಗೌ ಲೇಖನವೊಂದರಲ್ಲಿ ಗೊರೂರರ ಬರಹಗಳ ಬಗ್ಗೆ ಹೀಗೆ ಹೇಳುತ್ತಾರೆ. “ವಿವಿಧ ಜಾತಿಯ ಜನರನ್ನು ವರ್ಣಿಸುವಾಗ ಅವರಲ್ಲಿ ಅಂದಾಭಿಮಾನಕ್ಕಾಗಲಿ, ಪೂರ್ವಗ್ರಹಕ್ಕಾಗಲಿ ಎಳ್ಳಷ್ಟು ಎಡೆ ಇಲ್ಲ. ಒಳ್ಳೆಯದನ್ನು ಕಾಣುವ ಹಿರಿತನ ಮತ್ತು ಸಜ್ಜನಿಕೆ ಅವರ ಸ್ವಭಾವವಾಗಿದೆ. ಅವರ ಯಾವ ಕೃತಿಯಲ್ಲಾದರೂ ಸರಿಯೇ, ಎಲ್ಲಿಯಾದರೂ ಸರಿಯೇ, ಗುಲ್ಲು ಗೊಂದಲಗಳಾಗಲಿ, ವೇಗ ರಭಸಗಳಾಗಲಿ, ಗುಡುಗು ಸಿಡಿಲುಗಳಾಗಲಿ ಇಲ್ಲ. ಯಾರನ್ನಾದರೂ ವಶಪಡಿಸಿ ಕೊಳ್ಳುವಂತಹ ಸುಕೋಮಲವಾದ ಕಾಂತ ಗುಣ ಸರ್ವತ್ರ ಪರಿಮಳಸುತ್ತದೆ.”

***

ಅಲ್ಲಿ ಇಲ್ಲಿ ಕಾಣುವ ಕೇಳುವ ಕುಹೂ ಕುಹೂ

(ತರುಣ ಸ್ತಾವತ್ ತರುಣೀಸಕ್ತಃ)

– ಟಿ.ಎಸ್. ಶ್ರವಣಕುಮಾರಿ

(ಹಿಂದಿನ ಸಂಚಿಕೆಯಿಂದ: ಹೀಗೆಯೇ ಸಂಜೆಯೂ ಕಳೆದು ರಾತ್ರಿ ಪಾಳಿಯ ಆಯಾ ಬಂದವಳು "ನೀವಿನ್ನೂ ಇಲ್ಲೇ ಇದೀರಾ?" ಎಂದಾಗ ಅವಳ ಪ್ರಶ್ನೆಯ ಅರ್ಥವೇನು ಎಂದು ಯೋಚಿಸತೊಡಗಿದೆ – 'ಇನ್ನೂ ಬದುಕಿದ್ದು ಈ ಭೂಮಿ ಮೇಲೇ ಇದ್ದೀರಾ ಎಂದೋ ಅಥವಾ ವಾರ್ಡಿಗೋ ಮನೆಗೋ ಹೋಗಲಿಲ್ಲವಾ' ಎಂತಲೋ??)

*

ನಾನು ಸೇತುವೆಯ ಈ ಬದಿಯಲ್ಲಿದ್ದೇನೆ. ಮನೆ ಆ ಬದಿಯಲ್ಲಿದೆ. ನಡುವಿನ ಸಂಕ ಸಪೂರವಾಗಿ, ಅಲ್ಲಲ್ಲಿ ಮುರಿದು ಬಿಗಿದಿರುವ ಹಗ್ಗ ಸಡಿಲವಾಗಿದೆ. ವೈದ್ಯರು ಎಷ್ಟೇ ರೀತಿಯ ಬೆಂಬಲ ನೀಡಿ ಎಚ್ಚರಿಕೆಯಿಂದ ನನ್ನನ್ನು ಆ ದಡಕ್ಕೆ ಒಯ್ಯಲು ಯತ್ನಿಸುತ್ತಿದ್ದರೂ ನನ್ನ ದೇಹ ಸಂಪೂರ್ಣವಾಗಿ ಸಹಕರಿಸುತ್ತಿಲ್ಲ. ಶ್ವಾಸಕೋಶ, ಹೃದಯ, ಮೂತ್ರಪಿಂಡ ಎಲ್ಲವಕ್ಕೂ ಅದೇನು ಕೋಪವೋ, ಒಂದನ್ನು ತಣಿಸುವ ಹೊತ್ತಿಗೆ ಇನ್ನೊಂದು ಮುನಿಸಿಕೊಂಡು ಮುಷ್ಕರ ಹೂಡುತ್ತಿರುತ್ತದೆ. ಒಂದು ಮಟ್ಟಕ್ಕೆ ಎಲ್ಲವನ್ನೂ ಸುಧಾರಿಸಿ ಹೇಗೋ ನಾನು ಒಂದೊಂದು ಹೆಜ್ಜೆಯಿಡುವಾಗಲೂ ಯಮಕಿಂಕರರ ಅಪಹಾಸ್ಯದ ನಗೆ ಕೇಳುತ್ತದೆ. ಅತ್ತಕಡೆಯ ದಡದಲ್ಲಿ ನಿಂತು ನೋಡುತ್ತಿರುವ ಗಂಡ-ಮಕ್ಕಳ ಕಣ್ಣಲ್ಲಿ ನನ್ನನ್ನು ಕರೆದುಕೊಳ್ಳುವ ತುಡಿತ, ಕಳೆದುಕೊಳ್ಳುವ ಶಂಕೆ ಎರಡೂ ಕಾಣುತ್ತಿರುತ್ತದೆ. ದಾಟುತ್ತೀನೋ ಇಲ್ಲಾ ನದಿಯಲ್ಲಿ ಮುಳುಗುತ್ತೇನೋ... ನೋಡಬೇಕು.

ಹೀಗೇ ಏನೋ ಅಲೋಚನೆಯಲ್ಲಿ ಮುಳುಗಿರುವಾಗ ಒಳಬಂದ ಡ್ಯೂಟಿ ಡಾಕ್ಟರು ಎಲ್ಲಾ ಬೆಡ್ಡುಗಳ ಕೇಸ್ ಹಿಸ್ಟರಿಯನ್ನೂ, ವಿಶೇಷ ಸೂಚನೆಗಳನ್ನು ಗಮನಿಸುತ್ತಾ ಹೋದಳು. ನಿನ್ನೆ ಬೆಳಗಿನ ಪಾಳಿಗೆ ಬಂದಿದ್ದವಳಿಗೆ ಇಂದು ನೈಟ್ ಡ್ಯೂಟಿ. ಸಿಸ್ಟರ್‌ಗಳು, ಆಯಾಗಳ ಮೇಲೊಂದಿಷ್ಟು ಆವಾಜ಼್ ಹಾಕಿ ಆ ಹಜಾರದಲ್ಲೊಂದು ಕರ್ಫ್ಯೂ ವಾತಾವರಣವನ್ನು ನಿರ್ಮಿಸಿ, ನಂತರ ದಣಿವಾರಿಸಿಕೊಳ್ಳಲು ಪಕ್ಕದ ಖಾಲಿ ಬೆಡ್ಡಿನ ಮೇಲೆ ಕುಳಿತಳು. ಅಷ್ಟರಲ್ಲಿ ಅವಳ ಮೊಬೈಲ್ "ಕುಹು ಕುಹೂ ಕೋಗಿಲೆ..." ಎಂದು ಹಾಡಿತು. ಅಷ್ಟು ಹೊತ್ತೂ ಖಾರವಾದ ಹುಣಿಸೆ ತೊಕ್ಕನ್ನು ನಾಲಿಗೆಗೆ ತಿಕ್ಕಿಕೊಂಡಂತೆ ಚುರುಗುಡುತ್ತಿದ್ದ ಅವಳ ನಾಲಿಗೆಯ ಮೇಲೆ ಈಗ ಐಸ್‌ಕ್ರೀಂ ಜಿನುಗುತ್ತಿತ್ತು. "ಮೆಲುದನಿ, ಮೆಲುನಗೆ, ಮಧ್ಯೆಮಧ್ಯೆ ಸಮ್ಮತಿ. ಅಬ್ಬಾ! ಜೇನಿನ ಮಳೆ ಸುರಿಯುತ್ತಿತ್ತು; ಹಾಲಿನ ಹೊಳೆ ಹರಿಯುತ್ತಿತ್ತು. ಮುಖವೂ ಅರಣರಾಗದಿಂದ ತುಂಬಿತ್ತೇನೋ... ತೆರೆಯಿದ್ದುದರಿಂದ ಕಾಣಲಿಲ್ಲ. ಎಷ್ಟೇ ಸಣ್ಣದನಿಯಲ್ಲಿ ಮಾತನಾಡಿದರೂ, ಹತ್ತಿರದಲ್ಲಿ ಇದ್ದುದರಿಂದ ಕ್ಷೀಣವಾಗಿಯಾದರೂ ಕೇಳುತ್ತಿತ್ತು. ಮೂಲೆಯ ಬೆಡ್ಡಿನ ಪೇಶೆಂಟ್ ದಾದಿಯೊಂದಿಗೆ ವಾಗ್ವಾದಕ್ಕಿಳಿದಿದ್ದರಿಂದ ಪ್ರೇಮಲೋಕದಲ್ಲಿ ತೇಲುತ್ತಿದ್ದವಳು ಸಂಭಾಷಣೆಯನ್ನು ಮುಕ್ತಾಯ ಮಾಡಲೇಬೇಕಾಯಿತು. ಅಷ್ಟರಲ್ಲೂ "ಬರ್ತೀನೋ, ಇಲ್ಲೇನೋ ರಗಳೆ ಶುರುವಾಯ್ತು. ಸಧ್ಯ ಇವತ್ತು ನೈಟ್ ಡ್ಯೂಟಿ ಮುಗಿಯತ್ತೆ. ನಾಳೆ ಸಂಜೆ ಫ್ರೀಯಾಗಿರ್ತೀನಿ. ಕೋರಮಂಗಲದಲ್ಲಿರೋ ಬಾರ್ಬಿಕ್ಯೂಗೆ ಹೋಗೋಣ. ಮೊದ್ಲೇ ಸೀಟ್ ಬುಕ್ ಮಾಡ್ಕೋಬೇಕು; ಇಲ್ಲದ್ರೆ ಜಾಗ ಸಿಕ್ಕಲ್ಲ. ಶನಿವಾರ ಬೇರೆ. ಆಮೇಲೆ ನೈಟ್ ಶೋಗೆ ಹೋಗೋಣ. ಲೆಟಸ್ ಹ್ಯಾವ್ ಫುಲ್ ಫನ್ ಟುಮಾರೋ. ಈಗ ಸಧ್ಯಕ್ಕೆ ಬಾ_.ಯ್!" ಎಂದ ನಂತರ ಹಿಂದೆಯೇ ಕೇಳಿದ್ದು ಅವಳು ಮುತ್ತನ್ನಿಟ್ಟ ಸದ್ದೇ!!". ನರಳಿಕೆಗಳ ನಡುವೆ ಒಂದು ಡ್ಯುಯೆಟ್ ಕೇಳಿದ ಹಾಗಾಗಿ ಮನವೊಂದಿಷ್ಟು ತಂಪಾಯಿತು. ತಕ್ಷಣವೇ ಅವಳ ಧ್ವನಿ ಬದಲಾಯಿತು "ಏನು ವೀಣಾ, ಏನಲ್ಲಿ ಗಲಾಟೆ" ಎನ್ನುತ್ತಾ ಅತ್ತ ಹೊರಟಳು.. ಸ್ವಲ್ಪ ಹೊತ್ತಿನಲ್ಲೇ ವೀಣಾಳಿಗೆ ಕ್ಲಾಸ್ ತೆಗೆದುಕೊಳ್ಳುತ್ತಿದ್ದದ್ದು, ಅದಕ್ಕವಳ ಸಮಝಾಯಿಷಿ, ಮೇಟ್ರನ್ ಸುಧಾಕರನ ಕೋಪದ ಮಾತುಗಳು ಕೇಳತೊಡಗಿತು...

ಅಂದು ಸಂಜೆ ಮೂತ್ರದ ಚೀಲವನ್ನು ಬದಲಾಯಿಸುವಾಗ ಕೈತಪ್ಪಿ ಬೆಡ್‌ಶೀಟಿನ ಮೇಲೊಂದಿಷ್ಟು ತುಳುಕಿತ್ತು. ತಕ್ಷಣವೇ ಆಯಾಗೆ ಬೆಡ್‌ಶೀಟ್ ಬದಲಾಯಿಸಿಕೊಡಲು ಹೇಳಿದಾಗ ಅವಳು "ನನ್ನ ಡ್ಯೂಟಿ ಟೈಂ ಮುಗೀತು. ಇನ್ನೇನು ನೈಟ್‌ನವ್ಳು ಬರ್ತಾಳೆ. ಅವಳತ್ರೇಳಿ; ಮಾಡ್ಕೊಡ್ತಾಳೆ" ಅನ್ನುತ್ತಾ ಹೊರಟೇ ಹೋಗಿದ್ದಳು. ಈಗ ನೈಟ್‌ಡ್ಯೂಟಿಯ ಆಯಾನನ್ನು ಕಂಡ ತಕ್ಷಣ ಕರೆದು ಹೇಳಿದರೆ ಅವಳೇಕೆ ಸುಲಭಕ್ಕೆ ಒಪ್ಪಿಕೊಳ್ಳಬೇಕು?! "ಅವ್ಳಿನ್ನೂ ಇಲ್ಲೇ ಇದ್ಲಲ್ವಾ. ಮಾಡ್ಹೋಗಕ್ಕೆ ಏನು ಧಾಡಿ? ಚಿಕ್ಕೋಳೂಂತ ಎಲ್ಲಾನೂ ನನ್ನ ತಲೆಗೆ ಕಟ್ಟಕ್ಕೇ ನೋಡ್ತಿರ್ತಾಳೆ. ಆಮೇಲ್ಬರ್ತೀನಿ" ಎಂದಳು. "ಹೋಗ್ಲಿ ಬಿಡಮ್ಮ; ನಾನು ಡಾಕ್ಟನ್ನ ಕರೆದು ಹೇಳ್ತೀನಿ. ಯಾರ್‌ಕೈಲಾದ್ರೂ ಮಾಡಿಸ್ಲಿ. ನಂಗೆ ಹಿಂಸೆಯಾಗ್ತಿದೆ" ಅಂದೆ. ತಕ್ಷಣವೇ ಬೆದರಿ "ಸ್ವಲ್ಪಿರಿ, ಬೆಡ್‌ಶೀಟ್ ತರ್ತೀನಿ" ಎಂದು ಹಾಸುವ, ಹೊದೆಯುವ ಎರಡು ಬೆಡ್‌ಶೀಟುಗಳನ್ನೂ ತಂದಳು, ಅವಳ ಹಿಂದೆಯೇ ಬಂದ ವಾರ್ಡ್‌ಬಾಯ್ ಮಹೇಶ, "ನೀನಿಲ್ಲಿದೀಯಾ ಮಮ್ತಾ, ಬಂದವ್ನು ಎಲ್ಹೋದ್ಲಪ್ಪಾಂತ ನಾನು ಎಲ್ಲಾಕಡೆ ಹುಡುಕಾಡ್ಕೊಂಡ್ಬಂದಿ. ಈಗ್ಯಾಕೆ ಸೇಂಜ್ ಮಾಡ್ತಿದಿ. ಬೆಳ್ಗಾನ ಮಾಡಾದಲ್ವಾ" ಎಂದು ಕೇಳಿದ್ದಕ್ಕೆ ಮಮತಾ ಪೂರಾ ಕತೆ ಹೇಳಿ 'ನಂಗಿನ್ನೂ ಅಷ್ಟು ಕೆಲ್ಸದೆ, ಇಷ್ಟು ಜನ ಕರೀತಿದಾರೆ' ಎಂದೆಲ್ಲಾ ಅವನಲ್ಲಿ ದುಃಖವನ್ನು ತೋಡಿಕೊಂಡು, "ನಿಂತ್ಕಂಡು ಮಾತಾಡೋ ಬದ್ಲು ಸೊಲ್ಪ ನಂಗೆಲ್ಪ್ ಮಾಡ್ಬಾ" ಎಂದವನನ್ನು ಕರೆದಳು. "ನೀ ಕರುದ್ರೆ ಬರಲ್ಲಾಂತೀನಾ ಮಮ್ತೂ. ನಿಂಗೋಸ್ರ ಏನು ಬೇಕಾದ್ರೂ ಮಾಡ್ತೀನಿ" ಎಂದು ಥೇಟ್ ರಾಜ್‌ಕುಮಾರ್ ತರಹ ಅವಳ ಕಣ್ಣೊಳಗೆ ಕಣ್ಣಿಟ್ಟು. ಡೈಲಾಗ್ ಹೊಡೆದು ಕೈಜೋಡಿಸಿದ. "ನಿಂಗೇಂತ ಪಕೋಡ ಕಟ್ಟಿಸ್ಕೊಂಡ್ಬಂದಿವ್ನಿ ಆಮೇಲೆ ಸಿಕ್ಕು" ಎಂದ. "ಔದಾ" ಎಂದವಳು ನಾಚಿಕೊಂಡು ಹೇಳುತ್ತಿರುವಾಗಲೇ ಸ್ನೇಹ ಸಿಸ್ಟರ್, "ಮಮತಾ ಎಲ್ಲಿದೀ. ಇಲ್ಲಿ ಎಂಟನೇ ನಂಬರ್ ಬೆಡ್ಡಿಗೆ ಬೆಡ್‌ಪ್ಯಾನ್ ಕೊಡ್ಬೇಕು ಬಾ" ಎಂದು ಇಡೀ ಹಜಾರಕ್ಕೇ ಅವನ ಶೌಚ ಪ್ರಕರಣ ಕೇಳುವಂತೆ ಕೂಗಿದಳು. "ಆಮೇಲ್ ಸಿಕ್ತೀನಿ ಮಹೇಸು" ಎನ್ನುತ್ತಾ ಅವಳು ಓಡಿದಳು. ಮಹೇಶ ಅವಳು ಹೋಗುತ್ತಿದ್ದ ದಿಕ್ಕನ್ನೇ ನೋಡುತ್ತಾ ನಿಂತಿದ್ದು ನಂತರ ಹೊರಟ. "ಕೋಗಿಲೆ ಹಾಡಿದೆ ಕೇಳಿದೆಯಾ, ಹೊಸರಾಗವ ಹಾಡಿದೆ ಆಲಿಸೆಯಾ" ಎನ್ನುವ ಅಣ್ಣಾವ್ರ ಹಾಡು ನೆನಪಾಗಿ ಒಂದಿಷ್ಟು ಖುಷಿಯಾಗಿ ಅದು ನನ್ನ ಮುಖದಲ್ಲೂ ಹರಡಿಕೊಂಡಿತೇನೋ...

ವೀಣಾ ಸಿಸ್ಟರ್ ಕೇಸ್ ಶೀಟಿನಲ್ಲಿ ಬರೆಯುತ್ತಾ, "ಏನು? ಏನು ನೆನಪಿಸಿಕೊಂಡ್ರಿ, ಖುಷಿಯಾಗಿದೀರಿ" ಎಂದಳು. ಡಾಕ್ಟು ಬೈದಿದ್ದಕ್ಕೆ ಅತ್ತಿದ್ದಳೇನೋ; ಕಣ್ಣು ಕೆಂಪಾಗಿತ್ತು. "ಏನಿಲ್ಲಾ... ಹೀಗೇ..." ಎಂದು ಮಾತು ತೇಲಿಸಿದೆ. ಬರೆಯುವುದನ್ನು ಮುಗಿಸಿ ಅವಳು ಡ್ರಿಪ್ ಬದಲಾಯಿಸಿ ಅದಕ್ಕೆ ಇಂಜೆಕ್ಷನ್ ಚುಚ್ಚುತ್ತಿರುವಾಗ "ಏನು ನಿಂಗೂ ಡಾಕ್ಟ್ರಿಗೂ ಹತ್ತಿಕೊಂಡ ಹಾಗಿತ್ತು?" ಕೇಳಿದೆ. "ಅದಾ... ಅದಿದ್ದಿದ್ದೆ. ಆ ಮೂಲೆ ಪೇಶೆಂಟ್‌ಗೆ ನಿದ್ರೆ ಬರಲ್ವಂತೆ. ನಿದ್ದೆ ಬರಕ್ಕೆ ಇಂಜೆಕ್ಷನ್ ಕೊಡಿ ಅಂತ ಒಂದೇ ಗಲಾಟೆ. ಡಾಕ್ಟ್ರು ಏನೇ ಆದ್ರೂ ಬರ್ದಿರೋ ಮಾತ್ರೆ ಬಿಟ್ಟು ಇನ್ನೇನನ್ನೂ ಕೊಡಕೂಡ್ದು ಅಂತ ಸ್ಟ್ರಿಕ್ಟ್ ಆಗಿ ಹೇಳಿ ಹೋಗಿದಾರೆ. ಅದನ್ನೇ ಅವ್ರಿಗೆ ಹೇಳಿದ್ರೆ 'ಈಗ್ಲೇ ಡಾಕ್ಟ್ರಿಗೆ ಫೋನ್ ಮಾಡಿ ನಂಕೊಡಿ; ನಾನ್‌ಮಾತಾಡ್ತೀನಿ' ಅಂತ ಧಮಕಿ. 'ಹಾಗೆಲ್ಲಾ ಸುಮ್ಸುಮ್ನೆ ಇಷ್ಟೊತ್ತಲ್ಲಿ ಮಾಡಕ್ಕಾಗಲ್ಲ' ಅಂದಿದ್ದಕ್ಕೆ ಆಯಪ್ಪ ಕೂಗಕ್ಕೇ ಶುರುಮಾಡ್ತು. ಈ ಡಾಕ್ಟ್ರು ಬಂದು ಆಯಪ್ಪನ ಮುಂದೇನೇ "ನೀನು ಒರಟಾಗಿ ಮಾತಾಡ್ತಿ. ಬಿಹೇವ್ ಯುವರ್‌ಸೆಲ್ಫ್" ಅಂತ ನಂಗೇ ಕ್ಲಾಸ್ ತೊಗೊಂಡ್ರು" ಎನ್ನುತ್ತಿರುವಾಗ ಮತ್ತೊಮ್ಮೆ ಅವಳ ಕಣ್ಣಲ್ಲಿ ನೀರು ತುಂಬಿತು. ಅಲ್ಲೇ ಹಾದು ಹೋಗುತ್ತಿದ್ದ ಮೇಟ್ರನ್ ಸುಧಾಕರ ಒಳಬಂದು. "ವೀಣಾ ಡಿಯರ್ ಎಷ್ಟು ಸಲ ಹೇಳಿದೀನಿ ನಿಂಗೆ. ಇದನ್ನೆಲ್ಲಾ ತುಂಬಾ ಮನಸ್ಸಿಗೆ ಹಚ್ಕೋಬಾರ್ದೂಂತ. ನಾನು ನಿನ್ ಎದ್ರಿಗೆ ಕ್ಲಾಸ್ ತೊಗೊಳ್ಳಲ್ವಾ ಅವ್ರಿಗೆ. 'ನೀವು ಪೇಶೆಂಟ್ ಮುಂದೆ ಹಿಂಗೆಲ್ಲಾ ಅವಮಾನ ಮಾಡ್ಬಾರ್ದು' ಅಂತ. ಇನ್ನೊಂದ್ಸಲ ಇದು ರಿಪೀಟ್ ಆದ್ರೆ ಅಡ್ಮಿನಿಸ್ಟ್ರೇಟರ್‌ಗೆ ಲೆಟರ್ ಕೊಡೋಣ. ವೀಣಾ ಡಿಯರ್, ಡೋಂಟ್ ಕ್ರೈ, ಕಂ ಹಿಯರ್" ಎನ್ನುತ್ತಾ ಅವಳನ್ನೊಂದು ಘಳಿಗೆ ತಬ್ಬಿ ಬೆನ್ನು ಸವರಿ, ಕೆನ್ನೆ ಸವರಿ

ಸಂತೈಸಿದ. ನಾನೋ ಒಂದು ಘಳಿಗೆ ಬಿಟ್ಟಕಣ್ಣು ಬಿಟ್ಟುಕೊಂಡು ಪ್ರಣಯಪಕ್ಷಿಗಳ ಟುವ್ವಿ ಟುವ್ವಿ ಕೇಳುತ್ತಾ ಬೆರಗಾಗಿದ್ದೆ... ನಂತರ 'ಏನಾದರೂ ಮಾಡಿಕೊಳ್ಳಲಿ ಬಿಡು' ಎಂದು ಕಣ್ಣು ಮುಚ್ಚಿಕೊಂಡುಬಿಟ್ಟೆ.

"ಬಾಲ ಸ್ತಾವತ್ ಕ್ರೀಡಾಸಕ್ತಃ ತರುಣ ಸ್ತಾವತ್ ತರುಣೀ ಸಕ್ತಃ । ವೃದ್ಧ ಸ್ತಾವತ್-ಚಿಂತಾಮಗ್ನಃ ಪರಮೇ ಬ್ರಹ್ಮಣಿ ಕೋಽಪಿ ನ ಲಗ್ನಃ". ಯಾವ ಪರಿಸರದಲ್ಲಾದರೂ ಇರಲಿ; ಆಯಾ ವಯಸ್ಸಿನಲ್ಲಿ ಅದದೇ ಆಕರ್ಷಣೆ. ಆ ಆಕರ್ಷಣೆಯೇ ಜೀವನ. ಇಲ್ಲದಿದ್ದರೆ ಜಗತ್ತು ಮುಂದುವರೆಯುವುದಾದರೂ ಹೇಗೆ? ಭಗವಂತನಲ್ಲಿ ಮನಸ್ಸು ನೆಡುವುದು ಮೋಹದಲ್ಲಿ ಬೀಳುವಷ್ಟು ಸುಲಭವೇ! ಎಂಥೆಂತಾ ಋಷಿಮುನಿಗಳೂ ಗೆದ್ದವರಿಲ್ಲ ಈ ಮಾಯಾಮೋಹದ ಆಕರ್ಷಣೆಯನ್ನು; ಇನ್ನು ನಮ್ಮಂತ, ಸುತ್ತಮುತ್ತ ಕಾಣುವಂತ ಸಾಮಾನ್ಯರು?! ಸದಾ ಆಸ್ಪತ್ರೆಯಲ್ಲಿರುತ್ತಾರೆಂದು ವೈರಾಗ್ಯ ಬರಲು ಸಾಧ್ಯವೇ? ಮನೆಯಾದರೂ, ಆಸ್ಪತ್ರೆಯಾದರೂ, ಪಾರ್ಕಾದರೂ, ಕಡೆಗೆ ದೇಗುಲವೇ ಆದರೂ... ಇದೇ ಅಲ್ಲವೇ ಜೀವನ?!

***





1. ಸಣ್ಣ ಕತೆಗಳ ಶ್ರಾವಣಕ್ಕೆ ಭಾದ್ರಪದದಲ್ಲಿ ಕತೆ ಬರೆಯಲು ಶುರು ಮಾಡಿರುವ ಗಣಪ
2. ಮಹಾಲಯ ಅಮಾವಾಸ್ಯೆಯ ಒಳಗೇ ಕತೆ ಕಳಿಸಲೇ ಎಂದು ಸಂಚಾಲಕರನ್ನು ಕೇಳುತ್ತಿರುವ ಗಣಪ

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಒಟ್ಟು 57 ಬರಹಗಾರರಿಂದ 158 ಸಣ್ಣ ಕತೆಗಳ ರಚನೆ
"ಸಣ್ಣ ಕತೆಗಳ ಶ್ರಾವಣ ಅಭಿಯಾನ"
ಅಭೂತಪೂರ್ವ ಯಶಸ್ಸು

– ಬೆಂ.ಶ್ರೀ. ರವೀಂದ್ರ

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಿಂದ ಈ ಹಿಂದೆ ಹಲವಾರು ಅಪರೂಪದ ಅಭಿಯಾನಗಳನ್ನು ನಡೆಸಿ ಅದರಲ್ಲಿ ಯಶಸ್ವಿಯಾಗಿರುವುದು ಸರ್ವವಿದಿತ. ಈ ಬಾರಿ ವೇದಿಕೆಯು ಶ್ರಾವಣ ಮಾಸದಲ್ಲಿ ಅಂದರೆ 17ನೆಯ ಆಗಸ್ಟ್‌ನಿಂದ 14ನೆಯ ಸೆಪ್ಟೆಂಬರ್ 2023ರವರೆಗಿನ ಒಂದು ಚಾಂದ್ರಮಾನ ತಿಂಗಳ ಕಾಲ 'ಸಣ್ಣ ಕತೆಗಳ ಶ್ರಾವಣ' ಎಂಬ ಅಭಿಯಾನವನ್ನು ನಡೆಸಿತು. ಈ ಅವಧಿಯಲ್ಲಿ ವೇದಿಕೆಯ ಸದಸ್ಯರಿಂದ ಕನಿಷ್ಠ 100 ಸ್ವರಚಿತ ಹೊಸ ಸಣ್ಣ ಕತೆಗಳನ್ನು ಆಹ್ವಾನಿಸುವ ಗುರಿಯನ್ನು ಹೊಂದಲಾಗಿತ್ತು. ಈ ಹಿಂದೆ ಎಲ್ಲೂ ಪ್ರಕಟವಾಗದ ಹಾಗೂ ಅನುವಾದಿತವಲ್ಲದ ಕತೆಗಳನ್ನು ಮಾತ್ರ ಬರೆದು ವೇದಿಕೆಯ ವಾಟ್ಸಾಪ್ ಗುಂಪಿನಲ್ಲಿ ಪ್ರಕಟಿಸಬೇಕೆಂದು ಸೂಚಿಸಲಾಗಿತ್ತು.

ಸಣ್ಣ ಕತೆಗಳ ಅಭಿಯಾನಕ್ಕೆ ಪೂರ್ವಭಾವಿಯಾಗಿ ದಿನಾಂಕ 13ನೆಯ ಆಗಸ್ಟ್ 2023ರಂದು ವೇದಿಕೆಯ ಸದಸ್ಯರಿಗಾಗಿ ಶ್ರೀ ಶಶಿಧರ ಹಾಲಾಡಿಯವರ ನಿರ್ದೇಶನದಲ್ಲಿ 'ಸಣ್ಣ ಕಥಾ ಶಿಬಿರ'ವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಮಾತನಾಡಿದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎನ್.ಎಸ್.ಶ್ರೀಧರಮೂರ್ತಿ, ಶ್ರೀ ವಾಸುದೇವ ನಾಡಿಗ್ ಹಾಗೂ ಶ್ರೀ ಸಂತೋಷಕುಮಾರ ಮೆಹಂದಳೆಯವರು, ಸಣ್ಣ ಕತೆಯ ರೂಪುರೇಷೆ, ವಸ್ತು ವೈವಿಧ್ಯತೆ, ಭಾಷೆ, ಶೈಲಿ, ಕನ್ನಡದ ಜನಪ್ರಿಯ ಸಣ್ಣ ಕತೆಗಳು ಮತ್ತು ಕತೆಗಾರರು, ಇತ್ಯಾದಿ ವಿಷಯಗಳನ್ನು ವಿಶ್ಲೇಷಿಸಿ, ವಿವರಿಸಿ, ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಆಗಸ್ಟ್ 17ರಂದು 'ಸಣ್ಣ ಕತೆಗಳ ಶ್ರಾವಣ' ಅಭಿಯಾನಕ್ಕೆ ಚಾಲನೆ ನೀಡುತ್ತಿದ್ದಂತೆಯೇ ನಮ್ಮ ಸದಸ್ಯರಿಂದ ಸಣ್ಣ ಕತೆಗಳು ಎಲ್ಲರ ನಿರೀಕ್ಷೆಯನ್ನೂ ಮೀರಿ ಪುಂಖಾನುಪುಂಖವಾಗಿ ವೇದಿಕೆಯಲ್ಲಿ ಪ್ರಕಟವಾಗಲು ಪ್ರಾರಂಭವಾಯಿತು. ಈಗಾಗಲೇ ಸಾಕಷ್ಟು ಕತೆಗಳನ್ನು ಬರೆದು ಕಥಾ ಸಂಕಲನಗಳನ್ನು ಹೊರತಂದಿರುವ ಹಾಗೂ ಹಲವು ಕತೆಗಳಿಗೆ ಬಹುಮಾನ, ಪ್ರಶಸ್ತಿಗಳನ್ನು ಪಡೆದಿರುವ ಸದಸ್ಯರು ಮಾತ್ರವಲ್ಲದೆ, ಈವರೆಗೆ ಒಂದು ಕತೆಯನ್ನೂ ಬರೆಯದ ಹಲವು ಬರಹಗಾರರೂ ಅಭಿಯಾನದಲ್ಲಿ ಪಾಲ್ಗೊಂಡು ತಮ್ಮ ಚೊಚ್ಚಲ ಕತೆಯನ್ನು ವೇದಿಕೆಯಲ್ಲಿ ಹಂಚಿಕೊಂಡಿದ್ದು ಅಭಿನಂದನೀಯ. ಸೆಪ್ಟೆಂಬರ್ 14ರಂದು ಸಂಪನ್ನವಾಗಬೇಕಿದ್ದ ಅಭಿಯಾನವನ್ನು ಮತ್ತೆ ಮೂರು ದಿನ ಮುಂದೂಡಿ, 17ನೆಯ ಸೆಪ್ಟೆಂಬರ್ 2023ರಂದು ಮುಕ್ತಾಯಗೊಳಿಸಲಾಯಿತು.

ಇಡೀ ಅಭಿಯಾನದುದ್ದಕ್ಕೂ, ಪ್ರಕಟವಾದ ಹಲವು ಕತೆಗಳ ಬಗ್ಗೆ ಅನೇಕ ಸದಸ್ಯರು ತಮ್ಮ ಮುಕ್ತ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಿದ್ದರಿಂದ ಕತೆಗಾರರಿಗೂ ಮತ್ತಷ್ಟು ಉತ್ತೇಜನ ದೊರೆತು, ಕೆಲವರು ಒಂದು ತಿಂಗಳ ಅವಧಿಯಲ್ಲಿ ಏಳು–ಎಂಟು ಕತೆಗಳನ್ನು ಬರೆದುದೂ ಹೆಮ್ಮೆಯ ಸಂಗತಿ. ಒಟ್ಟಾರೆಯಾಗಿ, ಈ ಅಭಿಯಾನದ ಅವಧಿಯಲ್ಲಿ 100 ಹೊಸ ಸಣ್ಣ ಕತೆಗಳನ್ನು ಬರೆಸುವ ನಮ್ಮ ಮಹತ್ವಾಕಾಂಕ್ಷೆಯ ಗುರಿಯನ್ನು ಮೀರಿ, ಒಟ್ಟು 57 ಕತೆಗಾರರಿಂದ 158 ಸಣ್ಣ ಕತೆಗಳು ಬೆಳಕು ಕಂಡಿದ್ದು, ಅಚ್ಚರಿಯ ಬೆಳವಣಿಗೆ.

‘ಸಣ್ಣ ಕತೆಗಳ ಶ್ರಾವಣ’ ಅಭಿಯಾನದ ಈ ಅಭೂತಪೂರ್ವ ಯಶಸ್ಸಿಗೆ ಕಾರಣಕರ್ತರಾದ ಎಲ್ಲ ಕತೆಗಾರರಿಗೂ, ಕತೆಗಳನ್ನು ಓದಿ ತಮ್ಮ ಮುಕ್ತ ಅಭಿಪ್ರಾಯಗಳನ್ನು ನೀಡಿದ ಎಲ್ಲ ಸದಸ್ಯರಿಗೂ ವೇದಿಕೆಯ ಪರವಾಗಿ ಅಭಿನಂದನೆಗಳು. ಅಭಿಯಾನದಲ್ಲಿ ಮೂಡಿಬಂದ ಕತೆಗಳನ್ನು ಪ್ರಕಟಿಸುವ ಬಗ್ಗೆ ವಿಚಾರ ವಿನಿಮಯ ನಡೆಸಲಾಗುತ್ತಿದ್ದು, ಸಂಚಾಲಕ ಸಮಿತಿಯ ನಿರ್ಧಾರವನ್ನು ಕ್ರಮೇಣ ತಿಳಿಸಲಾಗುವುದು.

‘ಸಣ್ಣ ಕತೆಗಳ ಶ್ರಾವಣ’ ಅಭಿಯಾನದಲ್ಲಿ ಕ್ರಮವಾಗಿ ಪಾಲ್ಗೊಂಡವರು ಮತ್ತು ಪ್ರಸ್ತುತಪಡಿಸಿದ ಕತೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಸಣ್ಣ ಕತೆಗಳ ಶ್ರಾವಣ – ಪ್ರಸ್ತುತಿಪಡಿಸಲಾದ ಕತೆಗಳು ಹಾಗೂ ಕತೆಗಾರರ ಹೆಸರುಗಳು

ಕತೆಗಾರರ ಕ್ರಮ ಸಂಖ್ಯೆ	ಸಣ್ಣ ಕತೆಗಾರರ ಹೆಸರು	ಸಣ್ಣ ಕತೆಯ ಶೀರ್ಷಿಕೆ	ಒಟ್ಟು ಕತೆಗಳ ಸಂಖ್ಯೆ
01	ಸಂತೋಷ್ ಕುಮಾರ್ ಮೆಹೆಂದಳೆ	1. ಮೌನ ಮುರಿದ ಸದ್ದು 2. ನ್ಯೂಟನ್ ಥೋರ್ತ್ ಲಾ	01 02
02	ಶ್ರವಣ ಕುಮಾರಿ ಟಿ.ಎಸ್.	1. ಯಾರು ಜೀವವೇ ಯಾರು ಬಂದವರು 2. ಅಮ್ಮಾ ನೀನ್ಯಾಕೆ ಮದುವೆ ಆಗ್ಬಾರದು? 3. ಗಾಜಿನಮನೆ.. ಮರದ ಕಿಟಕಿ ಬಾಗಿಲು 4. ನ್ಯಾಸ	03 04 05 06
03	ಟಿ.ಆರ್. ಉಷಾ ರಾಣಿ	1. ಸ್ವಲ್ಪ ಒಟಿಪಿ ಹೇಳ್ತೀರಾ 2. ವಿಷ್ಣು ಭವನದಿಂದ ಕದ್ದ ಲೋಟ 3. ಸುಳಿ	07 08 09
04	ಶಾಂತಿ ವಾಸು	1. ಮಿಂಚಿದ ಮೇಲೆ 2. ಮಿಂಚುವ ಮುನ್ನ 3. ಮಿಂಚು ನೆನಪಲ್ಲಿ	10 11 12
05	ಬಿ.ಎಸ್. ಶ್ರೀನಿವಾಸ್	1. ವಿಶ್ವವಾಣಿ 2. ಜ್ಞಾನೋದಯ 3. ಸಬಲೆ	13 14 15
06	ಧೀರೇಂದ್ರ	1. ಕರ್ಮ 2. ದೀಪದ ಬತ್ತಿ	16 17
07	ಗೋಪಿನಾಥ್	1. ಚಿಗುರಿದ ಕವಲುಗಳು 2. ನಿರ್ಣಯ 3. ಮಗಳು ಚಾಪಿ ಕೆಳಗ, ಅಪ್ಪ ರಂಗೋಲಿ ಕೆಳಗ 4. ಪಂಜಿನ ದಾಸಯ್ಯ 5. ಹೀಗೊಂದು ಮರದ ಬೀರು ಹೇಳದ ಕಥೆ 6. ಮೌನರಾಗ 7. ಮೋಡದ ಮರೆಯಲ್ಲೊಂದು ಕಿರಣ	18 19 20 21 22 23 24

ಕತೆಗಾರರ ಕ್ರಮ ಸಂಖ್ಯೆ	ಸಣ್ಣ ಕತೆಗಾರರ ಹೆಸರು	ಸಣ್ಣ ಕತೆಯ ಶೀರ್ಷಿಕೆ	ಒಟ್ಟು ಕತೆಗಳ ಸಂಖ್ಯೆ
08	ಜಿ.ವಿ. ನಿರ್ಮಲ	1. ಅರಳದ ಜೀವ	25
		2. ಯಾರ ಮಗ	26
		3. ಕತೆಗಳ ಕಥೆ	27
		4. ಎನ್ನ ಕಿವುಡನ ಮಾಡಯ್ಯ	28
		5. ಸೋಲು ಗೆಲುವು	29
		6. ರೂಪವತಿಯ ಅಳಲು	30
		7. ಯಶೋದಾ	31
		8. ಕಾರ್ಮುಗಿಲ ಮಡಿಲಲ್ಲಿ	32
09	ಎನ್. ಶಂಕರ ರಾವ್	1. ವೀರ ಬಾಲಕ	33
		2. ಮೂಕ ಸಾಕ್ಷಿ	34
		3. ಪೂರ್ವಿ ಕಲ್ಯಾಣಿ	35
		4. ಮೇದಿನಿ	36
		5. ಬಂಧನವಿಲ್ಲದ ಬಾಂಧವ್ಯ	37
		6. ವಾನಪ್ರಸ್ಥಾಶ್ರಮ	38
		7. ಕರ್ತವ್ಯ ನಿರ್ವಹಣೆ	39
		8. ನಂಬಿ ಕೆಟ್ಟವರಿಲ್ಲವೋ	40
10	ಕಮಲಾಕ್ಷಿ ಸಿ.ಆರ್.	1. ಕಾಲಚಕ್ರ	41
		2. ಜಾನಕಿ ಕಲ್ಯಾಣ	42
		3. ಸಮಾಧಿಯಾಗುವ ಮುನ್ನ	43
11	ಶಾಂತಾ ನಾಗಮಂಗಲ	1. ಸ್ಥಿತ್ಯಂತರ	44
		2. ನೀನೊಬ್ಬ ಉಳಿಯಬೇಕಿತ್ತು	45
		3. ಋಣ	46
12	ವಿಠ್ಠಲ್ ಇಜೇರಿ	1. ಮಿಲನ	47
		2. ಸಮಾಗಮ	48
		3. ಮರಳಿ ಗೂಡಿಗೆ	49
		4. ಪುನರ್ಮಿಲನ	50
		5. ಸರಹದ್ದಿನಲ್ಲಿಯ ಶವ	51
		6. ದೈವೀಚಿತ್ತ	52
		7. ಜೊತೆಯಾದ ಜೀವಗಳು	53
14	ಸರಸ್ವತಿ ನಟರಾಜ್	1. ಬದುಕು,ಬದುಕಲು ಬಿಡು	54
		2. ಶಿಕ್ಷೆ	55
		3. ನಷ್ಟಂ ವಸ್ತು ಲಭೇತ್ ದ್ರವಂ	56
15	ರಾಧಿಕಾ ವಿ. ಗುಜ್ಜಾರ್	1. ಎರಡನೆಯ ದಾರಿ	57
		2. ಅಂತೂ ನಿರಾಳರಾದರು	58
		3. ಸಚ್ಚಿದಾನಂದರು	59
		4. ಬಯಲ ಗಾಳಿ	60

ಕತೆಗಾರರ ಕ್ರಮ ಸಂಖ್ಯೆ	ಸಣ್ಣ ಕತೆಗಾರರ ಹೆಸರು	ಸಣ್ಣ ಕತೆಯ ಶೀರ್ಷಿಕೆ	ಒಟ್ಟು ಕತೆಗಳ ಸಂಖ್ಯೆ
15	ಮಾಧುರಿ ಕೃಷ್ಣ	1. ಜೀವಚ್ಛವ	61
		2. ಹಸ್ತಕ್ಷೇಪ	62
		3. ಹೇ ಮನುಷ್ಯನೇ ನೀನ್ಯಾಕೆ ಹೀಗೆ?	63
		4. ಹದಿನೇಳನೇ ಬಾರಿ.(ಮಗ) ದಯವಿಟ್ಟು ಕ್ಷಮಿಸು (ತಾಯಿ)	64
16	ನಾಗರತ್ನ ಚಂದ್ರಶೇಖರ್	1. ಕಾರ್ಮೋಡದಲ್ಲೊಂದು ಸೂರ್ಯ ಕಿರಣ	65
		2. ಸಾವಿನಲ್ಲೇ ಸುಖಿಸಿದ ಆಯೇಷಾ	66
		3. ಹಾರುತ ದೂರ ದೂರ	67
		4. ಋಣ ಸಂದಾಯ	68
		5. ಚಂದ್ರಯಾನ 4	69
17	ಎಲ್. ಗಿರಿಜಾ ರಾಜ್	1. ಕಲ್ಪತರು	70
		2. ಸ್ಪಂದನ	71
		3. ಗಂಗಾ	72
		4. ಸುನೇತ್ರ	73
		5. ನಾಯಿಬಾಲ	74
18	ಡಾ. ಜಯಂತಿ ಮನೋಹರ	1.. ಶ್ರಮಣಿಯಾದ ಶಬರಿ	75
19	ಗುರುರಾಜ ಶಾಸ್ತ್ರಿ	1. ವಿನಿಮಯ	76
		2. ಹೆಚ್ಚು ಹಣ ಹುಚ್ಚುಮನ	77
		3. ಅನುದಾನ	78
20	ಶೀಲಾ ಅರಕಲಗೂಡು	1. ಶ್ರಾವಣದ ಮೊದಲ ದಿನ	79
21	ರಂಗೋಪಂತ್ ನರಸಿಂಗ ರಾವ್	1. ಗುಡಿ	80
		2. ಕಾಶೀಯಾತ್ರೆ	81
		3. ಮಕ್ಕಳ ಮನಸು	82
22	ಪೋಲೇನಹಳ್ಳಿ ರಮೇಶ್ (ಪೋರ)	1. ಮಗ ಬಂದ	83
		2. ವಲಸೆ	84
		3. ಏಕೆ ಎಲ್ಲರಂತಲ್ಲ ನನ ಕಂದ	85
		4. ಅನಂತು	86
		5. ಮನೆ	87
		6. ಕೊಚ್ಚೊಯ್ಯುವ ಮಳೆ	88
23	ಸೀತಾರಾಂ ಕಟ್ಟಿ	1. ಸಂಗಾತಿ	89
		2. ತಾರಕ್ಕಿ	90
		3. ಅನರ್ಹ	91
24	ಬಿ.ಆರ್. ರವೀಂದ್ರನಾಥ್	1. ಮಗನ ಹುಟ್ಟಿದ ಹಬ್ಬ	92
		2. ಗುರುರಾಜನ ಆತ್ಮಹತ್ಯೆ	93
		3. ದಾರಿ ತೋರಿಸಯ್ಯಾ!	94

ಕತೆಗಾರರ ಕ್ರಮ ಸಂಖ್ಯೆ	ಸಣ್ಣ ಕತೆಗಾರರ ಹೆಸರು	ಸಣ್ಣ ಕತೆಯ ಶೀರ್ಷಿಕೆ	ಒಟ್ಟು ಕತೆಗಳ ಸಂಖ್ಯೆ
37	ಅರುಣ ಪ್ರಕಾಶ	1. ಕ್ಷಮಯಾ ಧರಿತ್ರಿ	129
38	ಶೀಲಾ ಭಂಡಾರ್ಕರ್	1. ಗೋದಾವರಿಯ ಆಳದಲ್ಲಿ	130
39	ಅಜ್ಮತ್ ಉಲ್ಲಾ ಷರೀಫ್	1. ದಿಕ್ಷಂಡಿ	131
40	ಎಂ.ಆರ್. ಆನಂದ್	1. ಗೆಲುವಿನ ಸೋಲು	132
		2. ಭುಜಂಗ ಶಯನೆ	133
		3. ತಿರುಕನ ಕನಸು	134
41	ರಘುರಾಂ ಎನ್.ವಿ.	1. ಕನಸಿನ ಹಾದಿಯಲ್ಲಿ	135
42	ಭ.ರಾ. ವಿಜಯಕುಮಾರ್	1. ನಿರುತ್ತರ	136
43	ಅನ್ನಪೂರ್ಣ ಸುಬ್ಬರಾವ್	1. ಕಾಲಾಯ ತಸ್ಮೈ ನಮಃ	137
		2. ಸುಮನ	138
44	ಜಯಂತಿ ಕೆ.ಎಸ್.	1. ಸಾಧನೆಯ ಹಾದಿಯಲ್ಲಿ	139
		2. ಅಪ್ಪನ ನೆನಪಲ್ಲಿ	140
		3. ಸಂಬಂಧದ ಗೆರೆ	141
45	ಪ್ರಮೋದಾ ಮೂರ್ತಿ	1. ಮಧುರಾಂತರಂಗ	142
46	ಪದ್ಮಾ ಆನಂದ್	1. ಬದಲಾದ ಬದುಕು	143
		2. ನಾಮಕರಣ	144
		3. ಹಾವು ಬಂತು ಹಾವು	145
47	ಜಿ.ವಿ. ಅರುಣ	1. ಎಲ್ಲ ಬಲ್ಲವಳು	146
		2. ಗಣಪ– ಸ್ಕಂದ	147
48	ಎಚ್. ಶ್ರೀಧರ ರಾವ್	1. ಗಾಡಿ ಸಿದ್ಧ	148
49	ಜಗದೀಶ್ ಭಟ್	1. ವ್ಯಾಪ್ತಿ	149
50	ಎಂ.ಎಸ್.ನರಸಿಂಹ ಮೂರ್ತಿ	1. ಎತ್ತಣಿಂದೆತ್ತ ಸಂಬಂಧವಯ್ಯಾ	150
51	ಶಶಿಧರ ಹಾಲಾಡಿ	1. ಕಾಡಿನಲ್ಲಿ ಕ್ಲಿಕ್ಕಿಸಿದ ಫೋಟೋ	151
52	ಶೃಂಗೇಶ್ವರ ಶರ್ಮ ಎಸ್	1. ಶಕುನ್ ಪಾಟ್ಲುಪ್	152
53	ಅನಿತಾ ಪೈ	1. ಪಶ್ಚಾತ್ತಾಪ	153
54	ಡಾ. ಗೋವಿಂದ ಹೆಗಡೆ	1. ಆವರ್ತ	154
55	ಗೌರಿ ಭಟ್ಟ	1. ಭಾಗ್ಯ	155
56	ರಾಜನ್	1. ಪರಿಭ್ರಮಣ	156
		2. ಜಟಿಲ	157
57	ಗೋನವಾರ ಕಿಶನ್ ರಾವ್	1. ಪೋಸ್ಟ್ ಮ್ಯಾನ್ ಮಾದಯ್ಯ	158

***

ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 216 – 26.08.2023

ಅಧ್ಯಕ್ಷರ ಅನಿಸಿಕೆಗಳು



– ಮಹಾಬಲ ಕೆ.ಎನ್.

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಗೆ ಪ್ರಾತಃಸ್ಮರಣೀಯರಾದ ಪ್ರಾ.ಎಚ್ಚೆಸ್ಕೆಯವರ ಜನ್ಮದಿನದ ಸವಿ ಸ್ಮರಣೆಯಲ್ಲಿ ನಡೆಯುತ್ತಿರುವ ಈ ದಾಸೋಹದ ಅಧ್ಯಕ್ಷತೆ ವಹಿಸುತ್ತಿರುವುದು ನನ್ನ ಭಾಗ್ಯವಿಶೇಷ. .ಸಂಚಾಲಕ ಸಮಿತಿಗೆ ವಂದನೆಗಳು.

ಈ ಶುಭ ಸಂದರ್ಭದಲ್ಲಿ ಹಿರಿಯ ದಾಸೋಹಿ ಶ್ರೀ ಎನ್ ಶಂಕರರಾವ್ ಅವರ 'ಸರೂ' ಕೃತಿಯೂ ವಿಶಿಷ್ಟ ರೀತಿಯಲ್ಲಿ ಬಿಡುಗಡೆಯಾಗಿದೆ. ಲೇಖಕರಿಗೆ ಅಭಿನಂದನೆಗಳು. ಒಟ್ಟಾರೆಯಾಗಿ ಈ ದಾಸೋಹದಲ್ಲಿ ಹದಿನೆಂಟು ಲೇಖನಗಳು ಪ್ರಸ್ತುತಿಯಾದವು. ಅವುಗಳ ಬಗ್ಗೆ ನನ್ನ ಕಿರು ಅನಿಸಿಕೆ ಇಲ್ಲಿದೆ.

ಎನ್. ಶಂಕರ ರಾವ್ – 'ಸರೂ' ಕಥಾ ಸಂಕಲನ ಕೃತಿ ಬಿಡುಗಡೆ

ಹಿರಿಯ ದಾಸೋಹಿಗಳಾದ ಎನ್. ಶಂಕರರಾವ್ ಅವರ 'ಸರೂ' ಕೃತಿ ಈ ಸುಸಂದರ್ಭದಲ್ಲಿ ಲೋಕಾರ್ಪಣೆ ಯಾಗುತ್ತಿರುವುದು ಅತ್ಯಂತ ಸಂತಸದ ವಿಷಯ. ಕಾವ್ಯ, ಕಥಾರಚನೆ, ನಾಟಕ, ಕಿರುಚಿತ್ರ, ಸಮಾಜಸೇವೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ಹಾಗೂ ಕುಟುಂಬದ ಸದಸ್ಯರನ್ನು ತೊಡಗಿಸಿಕೊಂಡವರು ಶಂಕರ ರಾವ್ ಅವರು. ಸಂಕಲನದ ಪ್ರತಿ ನನಗೆ ನೀಡಿ ಸಹಕರಿಸಿದ್ದಾರೆ. ಬಿಡುವಿನಲ್ಲಿ ಓದಿ ಅಭಿಪ್ರಾಯ ತಿಳಿಸುತ್ತೇನೆ.

ಅರುಣ ಅವರು "ಕವಿಗೆ ಕವಿ ಮುನಿವಂ"ಎಂಬ ಮಾತನ್ನು ಸುಳ್ಳು ಮಾಡುವಂತೆ ಈ ಕೃತಿಯನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಸಹಸಾಹಿತಿಗಳ ಕೃತಿಯನ್ನು ತಿಳಿಸಾರು ಮಾದರಿಯಲ್ಲಿ ಅಂದರೆ ತಿಳಿದು ಸಾರುವ ಸ್ತುತ್ಯರ್ಹ ಕೆಲಸ ಮಾಡಿದ್ದಾರೆ. ಇದನ್ನು ಕಂಡಾಗ "ಸಾಹಿತಿಗೆ ಸಾಹಿತಿ ಒಲಿವಂ" ಎಂದು ತಿದ್ದಿ ಹೇಳುವ ಕಾಲ ಬಂದಿದೆ. ಅಭಿನಂದನೆಗಳು ಶಂಕರ ರಾವ್ ಹಾಗೂ ಅರುಣ ಅವರುಗಳಿಗೆ.

ಬೆಂ.ಶ್ರೀ.ರವೀಂದ್ರ ಅವರು ಎನ್.ಶಂಕರ ರಾವ್ ಅವರನ್ನು 'ಸರೂ' ಕೃತಿ ಬಿಡುಗಡೆ ಸಂದರ್ಭದಲ್ಲಿ ಸಮಯೋಚಿತವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ .ಪರಿಚಯಕಾರರಿಗೆ ಅಭಿನಂದನೆಗಳು

1. ವಿ ಎಸ್ ಇಜೇರಿ – 'ಕೃಷ್ಣನ ಬಾಲಲೀಲೆ ಕತೆಗಳು'

ಸೂರ್ಯನಡಿಯ ಎಲ್ಲ ವಿಷಯಗಳ ಬಗ್ಗೆ ಒಂದು ಆಪ್ತ ಭಾಷೆಯಲ್ಲಿ ನಿರೂಪಿಸುವ ಚಾತುರ್ಯ ಇಜೇರಿಯವರದ್ದು. ಈ ಲೇಖನದಲ್ಲಿ ಕೃಷ್ಣನ ಬಾಲಲೀಲೆಗಳ ಲೋಕಕ್ಕೆ ನಮ್ಮನ್ನು ಕರೆದೊಯ್ಯುತ್ತಾರೆ ಇಜೇರಿಯವರು. ತುಂಟತನದಿಂದ ಕೂಡಿದ ಇಲ್ಲಿನ ಸಂಭಾಷಣೆಗಳು ಮುದ ನೀಡುತ್ತವೆ. ಲೇಖಕರಿಗೆ ಅಭಿನಂದನೆಗಳು.

2. ಜಾನಕಿರಾಮ – 'ನಿನ್ನ ನೆನಪು' (ಕವನ)

ಜಾನಕಿರಾಮ ಎಂಬ ಕಾವ್ಯನಾಮದ ಸೀತಾರಾಮ ಕಟ್ಟಿ ಅವರ 'ನಿನ್ನ ನೆನಪು' ಎಂಬ ಸುಂದರ ಕವನದಲ್ಲಿ ಅಗಲಿಕೆಯ ನೋವನ್ನು ವಿವಿಧ ಪ್ರತಿಮೆಗಳ ಮೂಲಕ ವ್ಯಕ್ತಪಡಿಸುವ ಒಂದು ವಿಭಿನ್ನ ನೋಟವಿದೆ. ರಾತ್ರಿ ತಿಳಿಗಾಳಿ, ಹೂವು, ಸಮಯ ಹಾಗೂ ಪ್ರೇಮಿ ಈ ಎಲ್ಲ ಪ್ರತಿಮೆಗಳ ಮೂಲಕ ಕವಿ ತನ್ನ ತಹತಹವನ್ನು ವ್ಯಕ್ತಪಡಿಸುತ್ತಾರೆ.

'ನಿನ್ನ ನೆನಪಿಸುತಿರುವ ರಾತ್ರಿಗಿದು ಪ್ರಶ್ನೆಯಿದೆ
ಏಕಾಂಗಿತನವನೇಕೆ ಹೊತ್ತು ತರುವೆ
ರಕ್ತಸೋರುತಿದೆ ಮೊದಲೇ
ಹೃದಯದ ಕವಾಟದಲಿ
ಮತ್ತೆ ನೀನೇಕೆ ಸರಿ ಹಿಂಡಿ ಕೊಲುವೆ'

ಈ ನುಡಿಯನ್ನು ನಾಲ್ಕು ಸಾಲಿಗೆ ಪುನರ್ರೂಪಿಸಿ ಏಕರೂಪತೆ ತರಬಹುದು. ಹಾಗೆಯೂ ಕವಿತೆ ಲಯಬದ್ಧವಾಗಿದೆ. ಕನ್ನಡ ಕಾವ್ಯಲೋಕದ ಭವಿಷ್ಯದ ಆಸರೆ ಸೀತಾರಾಮ ಕಟ್ಟಿಯವರು. ಶುಭಾಶಯಗಳು.

3. ರೇಣುಕಾ ದೇಸಾಯಿ – 'ಬಡ್ಡಿ ಮಕ್ಕಳಲ್ಲ' (ಕವನ).

ಈ ವೇದಿಕೆಯ ಉತ್ಸಾಹದ ಚಿಲುಮೆ ರೇಣುಕಾ ದೇಸಾಯಿಯವರು. ಬ್ಯಾಂಕಿನವರ ಬಗ್ಗೆ ಸೊಗಸಾದ ಕವನ ರಚಿಸಿ ವಾಚಿಸಿದ್ದಾರೆ. ಇತ್ತೀಚೆಗೆ ಸಂತರೊಬ್ಬರು ಅಪರಿಗ್ರಹ ಹಾಗೂ ಅಸಂಗ್ರಹವನ್ನು ವಿವರಿಸಲು ಬ್ಯಾಂಕ್ ಕ್ಯಾಶಿಯರಿನ ಉದಾಹರಣೆ ನೀಡಿದ್ದಾರೆ. ಕೋಟಿ ಹಣ ಎದುರಿದ್ದರೂ ಒಂದು ಪೈಸೆಯೂ ಅವನದಲ್ಲ/ಅವಳದಲ್ಲ.

"ಅವಳೊಂದಿಗಿನ ಒಡನಾಟ ತಂದಿತು ಸಕಲ ಭಾಗ್ಯ
ಮದುವೆ ಆಯಿತು ಸುಲಭದಲಿ ದಕ್ಕಿದರು ಸಂಗಾತಿ
ಅವರಲಿ ಇರದ ಮೋಹ ಈ ಧನಲಕ್ಷ್ಮಿಯ ಪಾಲನೆಯಲಿ
ಸಮಯವು ಸಿಗದು ಸಂಗಾತಿಯಾನುನಯಿಸಲು"

ಈ ನುಡಿಯಲ್ಲಿ ಹಾಗೂ ಕೊನೆಯ ನುಡಿಗಳಲ್ಲಿ ಲಯ ಏಕರೂಪವಾಗಿಲ್ಲ. ತಿದ್ದುಪಡಿಗೆ ಅವಕಾಶವಿದೆ. ಅಭಿನಂದನೆಗಳು ರೇಣುಕಾ.

4. ಗಣಪತಿ ಹೆಗಡೆ – 'ಯತಿ'

ಈ ವೇದಿಕೆಯ ಬಹುಶಿಸ್ತೀಯ ವಿಷಯಗಳ ಲೇಖಕರು. ಕಾವ್ಯ, ಕಥೆ, ಕಾದಂಬರಿ, ವೈಚಾರಿಕ ಪ್ರಬಂಧ, ಹಾಸ್ಯ ಪ್ರಬಂಧ, ಛಂದಶ್ಶಾಸ್ತ್ರ, ಯಕ್ಷಗಾನ, ಎಲ್ಲೆಡೆ ಅವರ ಆಸಕ್ತಿಯ ಟಿಸಿಲು ಚಾಚಿದೆ. ಅವರ ಆಕರ್ಷಕವಾಗಿ ಪ್ರಸ್ತುತಪಡಿಸುವ ಕಲೆಯೂ ಅನನ್ಯ. ಈ ಬಾರಿ ಅವರ ಕಣ್ಣು "ಯತಿ"ಗಳ ಮೇಲೆ ಬಿದ್ದಿದೆ.

ಗದ್ಯ ಪದ್ಯಗಳ ಅಂತರವನ್ನು ಗುರುತಿಸುವ ಕ್ರಮ, ಕಾವ್ಯದಲ್ಲಿ ಬಂಧದ ಅಗತ್ಯ, ಯತಿ ಎಂದರೆ ಏನು? ಅದರ ಬಳಕೆ ಹೇಗೆ? ಎಂಬೆಲ್ಲ ಉಪಯುಕ್ತ ವಿಷಯಗಳನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ನವ್ಯಕಾವ್ಯದಲ್ಲಿ ಯತಿಯ ಬಳಕೆ ಯಥೇಚ್ಛವಾಗಿದೆ ಎಂಬ ಅವರ ಪ್ರತಿಪಾದನೆ ಕುತೂಹಲ ಮೂಡಿಸುತ್ತದೆ.

ಅಭಿನಂದನೆಗಳು ಗಣಪತಿ ಹೆಗಡೆಯವರೆ. ವ್ಯಾಕರಣ ಕುರಿತ ನಿಮ್ಮ ಪ್ರವೇಶಿಕೆ ಕೃತಿ ಬೇಗ ಹೊರಬರಲಿ.

5. ಕಮಲಾಕ್ಷಿ ಸಿ ಆರ್ – 'ಈಳಿಗೆಗೆ ಇಲ್ಲ ಏಳಿಗೆ'

ಇದು ಈಗ ಮೂಲೆಗುಂಪಾಗುತ್ತಿರುವ ಹಳೆಯ ವಸ್ತುಗಳ ಬಗ್ಗೆ ರೋಧಿಸುವ ಕಾಲ ಎನ್ನಿಸುತ್ತದೆ. ಆ ಸಾಲಿಗೆ ಈಳಿಗೆ ಮಣೆಯೂ ಸೇರುತ್ತಿದೆ ಎಂಬ ವಿಷಾದಕರ ವಿಷಯವನ್ನು ಕಮಲಾಕ್ಷಿಯವರು ತಮ್ಮ ಲಲಿತ ಪ್ರಬಂಧದಲ್ಲಿ ವಿನೋದಕರವಾಗಿ ಪ್ರತಿಪಾದಿಸಿದ್ದಾರೆ. ಬಗೆಬಗೆಯ ಈಳಿಗೆಮಣೆಗಳ ವರ್ಣನೆ, ಅದರ ಉಪಯುಕ್ತತೆ, ವರ್ಣನೆ ನಮ್ಮನ್ನು ಹಳೆಯ ಕಾಲದ ಜಾತ್ರೆಗೋ, ಮದುವೆಮನೆಯ ಪಾಕಶಾಲೆಗೋ ನೇರವಾಗಿ ಕೊಡೊಯ್ಯುತ್ತದೆ. ಉಬ್ಬುಹಲ್ಲಿನ ನತದೃಷ್ಟರಿಗೆ ಈಳಿಗೆ ಮಣೆ (ತುರಿಯೋ ಮಣೆ)ಎಂದೇ ಲೇವಡಿ ಮಾಡುವುದರ ಪ್ರಸ್ತಾಪವಿದೆ. ಗೊರೂರರ "ಹೇಮಾವತಿ" ಕಾದಂಬರಿಯಲ್ಲಿ ಉಬ್ಬುಹಲ್ಲಿನ ಕಿರಿಕಿರಿಯ ಮುದುಕಿಯ ಪಾತ್ರವನ್ನು ಲೇಖಕರು ಈಳಿಗೆಮಣೆ ಎಂದೇ ಹೆಸರಿಸಿದ್ದಾರೆ. ಒಂದಿಷ್ಟು ಸಾಹಿತ್ಯ ಸ್ಪರ್ಶವೂ ಬೆರೆತರೆ ಇದೊಂದು ಉತ್ತಮ ಲಲಿತ ಪ್ರಬಂಧವಾಗುತ್ತದೆ. ಕಮಲಾಕ್ಷಿಯವರಿಗೆ ಅಭಿನಂದನೆಗಳು.

6. ಶೀಲಾ ಅರಕಲಗೂಡು – 'ಗೀತಾ, ಆಹಾ! ಸಂಗೀತ'

ಗೀತಾ, ಆಹಾ! ಸಂಗೀತ. ಕತೆಯ ಶೈಲಿಯನ್ನು ಹೊಂದಿರುವ ಒಂದು ಹಾಸ್ಯ ಪ್ರಬಂಧ. ಅಲ್ಲಲ್ಲಿ ವಿಡಂಬನೆ ಇಣುಕಿದೆ. ಪರಿಶ್ರಮದಿಂದ ಕೊರತೆಯನ್ನು ಮೆಟ್ಟಿ ಗೆಲ್ಲಬಹುದು ಎನ್ನುವುದಕ್ಕೆ ಸಂಗೀತಲೋಕದಲ್ಲೇ ಹಲವು ಉದಾಹರಣೆಗಳಿವೆ. ಕೊನೆಯ ಪ್ಯಾರಾದಲ್ಲಿ ಓದಿನ ಕಡೆ ಗಮನ ಹರಿಸಲು ಸಂಗೀತ ಕಲಿಕೆಯನ್ನು ಮುಂದೂಡಿದಳು ಎಂದು ಇತ್ಯಾತ್ಮಕವಾಗಿ ಬದಲಿಸಬಹುದು ಎನ್ನಿಸುತ್ತದೆ. ಅಭಿನಂದನೆಗಳು ಶೀಲಾ ಅರಕಲಗೂಡು ಅವರಿಗೆ.

7. ಎಲ್. ಗಿರಿಜಾರಾಜ್ – 'ಶಿಕ್ಷಣ ಮತ್ತು ಅದರ ಧ್ಯೇಯೋದ್ದೇಶಗಳು'

ಎಲ್.ಗಿರಿಜಾರಾಜ್ ಅವರು 'ಶಿಕ್ಷಣ ಮತ್ತು ಅದರ ಧ್ಯೇಯೋದ್ದೇಶಗಳು' ಎಂಬ ಹೆಸರಿನ ತಮ್ಮ ವೈಚಾರಿಕ ಲೇಖನದಲ್ಲಿ ಶಿಕ್ಷಣ ಕುರಿತಂತೆ ಹಲವು ಮಹನೀಯರ, ಸಾಧಕರ ಚಿಂತನೆಗಳ ಬೆಳಕಿನಲ್ಲಿ ಚರ್ಚಿಸುತ್ತಾರೆ. "ಸ್ವದೇಶೇ ಪೂಜ್ಯತೆ ರಾಜಾ", 'ವಿದ್ಯಾ ದದಾತಿ ವಿನಯಂ" ಮುಂತಾದ ಸೂಕ್ತಿಗಳು ಅವರ ವಾದಕ್ಕೆ ಸಮರ್ಥ ನಿದರ್ಶನಗಳಾಗಿವೆ. ಆದರೆ ಉನ್ನತ ಶಿಕ್ಷಣ ರಂಗದ ಅಸ್ತವ್ಯಸ್ತತೆಗಳ ಬಗ್ಗೆ ಹೆಚ್ಚು ಚರ್ಚೆಯಾದರೆ ಲೇಖನ ಪರಿಪೂರ್ಣವಾಗಬಲ್ಲುದು. ಎನ್ನಿಸುತ್ತದೆ. ಲೇಖಕರಿಗೆ ಅಭಿನಂದನೆ.

8. ಮಾಧುರಿ ಕೃಷ್ಣ – 'ನಾನೂ ಮತ್ತು ನನ್ನ ಮಿತ್ರನೂ' ಲೇಖನ ಮಾಲೆ

ಮಾಧುರಿ ಕೃಷ್ಣ ಅವರು ಅಂದಿನ ಗಗನ ಅರಸಿ ಹೋಗಿ ಹಳೆಯ ನೆನಪುಗಳನ್ನು ಕೆದಕುತ್ತ ಉಲ್ಲಸಿತಗೊಳ್ಳುವ, ಹೃದಯಸ್ಪರ್ಶಿ ಲೇಖನ ಸರಣಿಯ ಮುಂದುವರೆದ ಭಾಗವಾಗಿ ಈ ಲೇಖನ ಬರೆದಿದ್ದಾರೆ. ಈಬಾರಿ ಮಿತ್ರ ಅಂದು ತನ್ನಿಂದ ಘಟಿಸಿದ ತಪ್ಪಿಗೆ ಕ್ಷಮೆ ಬೇಡುವಿಕೆ, ಕ್ಷಮಿಸುವಲ್ಲಿ ನೊಂದವಳ ತಾಕಲಾಟ ಎಲ್ಲ ವಿನೂತನ. ಮಾಧುರಿ ಯವರು ಓದುವ ಶೈಲಿಯೂ ಆಕರ್ಷಕ. ಲೇಖನ ಸರಣಿ ಮುಂದುವರೆಯಲಿ, ಪುಸ್ತಕರೂಪದಲ್ಲಿ ಬೆಳಕು ಕಾಣಲಿ.

9. ರಾಧಿಕಾ ವಿ ಗುಜ್ಜರ್ – 'ಚಕ್ಕಡಿ ಎಂಬ ಸುಭಗ' (ಕವನ)

ರಾಧಿಕಾ ವಿ.ಗುಜ್ಜರ್ ಅವರು "ಚಕ್ಕಡಿ ಎಂಬ ಸುಭಗ" ಎನ್ನುವ ತಮ್ಮ ಕವನವನ್ನು

"ದಣಿದ ಗೃಹಿಣಿಯೋರ್ವಳ ವಿಶ್ರಾಂತ ಭಂಗಿಯಂತೆ
ಗೋಡೆಗೊರಗಿ ಕಾಲು ನೀಡಿ ಕುಳಿತಿದೆ ಚಕ್ಕಡಿ"

ಎಂಬ ವಿಭಿನ್ನ ಉಪಮೆಯೊಂದಿಗೆ ಆರಂಭಿಸುತ್ತಾರೆ. ಬಿಡುವಿನ ಕಾಲದಲ್ಲಿ ಅದರ ಉಪಯುಕ್ತತೆ, ಸುಗ್ಗಿ, ಬಿತ್ತನೆ ಎಲ್ಲ ವಿವರಿಸುತ್ತ ಹೆಚ್ಚೂ ಕಡಿಮೆ ರೈತನಿಗೆ ಎತ್ತಿನಷ್ಟೇ ಉಪಯುಕ್ತ ಎಂದು ಪ್ರತಿಪಾದಿಸುತ್ತಾರೆ. ಇಡೀ ಕವನದಲ್ಲಿ ಚಕ್ಕಡಿ ಎನ್ನುವುದು ರೂಪಕವಾಗಿ ಚಲಿಸಿದೆ. ಹೀಗೆ ಒಂದು ವಸ್ತುವನ್ನು ಕವನದಾದ್ಯಂತ ರೂಪಕವಾಗಿ ದುಡಿಸಿಕೊಳ್ಳುವ ಶಕ್ತಿ ರಾಧಿಕಾಗೆ ಅನನ್ಯವಾದುದು. ಅಭಿನಂದನೆಗಳು ರಾಧಿಕಾ ನಿಮ್ಮ ಕವನ ಸಂಕಲನಕ್ಕಾಗಿ ಕಾಯುತ್ತಿದ್ದೇವೆ.

10. ನಿರ್ಮಲ ಜಿ.ವಿ – 'ಅಡುಗೆಮನೆ ಅವಾಂತರಗಳು'

ನಿರ್ಮಲ ಜಿ.ವಿ. ಅವರು ತಮ್ಮ "ಅಡುಗೆಮನೆ ಅವಾಂತರಗಳು"ಎಂಬ ಪ್ರಬಂಧದಲ್ಲಿ ಯಾರ ಮನೆಯಲ್ಲಾದ್ರೂ, ಯಾವ್ದೇ ಆಫೀಸಲ್ಲಾದ್ರೂ ಅಡುಗೆಮನೆ ಅತಿ ಚಟುವಟಿಕೆಯ ಕೇಂದ್ರ. ಎಂದು ಆರಂಭಿಸಿ ಆಫೀಸು, ಫ್ಯಾಕ್ಟರಿಗಳಲ್ಲಿ ಯಾವ ವಿಭಾಗದಲ್ಲೇ ಆಗಲಿ ಕ್ಯಾಂಟೀನ್ ಮುಖ್ಯ ಎಂಬೆಲ್ಲ ಮಾಹಿತಿಗಳನ್ನು ತಾರ್ಕಿಕವಾಗಿ ಹಾಸ್ಯ ಬೆರೆಸಿ ವಿವರಿಸಿದ್ದಾರೆ. ಕವಿಯೇ ಹೇಳಿದ್ದಾರಲ್ಲ "ಅನ್ನದೇವರಿಗಿಂತ ಇನ್ನು ದೇವರು ಇಲ್ಲ' ಎಂದು.

ಗಂಡಸರಿಗೆ ಅಡುಗೆ ಮಾಡಲು ನೀಡಲು ಸೂಚನೆಗಳು ತರುವ ಅವಾಂತರಗಳನ್ನೂ ಲೇಖಕಿ ಚರ್ಚಿಸದೆ ಬಿಟ್ಟಿಲ್ಲ. ಸೊಗಸಾದ ಹರಟೆಗಾಗಿ ನಿರ್ಮಲಾ ಅವರಿಗೆ ಅಭಿನಂದನೆಗಳು.

11. ಗುರುಪ್ರಸಾದ್ ಹಾಲ್ಕುರಿಕೆ – 'ಪ್ರಾ.ಎಚ್ಚೆಸ್ಕೆ – ಒಂದು ನೆನಪು'

ನಮ್ಮ ವೇದಿಕೆಗಳ ಗುಪ್ತಗಾಮಿನಿ ಆದರೆ ಚಲನಶೀಲ ವ್ಯಕ್ತಿತ್ವ ಗುರು ಅವರದ್ದು. ಎಚ್ಚೆಸ್ಕೆಯವರ 104ನೆಯ ಜನ್ಮದಿನದ ಸಂದರ್ಭದಲ್ಲಿ ಅವರ 'ತುಳಸೀ ಬಿಲ್ವ' ಕೃತಿಯ ಹಲವು ವೈಚಾರಿಕ ಲೇಖನಗಳನ್ನು ಆಯ್ದು ಪರಿಚಯಿದ್ದಾರೆ. ಸಂಸ್ಕೃತಿ, ಭಾಷಾ ಸಮಸ್ಯೆ, ಏಕೀಕರಣ, ಬ್ಯಾಂಕು ಹಾಗೂ ಭಾಷೆ, ಪತ್ರಕರ್ತರಾಗಿ ಗಾಂಧಿ ಗಾಂಧಿ, ಅಬ್ಬಾ ಎಷ್ಟೊಂದು ವೈವಿಧ್ಯ ಪ್ರಾಚಾರ್ಯ ಬರಹಗಳಲ್ಲಿ! ವಾಚನವೂ ಅರ್ಥಪೂರ್ಣವಾಗಿದೆ. ಸಮರ್ಥ ನುಡಿನಮನಕ್ಕಾಗಿ ಗುಹಾ ಅವರಿಗೆ ಅಭಿನಂದನೆಗಳು.

12. ವಿಜಯ ಕುಮಾರ್ ಸುರತ್ಕಲ್ – 'ಉಯಿಲು' (ಅನುವಾದಿತ ಕವನ)

ವಿಜಯಕುಮಾರ್ ಸುರತ್ಕಲ್ ಅವರು ಕನ್ನಡಕ್ಕೆ ಅನುವಾದಿಸಿರುವ ಅಮೃತಾ ಪ್ರೀತಮ್ ಅವರ 'ಉಯಿಲು' ಕವನ ಹೃದಯಸ್ಪರ್ಶಿಯಾಗಿದೆ. ಮೂಲ ಇಂಗ್ಲಿಷಿನ ಕವನ ದೊರಕಲಿಲ್ಲವೆಂದು ಲೇಖಕರು ತಿಳಿಸಿದ್ದಾರೆ. ಮೂಲದ ಹಂಗಿಲ್ಲದೆ ಸಂವಹನ ಮಾಡುತ್ತ ಹೋಗುತ್ತದೆ ಸುರತ್ಕಲ್ ಅವರ ಅನುವಾದ.

"ನನ್ನ ಗೌರವ ಮತ್ತು ಖ್ಯಾತಿ
ಆ ದೇಹ ಮಾರುತ್ತಿರುವ
ಅಸಹಾಯಕ ಹೆಂಗಳೆಯರಿಗೇ ಮೀಸಲು.
ಅವರ ಹೆಣ್ಣು ಮಕ್ಕಳಾದರೂ
ವಿದ್ಯೆ ಪಡೆದು, ಬಾಳಲಿ ಈ ಸಮಾಜದಲ್ಲಿ ಗೌರವದಿಂದ." ಎಂಬ ಸಾಲುಗಳಂತೂ ಮನ ಕಲಕುತ್ತವೆ.

ಅಭಿನಂದನೆಗಳು ಬಹುಕಾಲದ ಆತ್ಮೀಯ ಮಿತ್ರ ವಿಜಯಕುಮಾರ್ ಪ್ರತಿ ಬಾರಿಯೂ ಭಾಗವಹಿಸಿ.ನಮಗೆ ಸಂತಸ ನೀಡಲಿ.

13. ಅನ್ನಪೂರ್ಣ ಸುಬ್ಬರಾವ್ – 'ಮೂಕ ಹಕ್ಕಿ' (ಕವನ)

ಅನ್ನಪೂರ್ಣ ಸುಬ್ಬರಾವ್ ಅವರು 'ಮೂಕಹಕ್ಕಿ' ಕವನವನ್ನು ಲಯಬದ್ಧವಾಗಿ ಹೆಣೆದಿದ್ದಾರೆ. ಮೂಕಹಕ್ಕಿಯೆಂಬುದು ಕವಯಿತ್ರಿಗೆ ವಿರಹಿಯ ಸಂಕೇತವಾಗಿದೆ.

"ಆಸರೆಯು ಬೇಕಿಹುದು ಇಂದಾದರೊಂದು ದಿನ
ಬೇಸರವ ಸರಿಸಿ ತಿಳಿಗೊಳಿಸು ಮನವನ್ನ
ನೇಸರನು ಸರಿದು ಮಬ್ಬು ಮುಸುಕುವ ಮುನ್ನ
ನೂಪುರದ ಸದ್ದೂ ಅಣಕವಾಡುವುದೆನ್ನ..."

ಇಂಥ ಸಾಲುಗಳು ಕವಿತೆಯನ್ನು ಭಾವಗೀತೆಯಾಗಿಸಿದೆ. ಅಭಿನಂದನೆಗಳು ಅನ್ನಪೂರ್ಣ ಅವರೆ.

14. ಹು.ವಾ. ಶ್ರೀಪ್ರಕಾಶ್ – 'ಮೊಮ್ಮಗಳು ಕಲಿಸಿದ ಪಾಠ'

ವೇದಿಕೆಯ ಭಾವಜೀವಿ ಕವಿ ಶ್ರೀಪ್ರಕಾಶರು ಗದ್ಯದಲ್ಲೂ ಚತುರರೇ.ತಮ್ಮ ಇಂದಿನ ಪ್ರಸ್ತುತಿಯಲ್ಲಿ ಅವರು ಕೆನಡಾದಿಂದ ಬಂದಿರುವ ತಮ್ಮ ಮೊಮ್ಮಗಳ ಜತೆಗಿನ ಸಾಹಚರ್ಯವನ್ನು ಪ್ರಬಂಧವನ್ನಾಗಿ ಬಹು ಸೊಗಸಾಗಿ ದಾಖಲಿಸಿದ್ದಾರೆ. ಮೊಮ್ಮಗಳು ಅಜ್ಜನಿಗೇ ಧೈರ್ಯ ತುಂಬುವುದು, ಅನಗತ್ಯ ಗದ್ದಲ, ಚೀರಾಟಗಳಿಗೆ ಬೇಸರಿಕೊಳ್ಳುವುದು ಎಲ್ಲಾ ಸೊಗಸಾಗಿ ಚಿತ್ರಣಗೊಂಡಿದೆ. ಉತ್ತಮ ಪ್ರಬಂಧ ಅಭಿನಂದನೆಗಳು.

15. ಪೋಲೇನಹಳ್ಳಿ ರಮೇಶ್ – 'ಯಾವುದು ಸರಿ?'

ಪೋಲೇನಹಳ್ಳಿ ರಮೇಶ್ ಅವರು ತಮ್ಮ "ಯಾವುದು ಸರಿ?" ಎಂಬ ಲೇಖನದಲ್ಲಿ ಇಂಗ್ಲೆಂಡ್ ಜನರ ಹಾಗೂ ಭಾರತೀಯರ ವರ್ತನೆಗಳನ್ನೂ ಮನೋಭಾವಗಳನ್ನೂ ಹೋಲಿಸಿ ಚಿಂತಿಸಿದ್ದಾರೆ. ನಮ್ಮ ಸ್ವೇಚ್ಛೆ, ಅಶಿಸ್ತು ಅವರ ಅತಿ ಶಿಸ್ತು ಎರಡನ್ನು ತುಲನಾತ್ಮಕವಾಗಿ ಪ್ರತಿಪಾದಿಸಿದ್ದಾರೆ.

ರಮೇಶ್ ಅವರು ಇಂಗ್ಲೆಂಡಿನಲ್ಲಿದ್ದ ವೇಳೆಯಲ್ಲೇ ನಾನೂ ಲಂಡನ್‌ಗೆ ಹೋಗಿದ್ದೆ. ಆದರೆ ಸಮಯಾಭಾವದಿಂದ ಅವರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ಆ ಜನರ ಶುಚಿತ್ವ, ಶಿಸ್ತು ಹಾಗೂ ಅಪರಿಗ್ರಹ ಸ್ವಭಾವವನ್ನು ನಾವು ಸ್ವಲ್ಪವಾದರೂ ಅನುಕರಿಸಬಹುದೇನೋ. ಅಭಿನಂದನೆಗಳು ರಮೇಶ್ ಅವರಿಗೆ.

16. ಶ್ರೀಧರ ಬಾಣಾವರ – 'ಗೊರೂರರ ನಮ್ಮ ಊರಿನ ರಸಿಕರು ಒಂದು ಮರು ಓದು'

ಕನ್ನಡದ ಅಪ್ಪಟ ಹಾಸ್ಯಲೇಖಕ, ಗಾಂಧಿವಾದಿ ಗೊರೂರರ "ನಮ್ಮ ಊರಿನ ರಸಿಕರು" ಕೃತಿಯನ್ನು ಶ್ರೀಧರ ಬಾಣಾವರ ಅವರು ವಿವರವಾಗಿ ಪರಿಚಯಿಸಿದ್ದಾರೆ. ತಾವು ಬರೆದ ಕೃತಿಯನ್ನು ತಾವೇ ವಿದ್ಯಾರ್ಥಿಯಾಗಿ ಓದಿದ ಪ್ರಸಂಗ ಸ್ವಾರಸ್ಯಕರ. ಶಾಲುಸಾಬಿ. ಶೀನಪ್ಪ, ಮಣೆಗಾರರು ಮುಂತಾದ ಪಾತ್ರಗಳು, ಸನ್ನಿವೇಶಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಶ್ರೀಧರ ಅವರ ಕೃತಿ ಪರಿಚಯ ಹಲವಾರು ವಿವರಗಳನ್ನು ಒಳಗೊಂಡು ಕೃತಿಯ ಓದು, ಮರುಓದುಗಳಿಗೆ ಪ್ರೋತ್ಸಾಹಿಸುವಂತಿದೆ. ನಿಮ್ಮಿಂದ ಗೊರೂರರ ಸಮಗ್ರ ಕೃತಿಗಳ ಪರಿಚಯ ನಮಗೆ ಲಭಿಸಲಿ.

17. ಶಾಂತಿ ವಾಸು – 'ಭಾರತಾಂಬೆಗೊಂದು ಪತ್ರ' (ಕವನ)

ಶಾಂತಿ ವಾಸು ಅವರು "ಭಾರತಾಂಬೆಗೊಂದು ಪತ್ರ" ಕವನವನ್ನು ಆರಂಭಿಸುವ ರೀತಿಯೇ ಆಕರ್ಷಕ.

"ಅಮ್ಮ ಓ ಅಮ್ಮ, ಫಲವತ್ತಾದ
ಮುಷ್ಟಿ ಮಣ್ಣು ಬೇಕಾಗಿದೆ...
ಎಲ್ಲೈ ಧಾರಿಣಿಯೇ
ಹುಟ್ಟಿಸೆಂದು ಮಾತ್ರ ಹೇಳದಿರು..."

ಮನುಷ್ಯ ಏನನ್ನೂ ಸೃಷ್ಟಿಸಲಾರ. ಮುಂದಿನ ಪರಂಪರೆಗೆ ಏನನ್ನೂ ಉಳಿಸಿಡಲಾರ ಎಂಬ ಕವಯಿತ್ರಿಯ ಚಿಂತನೆ ವಿಭಿನ್ನವಾಗಿದೆ. ಬಿಗಿಬಂಧವೂ ಇದ್ದಿದ್ದರೆ ಮತ್ತಷ್ಟು ಶಕ್ತ ಕವನವಾಗುತ್ತಿತ್ತು ಎನಿಸುತ್ತದೆ. ಅಭಿನಂದನೆಗಳು ಶಾಂತಿ ವಾಸು ಅವರಿಗೆ.

18. ಟಿ.ಎಸ್. ಶ್ರವಣ ಕುಮಾರಿ – 'ಅಲ್ಲ ಇಲ್ಲ ಕಾಣುವ ಕೇಳುವ ಕುಹೂ ಕುಹೂ'

ವೇದಿಕೆಯ ಸಶಕ್ತ ಕತೆಗಾರ್ತಿ ಶ್ರವಣ ಕುಮಾರಿಯವರು ತಮ್ಮ ರುಗ್ಣಾಲಯ ವಾಸದ ಕ್ಲೇಶಕರವಾದ ಹಾಗೂ ಸಂಕಟ ಕರವಾದ ಅನುಭವಗಳನ್ನು ನಿರ್ಲಿಪ್ತವಾಗಿ ಕಳೆದ ಮೂರ್ನಾಲ್ಕು ದಾಸೋಹಗಳಿಂದ ತಮ್ಮ ಎಂದಿನ ಆತ್ಮ ವಿಡಂಬನಾ ಶೈಲಿಯಲ್ಲಿ ನಮ್ಮ ಮುಂದಿಡುತ್ತ ಬಂದಿದ್ದಾರೆ. ಈಬಾರಿ ಅವರ ಆಯ್ಕೆ ಆಸ್ಪತ್ರೆಯ ಪುರುಷ ಹಾಗೂ ಮಹಿಳಾ ಸಿಬ್ಬಂದಿಗಳ ನಡುವಿನ ಆಕರ್ಷಣೆ(ಕ್ರಷ್). ಪರಸ್ಪರ ಕಷ್ಟ ಸುಖ ವಿಚಾರಿಸುತ್ತ, ತಿನಿಸುಗಳನ್ನು ಹಂಚಿಕೊಂಡು ಸೇವಿಸಿ ಆನಂದಿಸುತ್ತ ಹೋಗುವ ಪರಿ ಸೊಗಸಾಗಿ ಚಿತ್ರಿತವಾಗಿದೆ. ಇಂಥ ಸ್ನೇಹ, ಅರಿವು ಒಂದು ಕಾಲದಲ್ಲಿ ನಮ್ಮ ಬ್ಯಾಂಕುಗಳು ಹಾಗೂ ಇತರ ಸಂಸ್ಥೆಗಳಲ್ಲೂ ಇದ್ದದ್ದೇ. ವಾಚನವೂ ಎಂದಿನಂತೆ ನಾಟಕೀಯ. ಅಭಿನಂದನೆಗಳು ಶ್ರವಣ ಕುಮಾರಿಯವರಿಗೆ.

ಇದಿಷ್ಟು ದಾಸೋಹದಲ್ಲಿ ಪ್ರಸ್ತುತಿಯಾದ ಲೇಖನಗಳ ಬಗ್ಗೆ, ನನ್ನ ಅರಿವಿನ ಮಿತಿಯಲ್ಲಿ, ತಿಳಿಸಿರುವ ನನ್ನ ಅನಿಸಿಕೆಗಳು.

ವಿದಾಯದ ವಂದನೆಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 216 ನಡೆದ ದಿನಾಂಕ: 26 ಆಗಸ್ಟ್ 2023
ಸಂಚಿಕೆಯ ಬಿಡುಗಡೆ ದಿನಾಂಕ: 23 ಸೆಪ್ಟೆಂಬರ್ 2023 – ಶನಿವಾರ

